ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
Literature Culture Research Quarterly journal
ISSN: 2320-9941

# PRATHISPANDA

An exchange of creative impulse

# ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

ಸಂಪಾದಕರು ಡಾ. ಸರಸ್ವತಿ ಕೆ. ಬಿ.

ಸಂಪುಟ: 08 ● ಸಂಚಿಕೆ 01 ● ಜನವರಿ – ಮಾರ್ಚ್ 2024
VOLUME: 08 ● ISSUE: 01 ● January - March 2024

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
**Literature Culture Research Quarterly journal**
**ISSN: 2320-9941**

# PRATHISPANDA

An exchange of creative impulse

# ಪ್ರತಿಸ್ಪಂದ

**ಕೊಡು–ಕೊಳ್ಳುವಿಕೆಯ ಸಂಕರ**

**ಸಂಪುಟ: 08 ● ಸಂಚಿಕೆ 01 ● ಜನವರಿ – ಮಾರ್ಚ್ 2024**
VOLUME: 08 ● ISSUE: 01 ● January -March 2024

**ಗೌರವ ಸಂಪಾದಕರು**
**ಕೆ. ಆರ್. ಬಸವರಾಜು**

**ಸಂಪಾದಕರು**
**ಡಾ. ಸರಸ್ವತಿ ಕೆ. ಬಿ**

**ಪ್ರಕಟಣೆ**
**ಪ್ರತಿಸ್ಪಂದ** ಸಾಹಿತ್ಯ, ಸಂಸ್ಕೃತಿ – ಸಂಶೋಧನಾ
ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25),
ಕಂಚಾಘಟ್ಟ ಹೊಸ ಬಡಾವಣೆ, ತಿಪಟೂರು 572201
e-mail: prathispandha@gmail.com
wibsite : https://prathispandha.wordpress.com/

## ತಜ್ಞ ಪರಿಶೀಲನ ಸಮಿತಿ • PEER REVIEW COMMITTEE


**ಡಾ. ಸರಸ್ವತಿ ಕೆ. ಬಿ.**
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
ತುಮಕೂರು ಜಿಲ್ಲೆ, ಕರ್ನಾಟಕ

**Dr. Saraswati K. B.**
Associate Professor, English Department
Govt. First Grade College, Tipatur
Tumkur District, Karnataka

**ಡಾ. ದತ್ತಾತ್ರೆಯ ಎಂ**
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ,
ಕರ್ನಾಟಕ

**Dr. Dattatreya M.**
Associate Professor, English Department
Kuvempu University, Jnanasahyadri,
Shankaraghatta, Shivamogga Dist,
Karnataka

**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

**Dr. M. Rangaswamy**
Assistant Professor, Kannada Department
University Of Madras, Chenni, Tamil Nadu.

**ಡಾ. ಜ್ಯೋತಿ ಕೆ. ಬಿ.**
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ವಾಯತ್ತ,
ಗುಬ್ಬಿ, ತುಮಕೂರು ಜಿಲ್ಲೆ, ಕರ್ನಾಟಕ

**Dr. Jyoti K. B.**
Associate Professor, English Department
Govt. First Grade College Autonomous,
Gubbi, Tumkur District, Karnataka

**ಡಾ. ಗೋವಿಂದರಾಯ ಎಂ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್
ತುಮಕೂರು ಜಿಲ್ಲೆ, ಕರ್ನಾಟಕ

**Dr. Govindaraya M.**
Assistant Professor, Kannada Department
Govt. First Grade College, Kunigal
Tumkur District, Karnataka

## ತಜ್ಞ ಪರಿಶೀಲನ ಸಮಿತಿ ● PEER REVIEW COMMITTEE


**ಪ್ರೊ. ಅನಿತ ಕೆ. ವಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ,
ವಸಂತನಗರ, ಬೆಂಗಳೂರು, ಕರ್ನಾಟಕ

**Pro. Anitha K. V.**
Assistant Professor, Kannada Department
Mount Carmel College Autonomous,
Vasanta, Bengaluru, Karnataka

**ಡಾ. ರವಿಶಂಕರ್ ಎ. ಕೆ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಕೆ. ನಾರಾಯಣಪುರ, ಬೆಂಗಳೂರು, ಕರ್ನಾಟಕ

**Dr. Ravishankar A. K.**
Assistant Professor, Kannada Department
Kristu Jayanti College Autonomous,
K. Narayanapura, Bengaluru, Karnataka

**ಸಿದ್ಧರಾಮಯ್ಯ ಡಿ. ಎಂ**
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

**Siddaramaiah D. M**
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

**ರಾಮು ಟಿ. ಡಿ.**
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

**Ramu T. D**
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ತಾಂತ್ರಿಕ ಸಹಕಾರ
**ಪೃಥ್ವಿ ಸೂರಿ**
ವಕೀಲರು, ಚಿಕ್ಕಮಗಳೂರು.

ISSN: 2320-9941


# ಸಂಪಾದಕೀಯ...

"In three words I can sum up everything I've learned about life: it goes on" - Robert Frost

ಕೆಲವು ಪದಗಳು ಅರ್ಥಗಳನ್ನು ಉಕ್ಕಿಸುತ್ತಲೇ ಇರುತ್ತವೆ. ತಿಳುವಳಿಕೆ ಎಂಬುದು ತಿಳಿಯಾಗಿರುತ್ತದೆ. ಅದರಲ್ಲಿ ಸ್ಪಷ್ಟತೆಯಿರುತ್ತದೆ, ಸಹಜತೆಯಿರುತ್ತದೆ, ನಾಟಕೀಯವಾಗಿರುವುದಿಲ್ಲ. ಎಲ್ಲವೂ ಸ್ಫಟಿಕದಂತೆ ನಿರ್ಮಲ, ನಿರಮ್ಮಳ.

ದರ್ಶನ ಎಂದರೆ ಜೀವಂತವಾಗಿರುವ ಪ್ರಾಣಶಕ್ತಿಯು ತನ್ನ ಕಣ್ಣಾವಲಿನಲ್ಲಿ ನನ್ನನ್ನು ಗಮನಿಸುತ್ತಿದೆ ಮತ್ತು ಇದುವರೆಗೂ ನಾನು ಅದನ್ನು ಗಮನಿಸಿಯೇ ಇಲ್ಲ ಎಂಬ ಅರಿವು ಬಂದಾಗ ಆಗುವ ತಪ್ಪಿತಸ್ಥ ಪ್ರಜ್ಞೆ, ಅನಗತ್ಯವಾದ ಇಹ–ವ್ಯವಹಾರಗಳಲ್ಲಿ ಆ ಸತ್ಯವನ್ನು ಮರೆತ ಕಾರಣದಿಂದ ಆಗುವ ಪಶ್ಚಾತಾಪ ಮತ್ತು ಆ ಶಕ್ತಿಯ ನಮ್ರತೆಯ ಕಾರಣದಿಂದ ಹೊಮ್ಮುವ ಭಕ್ತಿಯನ್ನು ಭಕ್ತ ಅನುಭವಿಸಿದರೆ, ರಾಘವಾಂಕನ ಹರಿಶ್ಚಂದ್ರ ಹೊಲತಿಯರನ್ನು ನಿರಾಕರಿಸಿದ ಕಾರಣಕ್ಕೆ ಹೊಲೆಯನ ದಾಸನಾಗಿ ಅತ್ಯಂತ ಹೇಸಿಗೆಯ ಬದುಕನ್ನು ಅನುಭವಿಸುವಂತಾದಾಗ, ಆ ಶೋಷಿತ ಜನರ ಬದುಕು–ಬವಣೆಯ ಬಿಸಿಗೆ ತನ್ನ ಶ್ರೇಷ್ಟತೆಯ ಅಹಂ ಕರಗಿದ ಕ್ಷಣದ ಭಾವವೇ ಸ್ಯಾಮುಯಲ್ ಕೋಲ್ರಿಡ್ಜ್ ಕವಿಯ ನಾವಿಕ ಸಾಗರದ ಅಸಹ್ಯ ಜೀವಿಗಳ ಬಗ್ಗೆ ಕರುಣೆ ತೋರಿದ ಕ್ಷಣದ ಭಾವವೇ ಆಗಿತ್ತು ಎಂದು ಬುದ್ಧಿಗೆ ಹೊಳೆದ ಕ್ಷಣದಲ್ಲಿ ಅನುಭವವಾಗುವ ಕಾವ್ಯದ ರೋಮಾಂಚನವೇ ದರ್ಶನವೆಂದು ಕವಿಯ ಅರಿವು.

ಇದು ಭಾಷೆಯ ಸೊಗಸು. ಇದರ ಸ್ಪಂದ ಪ್ರತಿಕ್ಷಣ ಜೀವನವೆಂಬ ಮೂರಕ್ಷರದಲ್ಲಿ ಅನುರಣಿಸುತ್ತಿರುತ್ತದೆ. ಅದಕ್ಕೆ ಪ್ರತಿಯಾಗಿ ಸ್ಪಂದಿಸಲು ಶಕ್ತಿ ಕೊಡುವ ಕ್ಷಣವೇ ಶಿಕ್ಷಣ.

**ಡಾ. ಸರಸ್ವತಿ ಕೆ.ಬಿ**
ಸಂಪಾದಕರು

# ಅನುಕ್ರಮಣಿಕೆ

ಸಂಶೋಧನಾ ಲೇಖನಗಳು


೦೧. ರಸೀದಿ ತಿಕೀಟು–ಅಮೃತಾ ಪ್ರೀತಂ ೦೭

- **ಮಂಜುಳ ಜಿ.**

೦೨. ಸು.ರಂ. ಎಕ್ಕುಂಡಿ ಹಾಗೂ ಇಬ್ಬರು ರೈತರು ೧೪

- **ಡಾ. ಸರ್ವೇಶ ಬಿ. ಎಸ್.**

೦೩. ಗಂಡುಕಲೆ – ಡೊಳ್ಳುಕುಣಿತ ೨೧

- **ರುಜುವಾನ್ ಕೆ.**

೦೪. ಕನ್ನಡ–ಮರಾಠಿ ಭಾಷೆ–ಸಾಹಿತ್ಯ ಬಾಂಧವ್ಯ ೨೫

- **ಡಾ. ಗೌರಮ್ಮಾ ಏಳಂಗಡಿ. (ಡಿಗ್ಗೆ ಜಿ ಎಸ್)**

೦೫. 'ಅಂಬೇಡ್ಕರ್' ನಾಟಕದಲ್ಲಿ ಎಲ್. ಹನುಮಂತಯ್ಯ ಅವರ ಚಿಂತನೆಗಳು ೩೦

- **ಡಾ. ರವಿಶಂಕರ್ ಎ. ಕೆ**

೦೬. ಡಾ. ಸುಜಾತ ಅಕ್ಕಿರವರ ಶೈಕ್ಷಣಿಕ ಸಾಧನೆ : ಒಂದು ಸಮೀಕ್ಷೆ ೩೮

- **ಭವ್ಯ ಎಂ. ಎಸ್**

೦೭. ಆಹಾರ ಸಂಸ್ಕೃತಿಯಲ್ಲಿನ ಸ್ಪೃಶ್ಯರು ಮತ್ತು ಅಸ್ಪೃಶ್ಯರು: ವರ್ತಮಾನದ ತಲ್ಲಣಗಳು ೪೧

- **ಅರ್ಪಿತ. ಎಂ**

೦೮. ಅಧಿಕಾರಶಾಹಿ ವ್ಯವಸ್ಥೆಗೆ ಸಂಕಮ್ಮಳ ಪ್ರತಿರೋಧದ ಧ್ವನಿ ೪೭

- **ಡಾ. ಅಶ್ವಿನಿ ನಾಯಕ**

೦೯. ಸ್ವಾಯತ್ತತೆಯ ನೆಲೆಯಲ್ಲಿ ಮಹಿಳಾ ಆತ್ಮಕಥೆಗಳು ೫೪

- **ಶ್ಯಾಮಣ್ಣ ಮಡ್ಡೇರ್**

೧೦. ಚಂದ್ರಾವತಿ ರಾಮಾಯಣ : ಸ್ತ್ರೀ ಸಂವೇದನೆಗಳ ಭಾವಲೋಕ ೫೯

- **ಡಾ. ಸೈಯದ್ ಮುಯಿನ್**

೧೧. ಪೌರಾಣಿಕ ಸ್ತ್ರೀ ಪಾತ್ರಗಳಲ್ಲಿ ಕಂಡುಬಂದ ಆಧುನಿಕ ಪ್ರಜ್ಞೆ ೬೫

- **ಪುಷ್ಪಲತ. ಕೆ**

ISSN: 2320-9941


# ರಸೀದಿ ತಿಕೀಟು–ಅಮೃತಾ ಪ್ರೀತಂ

• ಮಂಜುಳ ಜಿ.

ಭಾರತೀಯ ಸಾಹಿತ್ಯ ನಿರ್ಮಾಪಕರಲ್ಲಿ ಅಮೃತಾ ಪ್ರೀತಂರು ಒಬ್ಬರು. ಅವರು ಪಂಜಾಬಿ ಸಾಹಿತಿಯಾಗಿದ್ದು, ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಪಂಜಾಬಿ ಲೇಖಕಿ ಎಂಬ ಹೆಸರಿಗೆ ಪಾತ್ರರಾಗಿದ್ದಾ–ರೆ. ಧಾರ್ಮಿಕ ಕಟ್ಟಳೆಗಳನ್ನು, ಪಾರಂಪರಿಕ ಹುಸಿಮೌಲ್ಯಗಳನ್ನು, ಸಾಮಾಜಿಕ ನಿಂದನೆಗಳನ್ನು ಧಿಕ್ಕರಿಸಿ ಯಾರಿಗೂ ಹೆದರದೆ ತನ್ನ ಐಡೆಂಟಿಟಿಯನ್ನು ಕಂಡುಕೊಂಡ ದಿಟ್ಟ ಮಹಿಳೆ. ಬಂಡಾಯ ಲೇಖಕಿಯಾಗಿ ಗುರುತಿಸಿಕೊಂಡಿದ್ದು, ಅಮೃತಾರ 28 ಕಾದಂಬರಿಗಳು, 18 ಕವನ ಸಂಕಲನಗಳು, 5 ಕಥಾಸಂಕಲನಗಳು ಹೀಗೆ ಒಟ್ಟು 75 ಕೃತಿಗಳನ್ನು ರಚಿಸಿ 'ನಾಗಮಣಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಬೋದಿಲೇರ್, ಮೈಕೋವಸ್ಕಿ, ಪುಶ್ಕಿನ್, ಟಾಲ್ಸ್ಟಾಯ್, ಗಯಾಟೆ, ಷಿಲರ್, ಫ್ರೈಡ್, ಠಾಗೂರ್, ಮುಂತಾದವರ ಪ್ರಭಾವಕ್ಕೆ ಒಳಗಾಗಿದ್ದರು. ಅವರ ಮೊದಲ ಕವನ ಸಂಕಲನ 'ಅಮೃತಾ ಲೆಹರಾಂ' (1939) ಪ್ರಕಟವಾಯಿತು. ಆಗ ಅವರಿಗೆ 17 ವರ್ಷ ವಯಸ್ಸಾಗಿತ್ತು.

ಭಾರತದ ವಿಭಜನೆಯಾದಾಗ ಕೋಮುವಾದದ ಪೆಡಂಭೂತ ಅಟ್ಟಹಾಸಗೆಯ್ಯತೊಡಗಿತು. ಏಷ್ಯಾದ ಪ್ಯಾರಿಸ್ ಎನಿಸಿಕೊಂಡಿದ್ದ ಲಾಹೋರ್ ನಗರ ಹೊತ್ತಿ ಉರಿಯಿತು. ಅಮಾಯಕರ ಬರ್ಬರ ಹತ್ಯೆ, ಅತ್ಯಾಚಾರಕ್ಕೊಳಗಾದ ಮಹಿಳೆಯರ ಆಕ್ರಂದನ, ಅಪಹರಣದಂತಹ ಗಲಭೆಗಳು, ಕೃತ್ಯಗಳು ತಲೆದೋರಿದವು. ದೇಶ ವಿಭಜನೆಯು ಸಾಹಿತ್ಯಕ್ಕೆ ವಸ್ತುವಾಯಿತು. ಪ್ರೀತಿ ಮತ್ತು ಕ್ರಾಂತಿಯ ಕವನಗಳನ್ನು ಬರೆದ ಜನಪ್ರಿಯ ಕವಿ ಸಾಹಿರ್ ಲೂಧಿಯಾನವಿ ಅಮೃತಾರ ಪಾಲಿಗೆ ಆರಾಧ್ಯ ದೈವವಾಗಿದ್ದರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಸಿದ ಮೊದಲ ಭಾರತೀಯ ಮಹಿಳೆ. 1981ರಲ್ಲಿ ಜ್ಞಾನಪೀಠ ಪ್ರಶಸ್ತಿ ಗಳಿಸಿದ

**ವಿಳಾಸ:** ಮಂಜುಳ .ಜಿ
ಸಂಶೋಧನಾರ್ಥಿನಿ, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560056
gmanjula1007@gmail.com

ಪಂಜಾಬಿ ಕವಯಿತ್ರಿಯಾಗಿದ್ದರು. ಇವರ ಕೃತಿಗಳು ಭಾರತದ 21 ಭಾಷೆಗಳಿಗೆ ಅನುವಾದವಾಗಿದೆ. ಅಷ್ಟೇ ಅಲ್ಲದೆ, ಇಂಗ್ಲಿಷ್, ಫ್ರೆಂಚ್, ಪೊಲಿಶ್ ರಷ್ಯನ್, ಸ್ಪ್ಯಾನಿಶ್, ಅಲ್ಬೇನಿಯನ್, ಬಲ್ಗೇರಿಯನ್ ಮುಂತಾದ ವಿದೇಶಿ ಭಾಷೆಗಳಿಗೂ ಅನುವಾದವಾಗೊಂಡಿದೆ.

ಒಮ್ಮೆ ಅಮೃತಾರು ನನ್ನ ಬಗ್ಗೆ ಏನಾದರೂ ಬರೆಯಬೇಕೆಂದು ಖುಶವಂತಸಿಂಗರನ್ನು ಕೇಳಿದಾಗ ಅವರ ಪ್ರತಿಕ್ರಿಯೆ "ನಿನ್ನ ಜೀವನದಲ್ಲಿ ಅಂಥದ್ದೇನಿದೆ? ಒಂದೆರಡು ಘಟನೆಗಳಷ್ಟೇ ಅಲ್ಲವೇ? ಬರೆಯ ತೊಡಗಿದರೆ ರಸೀದು ತಿಕೀಟಿನ ಬೆನ್ನ ಮೇಲೆ ಬರೆಯಬಹುದು?" ಎಂಬ ಪ್ರಶ್ನೆಗೆ ಅಮೃತಾರ ಉತ್ತರವೇ "ರಸೀದಿ ತಿಕೀಟು" ಉತ್ತರಿಸುತ್ತದೆ. ಹಾ.ಮಾ. ನಾಯಕರು ಇವರ ಕವನಗಳನ್ನು ಅನುವಾದಿಸಿ 'ಸುನೇರಿ' ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇವರ ಆತ್ಮಕಥೆಯು ಪಂಜಾಬಿ ಮೂಲದಲ್ಲಿ 'ಕಪ್ಪು ಗುಲಾಬಿ' (1968), ಹಾಗೂ ಇಂಗ್ಲಿಷಿನಲ್ಲಿ 'ರೆವೆನ್ಯೂ ಸ್ಟಾಂಪ್' (1977) ನಂತರ ಕನ್ನಡದಲ್ಲಿ ಹಸನ್ ನಯೀಂ ಸುರಕೋಡದವರು 'ರಸೀದಿ ತಿಕೀಟು' ಎಂಬ ಶೀರ್ಷಿಕೆಯಡಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಅಮೃತಾರು ತಮ್ಮ ಬದುಕಿನ ನೋವುಗಳಿಗೆ ಲೇಖನಿಯ ಮೂಲಕ ಜೀವ ತುಂಬಿ ಕಲೆಯನ್ನೇ ಬದುಕಾಗಿಸಿಕೊಂಡವರು. ಅಮೃತಾರ ಆತ್ಮಕಥೆಯು ಆತ್ಮಕಥೆಯಾಗಿದರೆ, ಭಾವನೆಗಳ ಗಣಿಯಾಗಿ, ಪ್ರವಾಸ ಕಥನವಾಗಿ, ಪ್ರೀತಿಯ ಅನ್ವೇಷಣೆಯು ಯಾವ ಯಾವ ಬಗೆಗಳಲ್ಲಿರುತ್ತದೆ ಎಂಬುದನ್ನು ಹಲವಾರು ಆಯಾಮಗಳಲ್ಲಿ ತಿಳಿಸುವ ಮೂಲಕ ಕೃತಿಯು ವಿಶಿಷ್ಟತೆಯನ್ನು ಸಾಧಿಸಿದೆ. ಅವರೇ ಹೇಳಿದಂತೆ ಆತ್ಮಕಥೆ ಎಂಬುದು ಥಳಕು ಬೆಳಕಿನ ಏಕಮುಖಿ ಸತ್ಯವೆಂದು, ಆತ್ಮಸ್ಮೃತಿಯ ಕಲಾತ್ಮಕ ಮಾಧ್ಯಮವೆಂದು ಅಂದುಕೊಳ್ಳುತ್ತಾರೆ. ನಾನು "ಇದು ವಾಸ್ತವದಿಂದ ವಾಸ್ತವದತ್ತ ಸಾಗುವ ಪ್ರಕ್ರಿಯೆಯಾಗಿದೆ" ಎನ್ನುತ್ತಾರೆ (ಪು. ಸಂ–192). ಕೃತಿಯಲ್ಲಿ ಅಮೃತಾರು ಅನುಭವಿಸಿದ ಸಂಕಷ್ಟಗಳು, ಅವರ ಜೀವನ ಕ್ರಮದ ವಿಧಾನವನ್ನೇ ಓದುಗರ ಮುಂದೆ ತೆರೆದಿಡುತ್ತಾರೆ.

ತಂದೆಗೆ ಎಂದು ಸುಳ್ಳು ಹೇಳಲಿಲ್ಲ. ನನಗೆ ನಾನೇ ಎಂದು ಸುಳ್ಳು ಹೇಳಲಾರೆ ಎನ್ನುತ್ತಾ ತನ್ನ ಅಜ್ಜಿಯ ವಿರುದ್ಧ ಬಂಡಾಯ ಹೂಡುತ್ತಾರೆ. ತಾನು ಹನ್ನೊಂದು ವರ್ಷದವಳಾಗಿದ್ದಾಗ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಹಲವಾರು ಸಂದಿಗ್ಧತೆಗಳನ್ನು ಎದುರಿಸುತ್ತಾರೆ. ತನ್ನ ತಂದೆಯ ವಿರುದ್ಧ ದೇವರಿಲ್ಲ ಎಂಬ ವೈಚಾರಿಕ ನೆಲೆಯಲ್ಲಿ ವಾದಿಸುತ್ತಾಳೆ. ರೂಢಿಸಿಕೊಂಡಿದ್ದ ನಿಯಮಗಳನ್ನು ಉಲ್ಲಂಘಿಸಿದರು. "ಹೊರಗಿನಿಂದ ದೈಹಿಕವಾಗಿ ನನ್ನ ಬಾಲಿಶ ಮನೋಧರ್ಮ ತನ್ನ ತಂದೆಯ ಅಧಿಕಾರದೊಂದಿಗೆ ಸೆಣಸುವುದು ಸಾಧ್ಯವಿರಲಿಲ್ಲ. ಆಗ ನಾನು ಪದ್ಮಾಸನ ಹಾಕಿ ಕಣ್ಣು ಮುಚ್ಚಿಕೊಳ್ಳುತ್ತಿದೆ. ಆದರೆ ನನ್ನ ಸೋಲು ನನ್ನ ಮನದಾಳದ ರೋಷವಾಗಿ ಪರಿಣಮಿಸುತ್ತಿತ್ತು" ಎನ್ನುತ್ತಾರೆ (ಪು.ಸಂ–11). ತಮ್ಮ ಹದಿನಾರನೇಯ ವಯಸ್ಸನ್ನು ತುಂಬಾ ಕರಾಳವೆಂಬಂತೆ ಚಿತ್ರಿಸಿದ್ದಾರೆ. ತನ್ನ ರಕ್ಷಣೆಗೆ–ಂದು ಮನೆಯ ಹತ್ತಿರದ ಹುಡುಗರೊಂದಿಗೆ ಮಾತನಾಡುವಂತಿರಲಿಲ್ಲ. ಸಹಪಾಠಿಗಳ ಜೊತೆಗೂ ಮಾತನಾಡುವ ಹಾಗಿರಲಿಲ್ಲ. ತಂದೆ – ತಾಯಿಗಳ ಮಾತನ್ನು ಪಾಲಿಸಬೇಕು, ಸಾಮಾಜಿಕ ವ್ಯವಸ್ಥೆಯನ್ನು ಆದರದಿಂದ ಒಪ್ಪಿಕೊಳ್ಳಬೇಕಿತ್ತು. ಸುತ್ತಮುತ್ತಲಿನ ಪರಿಸರದಲ್ಲಿ ನಿಷೇಧ, ನಿರಾಕರಣೆಗಳು, ವೈರುಧ್ಯಗಳು ಉಸಿರಿನಲ್ಲಿ ಉರಿ ಕಾಣಿಸಿಕೊಳ್ಳುತ್ತವೆ ಎನ್ನುತ್ತಾ ಹೀಗೆ ಹೇಳುತ್ತಾರೆ, "ಬೇರೆಯವರ ಬದುಕಿನಲ್ಲಿ ಇದೆಲ್ಲಾ ಯಾವ ಮಟ್ಟದ್ದಾಗುತ್ತದೆಯೋ ಅದಕ್ಕಿಂತ ಮೂರು ಪಟ್ಟು ನನ್ನ ಬದುಕಿನಲ್ಲಿ ಆಗಿ ಹೋಯಿತು. ಮೊದಲನೆಯದಾಗಿ ಸುತ್ತಣ ಮಧ್ಯಮ ವರ್ಗದ ನೀರಸ ಹಾಗೂ ಸಾಂಪ್ರದಾಯಿಕ ಜೀವನ ಶೈಲಿ, ಎರಡನೆಯದಾಗಿ ತಾಯಿಯ ಇಲ್ಲದಿರುವಿಕೆಯಿಂದಾಗಿ ಸದಾ ನಿಷೇಧಗಳ ಸರಮಾಲೆ ಹಾಗೂ ಮೂರನೆಯದಾಗಿ ತಂದೆ ಧಾರ್ಮಿಕವಾಗಿ ಆದರ್ಶ ವ್ಯಕ್ತಿ ಎನಿಸಿಕೊಂಡು ನಾನು ಸಂಯಮದಿಂದ ಬದುಕಬೇಕೆಂದು ಆಗ್ರಹಿಸುವವರು. ಹದಿನಾರನೇ ವಸಂತದೊಂದಿಗಿನ ನನ್ನ ಸಂಬಂಧ ಒಂದು ವಿಫಲ ಪ್ರೇಮ ಪ್ರಸಂಗಕ್ಕೆ ಸಮಾನವಾಗಿತ್ತು" (ಪು.ಸಂ–15) ಎಂದು ಹೇಳುತ್ತಾರೆ.

ಅಮೃತಾರ ಬದುಕು ವಿಶಿಷ್ಟವಾಗಿತ್ತು. ತಮ್ಮ 4ನೆಯ ವಯಸ್ಸಿನಲ್ಲಿ ವಿವಾಹ ನಿಶ್ಚಯವಾಗಿತ್ತು. ಅದು 16ರ ವಯಸ್ಸಿನಲ್ಲಿ ವಿವಾಹದ ಮೂಲಕ ಕೊನೆಯಾಯಿತು. ಪ್ರೀತಂ ಸಿಂಗ್ರನ್ನು ಮದುವೆಯಾಗಿ ದೇಶ ವಿಭಜನೆಯ ಕಾಲದಲ್ಲಿ ದೆಹಲಿಗೆ ಬಂದು ನೆಲೆಸಿದರು. ಸಾಹಿರ್ ಲೂಧಿಯಾನ್ವಿಯವರನ್ನು ಗಾಢವಾಗಿ ಪ್ರೀತಿಸುತ್ತಿದ್ದರು. ಪ್ರೀತಂ ಸಿಂಗ್‌ಗೆ ವಿಚ್ಛೇದನ ನೀಡುತ್ತಾರೆ. ಸಾಹಿರ್ ಲೂಧಿಯಾನ್ವಿ ಪ್ರೀತಿಯೂ ದಕ್ಕುವುದಿಲ್ಲ. ಅನಂತರ ತಮ್ಮ ಬದುಕಿನ ಸಂಗಾತಿಯಾಗಿ ನಲವತ್ತು ವರ್ಷಗಳ ಜೊತೆಯಿದ್ದವರು ಇಮ್ರೋಜ್. ಆದರೂ ಸಾಹಿರರ ನೆನಪು ಅವರ ನೆರಳಿನಂತೆ ಸದಾ ಹಿಂಬಾಲಿಸುತ್ತಿತ್ತು ಎಂಬುದನ್ನು ರೂಪಕಗಳ ಭಾಷೆಯಲ್ಲಿ ಹೇಳುತ್ತಾರೆ. ಅವರನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬುದಕ್ಕೆ ಹಲವು ಅನುಭವಗಳನ್ನು ಹೇಳಿಕೊಳ್ಳುತ್ತಾರೆ. ಆತನಿಗಾಗಿ 'ಸುನಹಡೆ' ಎಂಬ ಕವನ ಸಂಕಲನವನ್ನು ಬರೆದಿರುವುದಾಗಿ ತಿಳಿಸುತ್ತಾರೆ.

ಅಮೃತಾರು ಸಾಹಿರ್ ಲೂಧಿಯಾನ್ವಿಯವರನ್ನು ಎಷ್ಟೊಂದು ಹಚ್ಚಿಕೊಂಡಿದ್ದರು ಎಂಬುದಕ್ಕೆ ಆತ್ಮಕತೆಯಲ್ಲಿನ

ಕೆಲವು ಪ್ರಸಂಗಗಳನ್ನು ಗಮನಿಸಬಹುದು. ಒಮ್ಮೆ ಸಂಜೆ ಪತ್ರಕರ್ತ ಹಾಗೂ ಛಾಯಾಚಿತ್ರ ಗ್ರಾಹಕರಿಬ್ಬರು ಬಂದಿದ್ದರು. ಅವರು ಲೇಖನಿ ಹಿಡಿದು ಕವನ ಬರೆಯುವ ಹಾಗೆ ಕ್ಯಾಮರಾದಲ್ಲಿ ಸೆರೆಹಿಡಿಯಬೇಕೆಂದಾಗ ಅಮೃತಾರು ಅಪ್ರಜ್ಞಾಪೂರ್ವಕವಾಗಿ ಸಾಹಿರ್, ಸಾಹಿರ್, ಸಾಹಿರ್ ಎಂದು ಕಾಗದದ ತುಂಬಾ ಬರೆದಿದ್ದರು. ಅಂಗೈ ಮೇಲೆ, ಗೋಡೆಗಳ ಮೇಲೆ ಬರೆಯುತ್ತಿದ್ದರು. "ಇಮ್ರೋಜ್ ಸ್ಕೂಟರ್ ಮೇಲೆ ಅವರ ಹಿಂದೆ ಕುಳಿತಿರುತ್ತಿದ್ದಾಗಲೆಲ್ಲ ಅವರ ಬೆನ್ನ ಮೇಲೆ ನನ್ನ ಬೆರಳುಗಳು ಸಾಹಿರ್‌ನ ಹೆಸರನ್ನು ಬರೆಯುತ್ತಿದ್ದವು" (ಪು.ಸಂ–104) ಎಂದು ಹೇಳುತ್ತಾರೆ. ಮತ್ತೊಂದು ಸನ್ನಿವೇಶ ತಾನು ತಾಯಿಯಾದಾಗ ನಿರಂತರ ಸಾಹಿರ್‌ನನ್ನು ಧ್ಯಾನಿಸಿದರೆ 'ಸಾಹಿರ್'ನಂತಹ ಮಗು ಹಾಗೆ ಜನಿಸುತ್ತದೆ ಎಂದು ತಿಳಿದು "ನಾನು ಸಾಹಿರ್‌ನ ರೂಪವನ್ನು ನಿರಂತರ ಧ್ಯಾನಿಸಿದರೆ ನನ್ನ ಮಗುವಿನ ರೂಪ ಅವನದನ್ನು ಹೋಲುತ್ತದೆ" ಎಂದು ಕಿವಿಯಲ್ಲಿ ಹೇಳಿತ್ತು ಎಂದು ಕಲ್ಪಿಸಿಕೊಳ್ಳುತ್ತಾರೆ (ಪು. ಸಂ–125). "ಒಮ್ಮೆ... ಅವನ ಕೈಯನ್ನು ಒಂದು ಸಲವಾದರೂ ಸ್ಪರ್ಶಿಸಬೇಕೆನಿಸಿತು. ನನ್ನೆದುರು ನನ್ನವೇ ಆದ ಸಂಸ್ಕಾರಗಳ ಒಂದು ಗೋಡೆ ಇತ್ತು. ಅದನ್ನು ದಾಟುವುದು ಸಾಧ್ಯವಾಗುತ್ತಿರಲಿಲ್ಲ..... ಆಗಲೂ ಚಮತ್ಕಾರದ ಮೊರೆ ಹೊಕ್ಕೆ. ಅವನು ಹೊರಟು ಹೋದ ಮೇಲೆ ಅವನು ಬಿಟ್ಟು ಹೋಗುತ್ತಿದ್ದ ಸಿಗರೇಟಿನ ತುಂಡುಗಳನ್ನು ಜೋಪಾನವಾಗಿ ಬೀರುವಿನಲ್ಲಿ ಕಾದಿಡತೊಡಗಿದೆ. ಅನಂತರ ಒಂದೊಂದು ತುಂಡನ್ನು ಏಕಾಂತದಲ್ಲಿ ಕೂತು ಉರಿಸುತ್ತಿದ್ದೆ. ಬೆರಳ ಸಂದಿಯಲ್ಲಿ ಅಮುಕಿ ಹಿಡಿಯುತ್ತಿದ್ದಾಗ ಅವನ ಕೈಯನ್ನೇ ಸ್ಪರ್ಶಿಸಿದಂತೆ ಅನ್ನಿಸುತ್ತಿತ್ತು. ಸಿಗರೇಟಿನ ಹೊಗೆಯಲ್ಲಿ ಅವನು ಕಿನ್ನರನಾಗಿ ಪ್ರಕಟವಾಗುತ್ತಿದ್ದ" (ಪು.ಸಂ–138). ಹೀಗೆ ಅಮೃತಾರ ಬದುಕು ಸಾಹಿರ್‌ನ ಪ್ರೀತಿಗಾಗಿ ಕೊನೆಯವರೆಗೂ ಹಂಬಲಿಸಿದ್ದು, ಅದೂ ಸಿಗದೇ ಭಗ್ನ ಪ್ರೇಮಿಯಾಗಿ ತನ್ನ ಬದುಕಿನಲ್ಲಿ ತುಂಬಾ ನೋವನ್ನು ಅನುಭವಿಸುತ್ತಾಳೆ. ಆ ನೋವನ್ನೆಲ್ಲಾ ಬರಹದಲ್ಲಿ ತುಂಬಿ ಅದರಲ್ಲಿಯೇ ಜೀವಿಸುತ್ತಾಳೆ. ತಾನು ಇಮ್ರೋಜ್ ಜೊತೆಗಿದ್ದರೂ, ತನ್ನ ಪ್ರೀತಿಯನ್ನು ಮುಚ್ಚಿಡದೆ ತನ್ನ ಇಷ್ಟದಂತೆ ಬದುಕುತ್ತಾಳೆ. ಆದರೆ ಅಮೃತಾರಂತಹ ಧೈರ್ಯ ನಮ್ಮ ಹೆಣ್ಣು ಮಕ್ಕಳಲ್ಲಿ ಇಲ್ಲ. ಪ್ರೀತಿಸುವುದು ಯಾರನ್ನೋ, ಮದುವೆಯಾಗುವುದು ಮತ್ತೊಬ್ಬರನ್ನು. ಮದುವೆಯಾದಾಗ ತಮ್ಮ ಪ್ರೀತಿಯನ್ನು ಮುಚ್ಚಿಡುತ್ತಾಳೆ. ಕಾರಣ ತಮ್ಮ ಗಂಡ ಎಲ್ಲಿ ಬಿಟ್ಟು ಹೋಗಿಬಿಡುತ್ತಾನೋ? ಸಮಾಜ ಹೇಗೆ ನೋಡುತ್ತದೋ? ಏನನ್ನುತ್ತದೋ? ಎಂದು ಸಮಾಜಕ್ಕೆ ಹೆದರಿ ಅವರಿಗಾಗಿ ಬದುಕದೇ ವ್ಯವಸ್ಥೆಯನ್ನು ಒಪ್ಪಿ ತಮ್ಮ ಗಂಡಂದಿರಿಗಾಗಿ ಬದುಕುತ್ತಾರೆ. ಆದರೆ ಅಮೃತಾರು ತಮ್ಮ ಬದುಕನ್ನೇ ಸಮಾಜಕ್ಕೆ ಓದುವಂತೆ ಬಾಹ್ಯವಾಗಿ ಬಿಚ್ಚಿಡುತ್ತಾರೆ. ಸಮಾಜದ ನಿಂದನೆಗಳಿಗೆ ತಲೆ ಕೆಡೆಸಿಕೊಳ್ಳುವುದಿಲ್ಲ. ತನಗೆ ಹೇಗೋ ಬೇಕೋ ಹಾಗೆ ಬದುಕಿದವರು.

ನಮ್ಮ ಪಕ್ಕದಲ್ಲಿ ಯಾರಾದರೂ ಬೆಳೆಯುತ್ತಿದ್ದರೆ ಅವರ ಬೆಳವಣಿಗೆಯನ್ನು ಸಹಿಸದೆ ಕೋತಿಗಳ ಹಾಗೆ ಚೇಷ್ಟೆ ಮಾಡುತ್ತಿರುತ್ತಾರೆ. ಒಬ್ಬ ಸಾಹಿತಿ ಯಾವ ಪರಿಸರದಲ್ಲಿ ಇರುತ್ತಾರೋ ಆ ಪರಿಸರದ ಜನ ಗೌರವಿಸಬೇಕು, ತಮ್ಮ ಭಾಷೆಯ ಕವಿ ತಮ್ಮವರು ಎಂಬ ಆದರವೂ ಇರುತ್ತದೆ. ಆದರೆ ಅಮೃತಾರು ಪಂಜಾಬಿ ಸಾಹಿತಿಯಾಗಿದ್ದು, ತನ್ನ ಸಮಕಾಲೀನ ತಮ್ಮ ಪಂಜಾಬಿಯ ಸಾಹಿತಿಗಳಿಂದಲೇ ನಿರಂತರ ಆರೋಪಗಳಿಗೆ ಗುರಿಯಾಗುತ್ತಾರೆ. ಆ ಆರೋಪಗಳಿಗೆ ಬೇಸತ್ತರು, ಅವುಗಳಿಗೆ ಪ್ರತಿಯುತ್ತರ ನೀಡುತ್ತಾರೆ. ಇಡೀ ಸಮಾಜವೇ ಅವರನ್ನು ಅಪಮಾನಗೊಳಿಸಿತ್ತು ಹಾಗೂ ತನ್ನ ಸಮಕಾಲೀನ ಲೇಖಕರು ಹಾಗೂ ಪತ್ರಿಕೆಗಳು ಕೂಡ "ನನ್ನ ಬಗ್ಗೆ ವಿಷಕಾರದ ಪಂಜಾಬಿ ಪತ್ರಿಕೆ–ಯೇ ಇಲ್ಲ" ಎಂದು ಹೇಳುತ್ತಾರೆ. ಪಂಜಾಬಿಯ ಒಬ್ಬ ಕವಿ ಆಕೆಯನ್ನು ಭೇಟಿಯಾಗಿರಲಿಲ್ಲ. ಆತ ಒಮ್ಮೆ ಮನೆಗೆ ಕಾಣಲು ಬಂದಿದ್ದರು. ಭೇಟಿಯಾದನಂತರ ವಿಚಿತ್ರ ಪ್ರೇಮ ಕವನ ಬರೆಯುತ್ತಿದ್ದರು. ನಂತರ ದೇಶ ವಿಭಜನೆಯ ನಂತರ ಪರಿಚಯದಿಂದ ಮುಕ್ತಳಾದ ಬಳಿಕ ಹಲವು ವರ್ಷಗಳ ನಂತರ ಹೀಗೆ ಹೇಳುತ್ತಾರಂತೆ "ನಾನು ಅವರ ಸ್ನೇಹವನ್ನು ಇಷ್ಟಪಡಲಿಲ್ಲ ಎನ್ನುವುದಕ್ಕಾಗಿಯೇ ಭಾರತ ವಿಭಜನೆಯಾಯಿಯಂತೆ. ಅವರ ಅಭಿಪ್ರಾಯದಂತೆ ಸಾವಿರಾರು ಮುಗ್ಧರ ಕೊಲೆಯಾದದ್ದಕ್ಕೂ ಅದೇ ಕಾರಣ ಎಂದು ಆರೋಪಿಸಿ ನನ್ನವಿರುದ್ಧ ಕೆಂಡ ಕಾರುತ್ತಿದ್ದರು" ಎನ್ನುತ್ತಾರೆ (ಪು.ಸಂ–28). ಸಜ್ಜಾದ್ ಜಹೀರ್ ಅಮೃತಾರನ್ನು ಭೇಟಿಯಾಗಲು ಸಂಕೋಚದಿಂದ, "ಭಾರತೀಯ ಲೇಖಕರ ಒಂದು ನಿಯೋಗ ಸೋವಿಯತ್ ರಷ್ಯಾಕ್ಕೆ ಹೋಗಲಿದೆ. ನೀವೂ ಈ ಯೋಗದಲ್ಲಿರಬೇಕೆಂದೂ ನಾನು ಬಯಸಿದ್ದೂ. ನಿನ್ನೆಯ ಸಭೆಯಲ್ಲಿ ಯಾವುದೇ ಭಾಷೆಯ ಯಾವುದೇ ಲೇಖಕ ನಿಮ್ಮ ವಿಷಯವಾಗಿ ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ ಪಂಜಾಬಿ ಲೇಖಕರು ಬಲವಾಗಿ ವಿರೋಧಿಸಿದರು." "ಅವರೆನ್ನುವುದೇನೆಂದರೆ ಒಂದು ವೇಳೆ ಅಮೃತಾ ನಿಯೋಗದಲ್ಲಿದ್ದರೆ ನಮ್ಮ ಪತ್ನಿಯರು ನಿಯೋಗದ ಜೊತೆ ಹೋಗಲು ಬಿಡುವುದಿಲ್ಲ.... ನಾನು ವಿಚಿತ್ರ ಸಮಸ್ಯೆಗೆ ಸಿಲುಕಿ ಹಾಕಿಕೊಂಡೆ" ಎಂದರು (ಪು.ಸಂ–58). ಗುರುನಾನಕ್ ಕುರಿತು 'ಗರ್ಭಿಣಿ' ಕವನವನ್ನು ಕೆಲವು ಪತ್ರಿಕೆಗಳು ನಿಷೇಧಿಸಲು ಪಂಜಾಬ್ ಸರ್ಕಾರಕ್ಕೆ ಆಗ್ರಹಿಸಿದವು. ಅಜಿತ್ ಪತ್ರಿಕೆಯಲ್ಲಿ ಕಿರಪಾಲ ಸಿಂಗ್ ಕಸೇಲರ ಬರಹಗಳು ನನ್ನನ್ನು 'ಕಾಮುಕ ಕ್ರಿಮಿ' ಎಂದು ಕರೆದು, ಗುರುನಾನಕ್ರ ಬಗ್ಗೆ ಬರೆಯುವ ಅಧಿಕಾರ ಇಲ್ಲ ಎನ್ನುವಷ್ಟರ

ಬಗ್ಗೆ ಕೆಂಡಕಾರಿದ್ದವು. ಸಮಕಾಲೀನ ಲೇಖಕನೊಬ್ಬ ಆಕೆಯ ಕಾದಂಬರಿಗಳನ್ನು 'ನಾವಲಚೂ'ಗಳೆಂದು ಕರೆದು ಕೃತಿಚೌರ್ಯದ ಆರೋಪ ಹೊರಿಸಿದ್ದರು. ಮತ್ತೊಬ್ಬ ಲೇಖಕ "ಈ ನಾರೀಮಣಿ ಮೂರು ವರ್ಷಗಳ ಕಾಲ ಇನ್ನೂ ನನ್ನ ಹಿಡಿತದಲ್ಲಿ...." ಎಂದ. "ನಾನು ಈಗ ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಮಿತಿಗೆ ಮೂರು ವರ್ಷಗಳಿಗಾಗಿ ಆಯ್ಕೆಯಾಗಿದ್ದೇನೆ. ಈ ಅವಧಿಯಲ್ಲಿ ಆಕೆಗೆ ಪ್ರಶಸ್ತಿ ಸಿಗಲಾರದೆಂದು ಪಣಕಟ್ಟಬಲ್ಲೆ" ಎಂದು ಘೋಷಿಸಿದ್ದ. ಮತ್ತೊಬ್ಬ "ಈ ನಾರೀಮಣಿ ಇನ್ನೂ ಐದು ವರ್ಷಗಳ ಕಾಲ ನನ್ನ ಹಿಡಿತದಲ್ಲಿ" ಎಂದು ಹೇಳುತ್ತಿದ್ದ. (ಪು.ಸಂ–106) ಹೀಗೆ ಹಲವರು ತನ್ನ ಸಮಕಾಲೀನ ಪಂಜಾಬಿ ಲೇಖಕರು ಅವರನ್ನು ನಿಂದಿಸಿದ್ದರು. ಆದರೂ ಕೆಲವೊಂದು ವ್ಯಕ್ತಿಗಳಲ್ಲಿ ಅಮೃತಾರ ಸಾಹಿತ್ಯ ಹಾಗೂ ಅವರ ಪರಿಚಯ, ದೇಶ ವಿದೇಶಗಳಲ್ಲಿ ಆಕೆ ಪರಿಚಿತಳಾಗಿದ್ದಳು? ತನ್ನದಲ್ಲದ ಜಾಗದಲ್ಲಿ ಆಕೆ ಎಲ್ಲರ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ್ದಳು. ಇದನ್ನು ಹಲವಾರು ನಿದರ್ಶನಗಳಲ್ಲಿ ಕಾಣಬಹುದು. 1973ರಲ್ಲಿ 'ವಿಶ್ವಶಾಂತಿ ಕಾಂಗ್ರೆಸ್'ನ ಸಂದರ್ಭದಲ್ಲಿ ಮಾಸ್ಕೋಗೆ ಹೋಗಬೇಕಿತ್ತು. ಅಲ್ಲಿ ಸೋಫಿಯಾ ವಿಮಾನ ನಿಲ್ದಾಣದಲ್ಲಿ ಅಪರಿಚಿತಳಾಗಿ ನಿಂತಿರುವಾಗ ಆಗ "ನೀವು ಅಮೃತಾ...?" ಎಂದು ಕೇಳಿದ್ದರು (ಪು.ಸಂ–60). ಮತ್ತೊಮ್ಮೆ "ವಿಯತ್ನಾಂದಿಂದ ಬರುತ್ತಿದ್ದಾಗ ನಿಮ್ಮ ಪ್ರಸಿದ್ಧ ಕವಿ ಸ್ವಾನ್ ಜಿಯಾವೊ, ಭಾರತದಿಂದ ಯಾರಾದರೊಬ್ಬರು ಮಹಿಳೆ ಬಂದಿದ್ದರೆ ಅದು ಅಮೃತಾ ಆಗಿರುತ್ತಾರೆ. ಅವರಿಗೆ ನನ್ನನ್ನು ನೆನಪಿಸಿರಿ ಎಂದಿದ್ದ" ಎಂದು ಹೇಳಿದ್ದರು (ಪು.ಸಂ–65). ಒಬ್ಬ ಯೋಧ ಹೀಗೆ ಹೇಳುತ್ತಾನೆ, ಭಾರತದಲ್ಲಿ ಆಶ್ರಯ ಪಡೆದ ಬಂಗಾಳಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಮಾತನಾಡುತ್ತಾ "ಅನೇಕ ಮುದುಕಿಯರೂ ಇದ್ದಾರೆ, ಹರೆಯದವರೂ ಇದ್ದಾರೆ, ಅವರನ್ನು ನೌಕೆಗಳಿಂದ ಇಳಿಸಿ ಶಿಬಿರಗಳಿಗೆ ತಲುಪಿಸುತ್ತೇವೆ. ಒಂದೇ ಒಂದು ಮಾತನ್ನು ನಾನು ಹೇಳಬೇಕಾಗಿದೆ. ಅದೇನೆಂದರೆ ಯಾರು ತಮ್ಮ ಕಾದಂಬರಿಗಳನ್ನು ಓದಿರುತ್ತಾರೋ ಅವರು ಪರಸ್ತ್ರೀಯರೊಂದಿಗೆ ಗೌರವದಿಂದ ವರ್ತಿಸುತ್ತಾರೆ. ಅವರನ್ನು ಕೆಟ್ಟ ದೃಷ್ಟಿಯಿಂದ ಮುಟ್ಟಲಾರರು" ಎಂದು. 1972ರಲ್ಲಿ ನೇಪಾಳದ ಕಾದಂಬರಿಕಾರ ದಿಲ್ಲಿಗೆ ಬಂದಾಗ "ಅವರು ನನ್ನ ಡೈರಿಯಲ್ಲಿ ಒಂದೆಡೆ ಅಮೃತಾ ಪ್ರೀತಂರ ಕವಿತೆಗಳನ್ನು ಓದಿದಾಗ ನನ್ನ ಭಾರತ ವಿರೋಧಿ ಭಾವನೆಗಳು ಅಳಿದು ಹೋದವು ಎಂದು ಬರೆದಿದ್ದೆ" ಎನ್ನುತ್ತಾರೆ (ಪು.ಸಂ–88). ಈ ಅನುಭವದ ಮಾತುಗಳುನ್ನು ಅಮೃತಾರು "ಕಪ್ಪು ಮೋಡಗಳ ಬಂಗಾರದ ಬಣ್ಣದ ಅಂಚುಗಳು" ಎಂಬ ರೂಪಕಗಳಲ್ಲಿ ಚಿತ್ರಿಸಿದ್ದಾರೆ. ಅವರೇ ಹೇಳಿದ ಹಾಗೆ "ನನ್ನ ದೇಶದಲ್ಲಿ ಅನ್ಯ ಭಾಷೆಗಳ ಜನರು ನನಗೆ ಅಪಾರ ಪ್ರೀತಿ ಹಾಗೂ ಆದರ ನೀಡಿದ್ದಾರೆ. ಉರ್ದುದವರು ಸುಮಾರು 15 ಕೃತಿಗಳನ್ನು ಪ್ರಕಟಿಸಿದ್ದಾರೆ. ಮೂರು ಕೃತಿಗಳನ್ನು ಕನ್ನಡದವರು, ಎರಡನ್ನು ಗುಜರಾತಿಯವರು, ಎರಡನ್ನು ಮಲೆಯಾಳಂನವರು, ಎರಡನ್ನು ಮರಾಠಿಯವರು ಪ್ರಕಟಿಸಿದರೆ, ಹಿಂದಿಯವರು ಎಲ್ಲಾ ಕೃತಿಗಳನ್ನು ಪ್ರಕಟಿಸಿದ್ದಾರೆ. ನನಗೆ ಆರ್ಥಿಕ ಸ್ವಾವಲಂಬನೆ ಸಾಧ್ಯವಾದದ್ದು ಹಿಂದಿಯಿಂದ ಎನ್ನುತ್ತಾರೆ. ಅವರ 'ವಾರೀಸ್ ಶಾಹ್' ಕವಿತೆ ಅಮೃತಾರನ್ನು ಭಾರತದ ಗಡಿಗಳಿಂದಾಚೆ ದೇಶ ವಿದೇಶಗಳಲ್ಲಿ ಪರಿಚಯಿಸಿತು. ಎಲ್ಲರ ಬಾಯಲ್ಲೂ ಕಂಠಪಾಠವಾಗಿ ಗುನುಗುನಿಸುತ್ತಿದ್ದರು. ಆತ್ಮಕಥೆಯ ಕೊನೆಯಲ್ಲಿ "ನನಗೆ ಗೊತ್ತಿರುವಂತೆ ನನ್ನ ಭಾಷೆಯ ಗಂಭೀರ ಓದುಗರು ಇದನ್ನು ಇಷ್ಟಪಡರು. ಆದ್ದರಿಂದ ಯಾವುದೇ ಬೆಲೆ ತೆತ್ತರೂ ಪರ್ವಾಗಿಲ್ಲ. ನಾನು ನನ್ನ ಭಾಷೆ ಹಾಗೂ ಓದುಗರನ್ನು ಕುಬ್ಜರಾಗಿ ಮಾಡಲಾರೆ. ಹೀಗೆ ಬೆಲೆ ತೆತ್ತಲು ಸಿದ್ಧಳಿದ್ದೇನೆ." ಎಂದು ತಮ್ಮ ಭಾಷೆ ಹಾಗೂ ಓದುಗರನ್ನು ಕುರಿತು ಅಭಿಮಾನದಿಂದ ನುಡಿಯುತ್ತಾರೆ.

ಭಾರತ ಮತ್ತು ಪಾಕಿಸ್ತಾನ ವಿಭಜನೆಯ ಕರಾಳತೆಗಳನ್ನು ತುಂಬಾ ಭೀಭತ್ಸವಾಗಿ ಚಿತ್ರಿಸಿದ್ದಾರೆ. ತಮ್ಮ ಸ್ನೇಹದವರು ದೂರವಾಗುವಾಗ ಸಂಬಂಧಗಳನ್ನು ಕಳಚಿಕೊಳ್ಳಬೇಕಾಯಿತು. ದೇಶಗಳು ಇಬ್ಭಾಗವಾದಂತೆ ಜನರು, ಕವಿಗಳು ಇಬ್ಭಾಗವಾಗಿ, ಮನಸ್ಸುಗಳು ಇಬ್ಭಾಗವಾಗಿ ದ್ವೇಷಗಳು ತಲೆ ಎತ್ತಿದವು. ಅಮೃತಾ ಮತ್ತು ಸಜ್ಜಾದ್‌ರ ಭೇಟಿಯು ನಿಂತಾಗ ಪತ್ರಗಳ ಮೂಲಕ ತಮ್ಮ ಸುಖ' ದುಃಖದ ವಿಚಾರಗಳನ್ನು ವಿನಿಮಯ ಮಾಡಕೊಳ್ಳುತ್ತಿದ್ದರು. ಕವನಗಳನ್ನು ಬರೆದು ಕಳುಹಿಸುತ್ತಿದ್ದರು. ಆದರೆ ಮುಂದೆ ರಾಜಕೀಯದಿಂದ ಪತ್ರ ವ್ಯವಹಾರ ನಿಂತಾಗ ತಮ್ಮ ಆಂತರಿಕ ಕ್ಷೋಭೆಗಳಿಗೆ ತುತ್ತಾದರು. ಜನ ಗೋಳಿನ ಕಥೆಗಳನ್ನು ಹೇಳಿಕೊಂಡು ಜನರಿಗೆ ಸಾಕಾಗಿ ಹೋಗಿತ್ತು. ಈ ಕತೆಗಳು ಅವರ ಜೀವಿತಕ್ಕೂ ಮೊದಲು ಕೊನೆಗೊಳ್ಳುವಂತಿರಲಿಲ್ಲ. ನಾನು ಹೆಣಗಳನ್ನು ನೋಡಿದೆ, ಹೆಣಗಳ ಜನರನ್ನು ನೋಡಿದೆ ಎಂದು ಹೇಳುತ್ತಾರೆ. ಜನ ಮಾನಸಿಕ ಸ್ಥಿಮಿತತೆಗಳನ್ನು ಕಳೆದುಕೊಂಡು ಹುಚ್ಚಾಸ್ಪತ್ರೆಗೆ ಸೇರಿದ್ದುಂಟು. ಮನೋವೈದ್ಯರ ಬಳಿ ಚಿಕಿತ್ಸೆಯನು ಪಡೆಯುತ್ತಿದ್ದರು. ದೇಶ ವಿಭಜನೆಯನ್ನು ಕುರಿತಂತೆ 'ವಾರೀಸ್ ಶಾಹ್ ಕವಿತೆಯನ್ನು ಬರೆದಿದ್ದರು. ಇದನ್ನು ಜನ ಜೇಬಿನಲ್ಲಿರಿಸಿಕೊಂಡು ಓದಿ ರೋಧಿಸುತ್ತಿದ್ದರು. ಈ ಕವಿತೆಯ ಸಾಲುಗಳನ್ನು ನೋಡುವುದಾದರೆ,

"ಇಂದು ವಾರೀಸ್ ಶಾಹ್‌ಗೆ ಹೇಳುವೆ; ನಿನ್ನ ಗೋರಿಯಿಂದ ಮಾತಾಡು ಹಾಗೂ ಪ್ರೀತಿಯ ಪುಸ್ತಕದ

ISSN: 2320-9941
ಪ್ರತಿಸ್ಪಂದ । Prathispandha

ಹೊಸದೊಂದು ಪುಟ ತೆರೆ. ಪಂಜಾಬ್‌ನ ಒಬ್ಬ ಪುತ್ರಿ ಅತ್ತದ್ದಕ್ಕೆ ಸುಧೀರ್ಘ ಕತೆ ಬರೆದೆ. ಇಂದು ಲಕ್ಷಾಂತರ ಪುತ್ರಿಯರು ಅಳುತ್ತಿದ್ದಾರೆ. ವಾರಿಸ್‌ಶಾಹ್, ನಿನ್ನನ್ನೇ ಕೇಳುತ್ತಿದ್ದೇನೆ; ಓ ನೋವುಂಡವರ ಸಂಗಾತಿಯೇ! ನಿನ್ನ ಪಂಜಾಬನ್ನು ನೋಡು ಬನಗಳಲ್ಲಿ ಹೆಣಗಳು ರಾಶಿಯಾಗಿ ಬಿದ್ದಿವೆ, ಚೀನಾಬ್ ರಕ್ತದಿಂದ ಓತಪ್ರೋತವಾಗಿದೆ."(ಪು.ಸಂ–30)

ತಲೆಮಾರುಗಳಿಂದ ಉಳಿಸಿಕೊಂಡಿದ್ದನ್ನೆಲ್ಲಾ ಕಳೆದುಕೊಳ್ಳಬೇಕಾಯಿತು. ಲೂಟಿಗಳನ್ನು ಮಾಡಲಾಯಿತು. ಹೀಗೆ ಹಲವಾರು ಸನ್ನಿವೇಶಗಳನ್ನು ದೇಶ ವಿಭಜನೆಯು ಸೃಷ್ಟಿಸಿತ್ತು. ಅಮೃತಾರು ತಮ್ಮ ಪತಿಗೆ ವಿಚ್ಛೇದನ ಕೊಡುವುದನ್ನು 'ಒಂದು ರುಣ' ಎಂದು ಭಾವಿಸಿ ಹೀಗೆ ಹೇಳುತ್ತಾರೆ. "ನನ್ನ ಪತಿಗೆ ಅವನ ಹಕ್ಕನ್ನು ನೀಡುತ್ತಿಲ್ಲ. ಅವರ ಪ್ರತಿಬಿಂಬವನ್ನು ಬಂಡಾಯದ ವಸ್ತುವಿನಂತೆ ಕದ್ದದ್ದಾಗಿದೆ.... ಅದನ್ನು ಮರಳಿಸಬೇಕಿದೆ" ಎನ್ನುತ್ತಾರೆ (ಪು.ಸಂ–36). ನಂತರ ಅವರಿಗೆ ಇಮ್ರೋಜ್‌ರ ಸ್ನೇಹ ಸಿಕ್ಕಿ ನ್ಯಾಯ ಒದಗಿಸಿತು. ಅವರಿಗೆ(ಪ್ರೀತಂಸಿಂಗ್) ಒಂಟಿತನ ಸಿಕ್ಕಿತು. ಅವರಿಗೆ ಏನನ್ನೇ ಕೊಡುವಲ್ಲಿ ಬದುಕಿನ ಕೈಗಳು ಜಿಪುಣವಾದವು ಎಂದು ಹೇಳುತ್ತಾರೆ.

ಅಮೃತಾರ ಮಗ ಹದಿಮೂರು ವರ್ಷದವನಾಗಿದ್ದಾಗ ತನ್ನ ತಾಯಿಯನ್ನು ಒಂದು ಪ್ರಶ್ನೆ ಕೇಳುತ್ತಾನೆ. "ನಾನು ಸಾಹಿರ್ ಅಂಕಲ್ ಮಗನೇ?" ಎಂದು ಪ್ರಶ್ನಿಸುತ್ತಾನೆ. ಈ ಪ್ರಶ್ನೆ ಎಲ್ಲಾ ಕಾಲಕ್ಕೂ ಸಲ್ಲುವಂತಹದ್ದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲೇ ಮಕ್ಕಳ ಗುರುತಿಸುವಿಕೆಯು ಅಡಗಿದೆ ಎಂದು ಅರಿಯಬಹುದು. ಇದೇ ಪ್ರಶ್ನೆಯನ್ನು ವಡ್ಡಾರಾಧನೆಯ 'ಕಾರ್ತಿಕ ಋಷಿ'ಯ ಕಥೆಯಲ್ಲಿ ತನ್ನ ತಾಯಿಯನ್ನು ಕೇಳುವಂತಹದ್ದು ಹೀಗೆಯೇ. ಪುರಾತನ ಕಾಲದಿಂದ ಈ ಪದ್ಧತಿ ರೂಢಿಯಲ್ಲಿರುವುದನ್ನು ನೋಡಬಹುದಾಗಿದೆ. "ತುಂಬಾ ಸೀಗರೇಟ್ ಸೇದುತ್ತೇನೆ. ಯಾವಾಗಲೂ ಒಂದು ದಿನ ವಿಸ್ಕಿ ಕೂಡ ಹಿತವೆನಿಸುತ್ತದೆ. ಅದನ್ನು ದಿನವೂ ಚಟದಂತೆ ಕುಡಿಯಲಾರೆ' ಆದರೆ ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಕುಡಿಯಬೇಕೆನಿಸುತ್ತದೆ. ಇವೆಲ್ಲವೂ ಯಾವುದೇ ಮಹಿಳೆಗೆ ಸಂಬಂಧಿಸಿದಂತೆ ಚರ್ಚೆಯ ವಿಯಷವೆನಿಸಿ ಆ ಮಹಿಳೆಯ ವ್ಯಕ್ತಿತ್ವಕ್ಕೆ ಗಾಂಭೀರ್ಯ ಶಬ್ಧ ಅನ್ವಯವಾಗದು ಗೊತ್ತಿದೆ" ಎಂದು ಆ ಗಾಂಭೀರ್ಯವನ್ನು ಮೀರಿ ಅಮೃತಾರು ಬದುಕಿದ್ದಾರೆ. ಅದನ್ನು ಒಂದು ಕಾವ್ಯದಲ್ಲಿ ಬರೆದು ರೂಪಕಗಳಲ್ಲಿ ಚಿತ್ರಿಸಿದ್ದಾರೆ. "ಒಂದು ನೋವಿತ್ತು, ನಾನು ಅದನ್ನು ಸಿಗರೇಟಿನಂತೆ ಸೇದಿದ್ದೇನೆ? ಕೆಲವು ಹಾಡುಗಳಿವೆ ಸಿಗರೇಟಿನಿಂದ ಊದಿ ಕೆಡವಿದೆ" ಎಂದು ಕಾವ್ಯರೂಪಗಳಲ್ಲಿ ಧೈರ್ಯದಿಂದ ಚಿತ್ರಿಸಿದ್ದಾರೆ. ತನ್ನೊಳಗಿನ ಸಾಹಿತಿಯನ್ನು ಹಿಂದೆ ಸರಿಸಿ ಕೇವಲ ಹೆಣ್ಣನ್ನು ಮೂರು ಪ್ರಸಂಗಗಳಲ್ಲಿ ಚಿತ್ರಿಸಿರುವುದನ್ನು ನೋಡಬಹುದು. ಒಂದು ರಾತ್ರಿಯ ಕನಸಿನಲ್ಲಿ ಮಗುವಿನ ಕನಸು ಬೀಳುತ್ತಿತ್ತು. ಕಣ್ಣು ಬಿಟ್ಟಾಗ ಖಾಲಿ, ಬಂಜೆ ಹಾಗೂ ಏಕಾಕಿ. ಒಬ್ಬ ಕೇವಲ ಮಹಿಳೆ ತಾಯಿಯಾಗುವುದು ಸಾಧ್ಯವಾಗದಿದ್ದರೆ ಬದುಕು ಬಯಸಿರಲಿಲ್ಲ ಎನ್ನುತ್ತಾರೆ. ಎರಡನೆಯದು ಸಾಹಿರ್ ಒಮ್ಮೆ ಮನೆಗೆ ಬಂದಾಗ ಅವರಿಗೆ ಸಣ್ಣಗೆ ಜ್ವರ ಇತ್ತು. ಆ ದಿನ ಕೊರಳಿಗೆ ಎದೆಗೆ ವಿಕ್ಸ್ ಸವರುತ್ತಾ ಇಡೀ ಜೀವನವನ್ನು ಕಳೆಯಬಲ್ಲೆ ಎನಿಸಿತು. ನನ್ನೊಳಗಿನ 'ಕೇವಲ ಹೆಣ್ಣಿಗೆ' ಆ ಕಾಲದಲ್ಲಿ ಲೇಖನಿಯ ಅವಶ್ಯಕತೆ ಇರಲಿಲ್ಲ. ಹಾಗೂ ಮೂರನೆಯದು 'ಕೇವಲ ಹೆಣ್ಣ'ನ್ನು ನೋಡಿದ್ದು.... ತನ್ನ ಸ್ಟೂಡಿಯೋದಲ್ಲಿ ಕುಳಿತುಕೊಂಡಿದ್ದ ಇಮ್ರೋಜ್ ತನ್ನ ತೆಳುವಾದ ಬ್ರಶ್ ಅನ್ನು ಕಾಗದದಿಂದ ಮೇಲೆತ್ತಿ ಒಮ್ಮೆ ಕೆಂಪು ಬಣ್ಣದಲ್ಲಿ ಅದ್ದಿದ. ಮತ್ತೆ ಎತ್ತಿ ನನ್ನ ಹಣೆಯ ಮೇಲೆ ಬೊಟ್ಟು ಇಟ್ಟ.... ಎಂದು ತನ್ನೊಳಗಿನ' ಕೇವಲ ಹೆಣ್ಣು' ಹಾಗೂ 'ಕೇವಲ ಸಾಹಿತಿ'ಯ ಹೀಗೆ ಎರಡು ಒಂದೊಂದರ ಮರೆಯಲ್ಲಿವೇ ಎಂಬುದನ್ನು ವಿಭಿನ್ನವಾಗಿ ಕಟ್ಟಿ–ಕೊಟ್ಟಿದ್ದಾರೆ. ಅಮೃತಾರ ಕಲ್ಪನೆಯ ಚಿತ್ರಣಗಳು, ಭಾವನೆಗಳು ಹಾಗೂ ಕೆಲವು ಕಥಾನಕಗಳನ್ನು ತುಂಬಾ ಸೊಗಸಾಗಿ ಕಾವ್ಯಾತ್ಮಕ ಭಾಷೆಯಲ್ಲಿ ತೆರೆದಿಡುತ್ತಾರೆ. ಇಮ್ರೋಜ್‌ರ ಬಗೆಗಿನ ಸ್ನೇಹ ದೀರ್ಘವಾಗಿದ್ದು ಅವರ ಸಂವಾದಗಳು ಕಲಾತ್ಮಕವಾಗಿ ಮೂಡಿ ಬಂದಿವೆ. ಒಮ್ಮೆ ಅಮೃತಾರು ನಕ್ಕು "ಇಮೂ, ನನಗೆ ಸಾಹಿರ್ ಸಿಕ್ಕಿದ್ದರೆ ನೀವು ನನ್ನನ್ನು ಸಂಧಿಸುತ್ತಿರಲಿಲ್ಲ" ಎಂದೆ. ಅವರು ನನಗಿಂತ ಮುಂದುವರೆದು ನನ್ನನ್ನು ಒಪ್ಪಿಕೊಳ್ಳುತ್ತಾ "ನಾನು ನಿಮಗೆ ಸಿಕ್ಕೇ ಸಿಗುತ್ತಿದ್ದೆ. ಸಾಹಿರ್ ಮನೆಯಲ್ಲಿ ನೀವು ನಮಾಜ್ ಮಾಡುತ್ತಿರುವುದನ್ನು ನೋಡಿಯು ನಿಮ್ಮನ್ನು ಸಂಧಿಸುತ್ತಿದ್ದೆ". (ಪು.ಸಂ–103) ಎಂದು ಹೇಳುವುದರಲ್ಲಿ ಇಮ್ರೋಜ್‌ರ ಪ್ರೀತಿ ಎದ್ದು ಕಾಣುತ್ತದೆ. ಇಮ್ರೋಜ್‌ರು ಅಮೃತಾರಿಗಿಂತ ಆರೂವರೆ ವರ್ಷ ಸಣ್ಣವರಾಗಿದ್ದು ಕೂಡ, ಒಂಟಿತನವನ್ನು ಅಳಿದು ಅವರು ಎಷ್ಟೋ ಸಲ, "ಇಲ್ಲ, ನೀವು ಬೇರೆ ಯಾರೂ ಅಲ್ಲ. ನೀವು ನನ್ನ ಮಗಳು, ನಾನು ನಿಮ್ಮ ಮಗ" ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗಾಗ ವಿನೋದವಾಗಿ ಮಾತನಾಡಿದ ಪ್ರಸಂಗಗಳು ಇವೆ. "ನಾನು ನಿಮ್ಮ ಶೀರ್ಷಾಸನ, ನೀವು ನನ್ನ ಪ್ರಾಣಾಯಾಮ" ಎಂದು ಹೊಗಳಿಕೊಳ್ಳುತ್ತಿದ್ದರು. ಇಮ್ರೋಜ್ ರು ವ್ಯಕ್ತಿತ್ವವನ್ನು 'ಮಹಾನ್ ಸತ್ಯ' ಎಂದು ಅಮೃತಾರು ಕರೆಯುತ್ತಾರೆ. ಅಮೃತಾರು ತಮ್ಮ 'ಯಾತ್ರೆಯ ಡೈರಿ' ಶೀರ್ಷಿಕೆಯ ಅಡಿಯಲ್ಲಿ "ಗಂಗಾಜಲದಿಂದ ಹಿಡಿದು ವೊಡ್ಕಾದವರೆಗಿನ ಈ ಪ್ರವಾಸ ಕಥನ ನನ್ನ ತೃಷೆಯ ಕಥನವಾಗಿದೆ" ಎನ್ನುತ್ತಾರೆ. ವಿದೇಶಗಳ ಪರಿಚಯ, ಅಲ್ಲಿನ ಪ್ರಮುಖ ಕವಿಗಳ ಕಾವ್ಯ ರಚನೆಯಂತಹ ಹಲವಾರು ಸಂಗತಿಗಳನ್ನು ಕಾಣಬಹುದು. ಸಜ್ಜಾದ್ ಹೈದರ್‌ನ ಸಂಬಂಧಗಳು ಸ್ನೇಹಮಯ

ಚಿತ್ರಣಗಳಾಗಿ ಗೋಚರಿಸುತ್ತವೆ. ಸಜ್ಜಾದರು "ಎಮ್ಮಿ" ಎಂದು ಅಮೃತಾರನ್ನು ಪ್ರೀತಿಯಿಂದ ಕರೆಯುತ್ತಿದ್ದು, ಅವರ ಪತ್ರಗಳು ಬರುತ್ತಿರುವಾಗ ಈ ಹೆಸರು ಗಡಿಗಳನ್ನು ಸೀಳಿಕೊಂಡು ನನ್ನ ಕಿವಿಯನ್ನು ತಲುಪುತಿತ್ತು. ಆದರೆ ಭಾರತ ಹಾಗೂ ಪಾಕಿಸ್ತಾನದ ನಡುವಣ ಉದ್ವಿಘ್ನತೆಯ ಸಮಯದಲ್ಲಿ ಪತ್ರ ವ್ಯವಹಾರ ಇಲ್ಲವಾದಾಗ ನನ್ನ ಕಿವಿಗಳು ಈ ದನಿಯಿಂದ ವಂಚಿತಗೊಳ್ಳುತ್ತವೆ" (ಪು.ಸಂ–80) ಎಂದು ದೇಶ ವಿಭಜನೆಯ ದುರಂತವನ್ನು ಚಿತ್ರಿಸುತ್ತಾರೆ.

ಪ್ರೊ. ಪ್ರೀತಂ ಸಿಂಗ್ ನಕ್ಕು "ಇಂದು ನೀವು ಈ ಗಂಟು ಮೂಟೆಗಳೊಂದಿಗೆ ಪ್ರಯಾಣ ಮಾಡಬೇಕು" ಎಂದು ವ್ಯಂಗ್ಯದಿಂದ ಮಾತನಾಡುವುದಕ್ಕೆ ಪ್ರತಿಯಾಗಿ ಅಮೃತಾ "ಜೀವನವಿಡೀ ಗಂಟು ಮೂಟೆಗಳೊಂದಿಗೆ ಪ್ರಯಾಣ ಮಾಡಿದ್ದೇನೆ, ಮನಷ್ಯರು ಎಲ್ಲಿದ್ದರು?" ಎಂದು ತನ್ನ ಏಕಾಕಿತನ ಬದುಕನ್ನು ಕುರಿತಂತೆ ಹೇಳುವುದನ್ನು ಗಮನಿಸಬಹುದು. ತಮ್ಮ ಮನದಾಳದ ನೋವುಗಳನ್ನು ಹೊರಹಾಕಲು ಲೇಖನಿಯನ್ನು ಅಸ್ತ್ರವನ್ನಾಗಿಸಿಕೊಂಡಿದ್ದರು. "ದೇವರಂಥ ಆಸರೆ ನಿನ್ನದು" (ಪು.ಸಂ–146). ಬರವಣಿಗೆಯ ಅಭಿವ್ಯಕ್ತಿಯನ್ನಾಗಿಸಿಕೊಂಡು ತಮ್ಮ ಮನದ ನೋವುಗಳಿಗೆ ರೂಪ ಕೊಡುತ್ತಿದ್ದರು. "ಬದುಕಿನ ಏರಿಳಿತಗಳಲ್ಲಿ ನನ್ನ ಒಡನಾಡಿ ಯಾರಾದರೂ ಇದ್ದರೆ ಅದು ನನ್ನ ಲೇಖನಿಯಾಗಿರುತ್ತಿತ್ತು" (ಪು.ಸಂ–147). ಜೊತೆಗೆ "ಬದುಕಿನ ಯಾವ ಯಾವ ಸುಗಂಧಕ್ಕೆ ಯಾವುದು ಗೊಬ್ಬರವಾಗುತ್ತದೋ ಗೊತ್ತಿಲ್ಲ.... ಸಾಹಿರ್ ಹಾಗೂ ಸಜ್ಜಾದ್‌ರ ಸ್ನೇಹ ಕೂಡ ಇಮ್ರೋಜ್‌ರ ಹೂವಿನಂತೆ ಅರಳಿದ ಸ್ನೇಹದಲ್ಲಿ ಸಮ್ಮಿಳಿತವಾಗಿರಬಹುದೆಂದು ಭಾವಿಸಿದ್ದೇನೆ. ಅದು ಗೊಬ್ಬರವಾಗಿ ಶಕ್ತಿ ನೀಡಿರಲೂಬಹುದು" (ಪು.ಸಂ–147) ಎಂದು ತಮ್ಮ ಸಂಬಂಧಗಳ ಸುತ್ತ ಲೇಖನಿಯಿಂದ ಗಟ್ಟಿಯಾದ ಬರಹವನ್ನು ಗೊಬ್ಬರಕ್ಕೆ ಹೋಲಿಸುತ್ತಾರೆ.

"ಕೊನೆಯ ಸಾಲುಗಳು" ಶೀರ್ಷಿಕೆಯಡಿಯಲ್ಲಿ ಒಬ್ಬ ಕುರುಬರ ಹುಡುಗನ ಪ್ರಸಂಗವನ್ನು ಚಿತ್ರಿಸಿರುವುದನ್ನು ಅಮೃತಾರ ಬದುಕಿಗೂ ಹೋಲಿಸಬಹುದು. "ಕ್ರೈಸ್ತ ನಾಟಕದಲ್ಲಿ ಕ್ರೈಸ್ತನ ಪಾತ್ರಕ್ಕೆ ಅವನನ್ನು ಆಯ್ಕೆ ಮಾಡಲಾಗುತ್ತದೆ. ಈ ಪಾತ್ರವನ್ನು ನಿರ್ವಹಿಸಿದಕ್ಕಾಗಿ ಆತ ಕಠೋರ ಪರಿಶ್ರಮ ಮಾಡಿ ಪಾತ್ರದ ಅಸ್ತಿತ್ವದಲ್ಲಿ ತಾದಾತ್ಮ್ಯವನ್ನು ಸಾಧಿಸಿ ಬಿಡುತ್ತಾನೆ. ಆಗ ಇಡೀ ಗ್ರಾಮದ ವಿರೋಧವನ್ನು ಕಟ್ಟಿಕೊಂಡು ಆತ ತನ್ನ ದೃಷ್ಟಿಯಲ್ಲಿ ಯಾವುದು ನ್ಯಾಯವೋ ಅದಕ್ಕಾಗಿ ಹೋರಾಡುತ್ತಾನೆ. ಆಗ ಗ್ರಾಮದ ಜನ ಕಲ್ಲೆಸೆದು ಸಾಯಿಸುತ್ತಾರೆ. ಅವನ ಒಳ ಹೊರಗನ್ನೆಲ್ಲಾ ಅರಿತು–ಕೊಂಡು ವ್ಯಕ್ತಿಯೊಬ್ಬ ಅವನನ್ನು ಬೆಟ್ಟದ ಮೇಲೆ ಧಪನ್ ಮಾಡುತ್ತಿದ್ದಾಗ, "ಇಂದು ಅವನ ಹೆಸರನ್ನು ಬರ್ಫಿನಲ್ಲಿ ಕೆತ್ತಲಾಗಿದೆ. ಬರ್ಫು ಕರಗಿದರೆ ಅವನ ಹೆಸರು ನದಿ, ಹಳ್ಳಗಳ ನೀರಿನಲ್ಲಿ ಬರೆಯಲ್ಪಟ್ಟಿರುತ್ತದೆ" ಎಂದು (ಪು.ಸಂ–191). ಇದನ್ನೇ ಅಮೃತಾರು "ನನ್ನ ಬಳಿ ಇದ್ದುದೆಲ್ಲಾ ಬರ್ಫಿನಲ್ಲಿ ಹೂತು ಹೋದರೆ ಈ ಬರ್ಫು ಕರಗಿದರೆ ನಿಷ್ಠಾವಂತರಾಗಿ ಲೇಖನಿ ಹಿಡಿದು ನದಿ, ಹಳ್ಳಗಳಾಗುತ್ತಾರೆ ಎಂದು ತಿಳಿಸಿದ್ದಾರೆ. ತಾವು ಬದುಕಿರುವಾಗಲೇ ಅವರ ಸಾಹಿತ್ಯ ಹಾಗೂ ಅವರನ್ನು ದ್ವೇಷಿಸುವ ಮೂಲಕ ಬದುಕಿದ್ದರೂ ಸಾಯಿಸುವ ಹಾಗೆ ಚಿತ್ರಣ ಇದೆ. ಹಾಗೂ ತಮ್ಮ ಸಾಹಿತ್ಯ ಹೊಸ ಲೇಖಕರನ್ನು ಸೃಷ್ಟಿಸಬಹುದು ಎಂಬ ಆಶಯವೂ ಇದೆ.

"ಹೋರಾಟ ಮುಂದುವರೆದಿದೆ" ಶೀರ್ಷಿಕೆಯಡಿಯಲ್ಲಿ ಇಂದಿರಾರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಇಂದಿರಾ ಗಾಂಧಿ ಕುರಿತು ಚಿತ್ರವನ್ನು ನಿರ್ಮಿಸಲಾಗಿತ್ತು. ಅದಕ್ಕೆ ಸಾಹಿತ್ಯವನ್ನು ಅಮೃತಾರು ಬರೆಯುತ್ತಿದ್ದರು. ಆಗ ಅಮೃತಾ ಒಂದು ಪ್ರಶ್ನೆಯನ್ನು ಕೇಳುತ್ತಾರೆ. "ಇಂದಿರಾ ಅವರೆ, ತಾವು ಮಹಿಳೆಯಾಗಿದ್ದೀರಿ. ಈ ವಿಷಯವಾಗಿ ಜನರು ತಮ್ಮ ದಾರಿಗೆ ಅಡಚಣೆ ಉಂಟು ಮಾಡಿದ್ದಾರೆಯೇ?" ಎಂದಾಗ ಇಂದಿರಾರು ಹೀಗೆ ಹೇಳುತ್ತಾರೆ. "ಇದರ ಕೆಲವು ಅನುಕೂಲತೆಗಳೂ ಇವೆ. ಅನಾನುಕೂಲತೆಗಳೂ ಇವೆ. ಆದರೆ ನಾನೆಂದೂ ಈ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಗಂಡು ಹೆಣ್ಣಿನ ಭೇದಭಾವದ ಬಗ್ಗೆ ತಲೆ ಕೆಡಿಸಿಕೊಳ್ಳದೇ ನನ್ನನ್ನು ಒಬ್ಬ ಮನುಷ್ಯಳೆಂದು ನಾನು ಸದಾ ಭಾವಿಸಿಕೊಂಡಿದ್ದೇನೆ. ನಾನು ಎಲ್ಲಾ ಕ್ಷೇತ್ರದಲ್ಲೂ ದಕ್ಷಳೆಂದೂ ಮೊದಲಿನಿಂದಲೂ ತಿಳಿದುಕೊಂಡಿದ್ದೆ. ಯಾವುದೇ ಸಮಸ್ಯೆಯನ್ನು ಗಂಡಸರಿಗಿಂತಲೂ ಚೆನ್ನಾಗಿ ಪರಿಹರಿಸಬಲ್ಲೆ. ಶಾರೀರಿಕವಾಗಿ ಹೆಚ್ಚು ಭಾರ ಹೊತ್ತುವುದನ್ನು ಬಿಟ್ಟು ಮಿಕ್ಕೆಲ್ಲಾ ಕೆಲಸಗಳನ್ನು ನಿಭಾಯಿಸಬಲ್ಲೆ. ಆದ್ದರಿಂದ ನಾನೊಬ್ಬ ಮಹಿಳೆ ಎನ್ನುವುದನ್ನು ಎಂದೂ ಯಾವುದೇ ತರಹದ ದೌರ್ಬಲ್ಯ ದೃಷ್ಟಿಯಿಂದ ನೋಡಿದವಳಲ್ಲ" ಎಂದು ಹೇಳುತ್ತಾರೆ. ಅಮೃತಾರು ಸಹ "ನನ್ನದೂ ಇದೇ ದೃಷ್ಟಿಕೋನ ಆಗಿತ್ತು" ಎಂದು ತಮ್ಮ ಹೋರಾಟದ ಹಾದಿಯನ್ನು ವ್ಯಕ್ತಪಡಿಸುತ್ತಾರೆ.(ಪು.ಸಂ–195) ಕೆಲವು ಸ್ನೇಹಿತರು ಒಂದು ಸಲಹೆ ನೀಡುತ್ತಿದ್ದರು. ಈ ಪುಸ್ತಕವನ್ನು ಬೇರೆ ಭಾಷೆಯಲ್ಲಿ ಪ್ರಕಟಿಸಬಹುದು. ಆದರೆ ಪಂಜಾಬಿಯಲ್ಲಿ ಅಲ್ಲ ಎನ್ನುತ್ತಿದ್ದರಂತೆ. ಆದರೆ ಅಮೃತಾರು "ನನ್ನ ಭಾಷೆಯ ಗಂಭೀರ ಓದುಗರು ಇದನ್ನು ಇಷ್ಟಪಡಲಾರರು. ಆದ್ದರಿಂದ ಯಾವುದೇ ಬೆಲೆ ತೆತ್ತರೂ ಪರ್ವಾಗಿಲ್ಲ. ನಾನು ನನ್ನ ಭಾಷೆ ಹಾಗೂ ಅದರ ಓದುಗರನ್ನು ಕುಬ್ಜರನ್ನಾಗಿ ಮಾಡಲಾರೆ. ಹೀಗಾಗಿ ಬೆಲೆ ತೆತ್ತಲು ನಾನು ಸಿದ್ದಳಿದ್ದೇನೆ." ತಮ್ಮ ಭಾಷೆಯ ಬಗೆಗಿನ ಅಭಿಮಾನವನ್ನು ಎತ್ತಿಹಿಡಿಯುತ್ತಾರೆ. ಹೀಗೆ ಅಮೃತಾರು

ISSN: 2320-9941


ಎಲ್ಲಾ ಸ್ತ್ರೀಯರು ಬದುಕಿದಂತೆ ಬದುಕಲಿಲ್ಲ. ಪುರುಷ ಸಮಾಜ ವಿಧಿಸುವ ಕೋಟೆಯನ್ನ ಭೇದಿಸಿ ತಮಗಿಷ್ಟದಂತೆ ಬದುಕಿ ತೋರಿಸಿದರು. ಆತ್ಮಕಥೆಯಾಗಿದ್ದರೂ ಎಲ್ಲಾ ರೀತಿಯ ಸಂವಾದಗಳನ್ನು ಕೃತಿಯು ನಿರೂಪಿಸುತ್ತದೆ. ದೇಶ ಗಡಿಗಳಾಚೆ ಅಮೃತಾರು ಎಂದಿಗೂ ಜೀವಂತವಾಗಿ ಅವರ ಬರಹದ ಮೂಲಕ ನಿಲ್ಲುವಂತಹವರು ಎಂಬುದರಲ್ಲಿ ಎರಡು ಮಾತಿಲ್ಲ ಎಂಬುದನ್ನು 'ರಸೀದಿ ತಿಕೀಟು' ಆತ್ಮಕತೆಯು ತಿಳಿಸುತ್ತದೆ.

■■

**ಆಕರ ಕೃತಿಗಳು:**


1. ರಸೀದಿ ತಿಕೀಟು ಅಮೃತಾ ಪ್ರೀತಂ, ಕನ್ನಡಕ್ಕೆ ಹಸನ್ ನಯೀಂ ಸುರಕೋಡ, ಲೋಹಿಯಾ ಪ್ರಕಾಶನ, ಬಳ್ಳಾರಿ. ಮೊದಲ ಮುದ್ರಣ 2004, ಬೆಲೆ100.ರೂ,ಪುಟಗಳು 206.
2. ಚಿಂತನೆಯ ಪಾಡು ರಹಮತ್ ತರೀಕೆರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು ಮೊದಲ ಮುದ್ರಣ 2010, ಬೆಲೆ 150 ರೂ, ಪುಟಗಳು 227
3. ಅನುವಾದ ಸಾಹಿತ್ಯ (ಸಂ)ಮೋಹನ್ ಕುಂಟಾರ್, ಕನ್ನಡ ಸಾಹಿತ್ಯ ಪರಿಷತ್ತು, ಮೊದಲ ಮುದ್ರಣ 2015, ಬೆಲೆ 360, ಪುಟಗಳು 680

ISSN: 2320-9941
Prathispandha । ಪ್ರತಿಸ್ಪಂದ
ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
Literature Culture Research Quarterly Journal

# ಸು.ರಂ. ಎಕ್ಕುಂಡಿ ಹಾಗೂ ಇಬ್ಬರು ರೈತರು

● ಡಾ. ಸರ್ವೇಶ ಬಿ. ಎಸ್.

ಸು. ರಂ. ಎಕ್ಕುಂಡಿ – ಸುಬ್ಬಣ್ಣ ರಂಗನಾಥ ಎಕ್ಕುಂಡಿ ಕನ್ನಡದ ಶ್ರೇಷ್ಠ ಕವಿಗಳು. ಬದುಕು ಕಲಿಸಿದ ಹಲವು ಪಾಠಗಳನ್ನೇ ಪ್ರಗತಿಯ ಮಾರ್ಗವನ್ನಾಗಿಸಿಕೊಂಡ ಎಕ್ಕುಂಡಿಯವರು 'ಕೆಂಡದ ಮೇಲೆ ನಡೆದವರಿಗೆ ಮಾತ್ರ ಕೆಂಡದ ಅನುಭವವನ್ನು ಬಣ್ಣಿಸಲು ಸಾಧ್ಯ' ಎಂಬ ನಿಲುವನ್ನು ಹೊಂದಿದ್ದವರು. ಎಕ್ಕುಂಡಿಯವರು ತಾವು ಶಿಕ್ಷಕರಾಗುವವರೆಗೆ ನಡೆದು ಬಂದ ಕೆಂಡದ ಮೇಲಿನ ನಡಿಗೆಯೇ ಇವರ ಕಾವ್ಯವನ್ನು ನಿರ್ದೇಶಿಸಿದೆ. ಬದುಕಿನ ವಾಸ್ತವಿಕ ನೆಲೆಯನ್ನು ಸದಾ ಸ್ಪರ್ಷಿಸುತ್ತಿದ್ದ ಅವರ ಚಿಂತನೆ ಅವರ ಕಾವ್ಯದ ವಸ್ತುವಾಗಿದ್ದರಲ್ಲಿ ಯಾವ ಅತಿಶಯೋಕ್ತಿಯು ಇಲ್ಲ. ಕಾಲ್ಪನಿಕ ಜಗತ್ತಿನ ಭ್ರಮೆಯಿಂದ ವಾಸ್ತವಿಕ ನೆಲೆಗೆ ಕಾವ್ಯದ ವಸ್ತುವನ್ನು ತಂದು ನಿಲ್ಲಿಸುವುದರಲ್ಲಿ ಅವರಿಗೆ ಅವರೇ ಸಾಟಿ. ಸು. ರಂ. ಎಕ್ಕುಂಡಿ ರಾಣೆಬೆನ್ನೂರಿನಲ್ಲಿ 1923ರ ಜನವರಿ 20ರಂದು ಜನಿಸಿದರು. ಮನೆ ಸಾಗಿಸಲು ಪುಟ್ಟ ಎಕ್ಕುಂಡಿ ಬದುಕಿನ ಭಾರವನ್ನು ಹೊರಬೇಕಾಯಿತು. ಈ ಭಾರವಾದ ಬದುಕಿನ ಮಧ್ಯೆಯೂ ಎಕ್ಕುಂಡಿ ಓದಿನತ್ತ ಆಕರ್ಷಿತರಾದರು. ಸವಣೂರಿನಲ್ಲಿ ಶ್ರೀ ಸತ್ಯಭೋಧ ಸೇವಾಸಂಘ ನಡೆಸುತ್ತಿದ್ದ ವಾಚನಾಲಯದ ಪುಸ್ತಕವನ್ನು ಸದಸ್ಯರ ಮನೆಗೆ ಮುಟ್ಟಿಸುವ ಕೆಲಸ ಹೊತ್ತರು. ಪ್ರತಿಫಲವಾಗಿ ವಾಚನಾಲಯದ ಪುಸ್ತಕಗಳನ್ನು ಪುಕ್ಕಟೆ ಓದುವ ಅವಕಾಶ ಸಿಕ್ಕಿತು. ಎಕ್ಕುಂಡಿ ಸಾಹಿತ್ಯಲೋಕಕ್ಕೆ ಕಾಲಿರಿಸಿದ್ದು ಹೀಗೆ. ಐದನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಗಾಳಿ ಬೆಳಕು ಯಾವುದೂ ಸುಳಿಯದಿದ್ದ ಗುಹೆಯಂಥ ಮನೆಯಲ್ಲಿ ಊಟ, ಉಡುಗೆ, ಬಟ್ಟೆಬರೆ ಎಲ್ಲವೂ ಅಷ್ಟಕ್ಕಷ್ಟೇ ಇದ್ದವು. ಹಬ್ಬದ ದಿನಗಳಿಗೂ ಉಳಿದ ದಿನಗಳಿಗೂ ವ್ಯತ್ಯಾಸವಿರದಿದ್ದ, ಶಾಲೆಯ ಫೀ ಕೊಡಲು ಅಸಾಧ್ಯವಾಗಿದ್ದ, ಯಾವ ವರ್ಷವೂ ಕಣ್ಣೀರು ಹಾಕದೆ

**ವಿಳಾಸ:** ಡಾ. ಸರ್ವೇಶ ಬಿ.ಎಸ್.
ಮುಖ್ಯಸ್ಥರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಕೆ. ನಾರಾಯಣಪುರ, ಕೊತ್ತನೂರು ಪೋಸ್ಟ್,
ಬೆಂಗಳೂರು– 560 077
sarvesh.bs@kristujayanti.com

ಪರೀಕ್ಷೆಗೆ ಕೂಡುವ ಅವಕಾಶ ಸಿಗದಿದ್ದ ರೀತಿಯಲ್ಲಿ ಬೆಳೆದರು ಎಕ್ಕುಂಡಿ.

ಹೈಸ್ಕೂಲಿನಲ್ಲಿ ಸಾಹಿತ್ಯದ ಗೀಳಿಗೆ ತಕ್ಕ ವಾತಾವರಣ ದೊರಕಿತು. 'ಉನ್ನತಿ' ಕೈಬರಹ ಪತ್ರಿಕೆ ಸಂಪಾದಿಸಿದ್ದೇ ಅಲ್ಲದೆ ಸಾಹಿತ್ಯಿಕ ಹರಟೆಗೆ ಜೊತೆಗಾರರು ಸಿಕ್ಕರು. ಪಾಠ ಮಾಡುತ್ತಿದ್ದ ಮಾಸ್ತರುಗಳು ಬಿಎಂಶ್ರೀ, ಟೆನಿಸನ್, ವರ್ಡ್ಸ್ ವರ್ತರನ್ನೂ ಪರಿಚಯಿಸಿದರು. ಎಕ್ಕುಂಡಿ ತಮ್ಮ ಹದಿನೈದನೇ ವಯಸ್ಸಿನಲ್ಲಿ ತಮ್ಮ ಶಾಲಾ ದಿನಗಳಲ್ಲಿಯೇ ಬರಹ ಆರಂಭಿಸಿದರು. ಜಗದೀಶಚಂದ್ರ ಬೋಸರ ಸಾವು ಎಕ್ಕುಂಡಿಯವರಲ್ಲಿ ಕವಿತೆಯಾಗಿ ಅರಳಿತ್ತು. 'ಒಬ್ಬ ವಿಜ್ಞಾನಿಯ ಸಾವು ಒಬ್ಬ ಕವಿಯ ಹುಟ್ಟಿಗೆ ಕಾರಣವಾದದ್ದು ವಿಚಿತ್ರ ಸಂಗತಿ' ಎನ್ನುತ್ತಿದ್ದರು ಎಕ್ಕುಂಡಿ. 'ನಾಡಹಬ್ಬ' ಎಕ್ಕುಂಡಿಯವರೊಳಗಿದ್ದ ಕವಿಯನ್ನು ಹೊರಗೆ ತರಲು ಮತ್ತಷ್ಟು ನೆರವಾಯಿತು. ನಾಡಹಬ್ಬಕ್ಕಾಗಿ ಹುಬ್ಬಳ್ಳಿಗೆ ಬಂದ ವಿ. ಕೃ. ಗೋಕಾಕ, ಬೇಂದ್ರೆ, ಬೆಟಗೇರಿಕೃಷ್ಣಶರ್ಮ, ಶಂ. ಬಾ. ಜೋಶಿ, ಶ್ರೀರಂಗರು ಸಾಹಿತ್ಯದ ಆಸಕ್ತಿ ಬೆಳಯಲು ಕಾರಣರಾದರು.

ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದ ಸಮಯದಲ್ಲಿ ಪೇಜಾವರ ಸದಾಶಿವರಾಯರು ನಿಧನರಾದರು. ಅವರ 'ವರುಣನಿಗೆ ಆಹ್ವಾನ'ದಿಂದ ಪ್ರಭಾವಿತಗೊಂಡಿದ್ದ ಎಕ್ಕುಂಡಿ, ಗಂಗಾಧರ ಚಿತ್ತಾಲ, ವರದರಾಜ ಹುಯಿಲಗೋಳ, ರಾಯ ಧಾರವಾಡಕರ, ವಿ. ಜಿ. ಭಟ್ ಇವರೊಂದಿಗೆ 'ವರುಣ ಕುಂಜ' ಬರಹಗಾರರ ಬಳಗವನ್ನು ಆರಂಭಿಸಿದರು. ಕಾಲೇಜಿನ ಈ ಬಳಗ ಪ್ರತಿವಾರ ಕಾವ್ಯ, ಕಥೆ, ಪ್ರಬಂಧ, ವಿಮರ್ಶೆ ಬರೆದು ಚರ್ಚೆ ನಡೆಸುತ್ತಿತ್ತು. ವಿ. ಕೃ. ಗೋಕಾಕ್, ರಂ. ಶ್ರೀ. ಮುಗಳಿಯವರ ಮಾರ್ಗದರ್ಶನ ಈ ತಂಡಕ್ಕೆ ಲಭಿಸಿ ಎಕ್ಕುಂಡಿಯವರ 'ಮಾತು ಮಥಿಸಿ' ಕವನ ಸಂಗ್ರಹಕ್ಕೆ ದಾರಿಮಾಡಿಕೊಟ್ಟಿತು. ವಿಲಿಂಗ್ಡನ್ ಕಾಲೇಜಿನಲ್ಲಿ ಓದುವಾಗಲೇ ಎಕ್ಕುಂಡಿಯವರ ಮೊದಲ ಕವನ ಸಂಕಲನ 'ಸಂತಾನ'ವನ್ನು ರಂ. ಶ್ರೀ. ಮುಗಳಿ ಪ್ರಕಟಿಸಿದರು. ಎಕ್ಕುಂಡಿಯವರ ನಂತರದ ಪಯಣ ಬಂಕಿಕೊಡ್ಲಕ್ಕೆ. ಅಲ್ಲಿಯೇ ಶಿಕ್ಷಕರಾದರು. ಬಂಕಿಕೊಡ್ಲ ಎಕ್ಕುಂಡಿಯವರ ಎದೆಯೊಳಕ್ಕಿಳಿಯಿತು. ಸಮುದ್ರ ತೀರದ ಈ ಊರಿನಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲ ಇದ್ದ ಎಕ್ಕುಂಡಿಯವರ ಕವನಗಳಲ್ಲಿ ಅಲ್ಲಿನ ನಿಸರ್ಗ ಹೆಣೆದುಕೊಂಡಿದೆ. ಹಾದಿಯ ಮಧ್ಯದಲ್ಲಿ ಕೇಳಿ ಬರುವ ಕೋಗಿಲೆಯ ಧ್ವನಿ, ಗದ್ದೆಗಳ ಮಧ್ಯದಿಂದ ಧುತ್ತೆಂದು ಹಾರುವ ಬೆಳ್ಳಕ್ಕಿಗಳು, ಭೋರ್ಗರೆವ ಉಪ್ಪುಕಡಲು, ಚಾಮರ ಬೀಸಿ ಹಾಡುವ ತೆಂಗಿನ ಮರಗಳ ಸಾಲು ಸಾಲು, ಕೋಪಿಸಿ ಮೈಮೇಲೆ ದಿನಗಟ್ಟಲೇ ಸುರಿದು ಹಾವಳಿ ಎಬ್ಬಿಸುವಷ್ಟು ಮಳೆರಾಯ ಇವೆಲ್ಲಾ ಎಕ್ಕುಂಡಿಯವರ ಕವನಗಳಲ್ಲಿ ಕುಸುರಿಗೆಲಸ ನಡೆಸಿವೆ. ಆದರೆ ನಿಸರ್ಗದಲ್ಲಿ ತೊಯ್ದು ಎಕ್ಕುಂಡಿಯವರಿಗೆ ಅಷ್ಟೇ ವರ್ಷ ಆ ಕಡಲತಡಿಯ ತೆಂಗಿನ ಗರಿಕೆಯ ಗುಡಿಸಲುಗಳಿಂದ ನಿಟ್ಟುಸಿರುಗಳು ಸಹಾ ಕೇಳಿಸಿವೆ. ಕಡಲ ತೀರದಲ್ಲಿ ಬೆಂಕಿ ಹಚ್ಚಿ ಗುಮಟೆ ನುಡಿಸುತ್ತಾ ಹಾಡು ಹೇಳುತ್ತಾ ಇದ್ದವರ ಹಿಂದೆ ಎಷ್ಟು ನಿಟ್ಟುಸಿರು ಇದೆಯೆಂಬುದು ಎಕ್ಕುಂಡಿಯವರಿಗೆ ಗೊತ್ತಿರುವುದರಿಂದಲೇ ನಿಸರ್ಗವನ್ನು ಹಿಂದೆ ತಳ್ಳಿ ಅವರ ಕಾವ್ಯದಲ್ಲಿ ಜನಸಾಮಾನ್ಯರು ಇಣುಕುತ್ತಾರೆ. ಎಕ್ಕುಂಡಿ ಅವರ ಕಾವ್ಯದ ಕೇಂದ್ರ ಮನುಷ್ಯನೇ ಆಗಿರುವುದಕ್ಕೂ, ಅವರ ಪ್ರಧಾನ ಕಾವ್ಯಪ್ರಕಾರ ಕಥನಕವನವೇ ಆಗಿರುವುದಕ್ಕೂ ಕಾರಣಗಳು ಸ್ಪಷ್ಟವಾಗಿಯೇ ಇವೆ. 'ಬೆಳ್ಳಕ್ಕಿಗಳು' ಸಂಕಲನದ ಕೆಲವು ರಚನೆಗಳು ಕೊಂಚ ಭಿನ್ನವಾದರೂ ಒಟ್ಟಾರೆ ಎಕ್ಕುಂಡಿ ಕಾವ್ಯಪ್ರಪಂಚ ಕಥನಕವನಗಳಿಂದಲೇ ಸಮೃದ್ಧವಾಗಿವೆ. 'ಕೊರಗು' ಎಂಬ ಕವನದಲ್ಲಿ ಏನಿಲ್ಲ ಎಂದು ಹೇಳುವಾಗ, 'ಬುತ್ತಿ' ಕವನದಲ್ಲಿ ಏನಾಗಬೇಕು ಎಂದು ಒತ್ತಿ ಹೇಳುವಾಗ, 'ಬೆಳ್ಳಕ್ಕಿಗಳು' ಕವನದಲ್ಲಿ ಭರವಸೆಯ ಹಾಡನ್ನು ಹಾಡುವಾಗ, 'ಶರಣು' ಕವನದಲ್ಲಿ ತನ್ಮಯತೆಯಿಂದ ಪ್ರಾರ್ಥಿಸುವಾಗ ಕೂಡ ಮನುಷ್ಯಾವಸ್ಥೆಯ ನೆಲೆಗಳಿಂದ ಎಕ್ಕುಂಡಿ ಕವನಗಳು ಬಿಡುಗಡೆ ಹೊಂದಿವೆ ಅನ್ನಿಸುವುದಿಲ್ಲ. ಪ್ರಕೃತಿಯನ್ನು ಕುರಿತು ಹಾಡುವಾಗಲೂ ಕವಿ, ಮನುಷ್ಯ ಸಮಾಜವು ಪ್ರಕೃತಿಯಿಂದ ಪಡೆಯಬಹುದಾದ ಜೀವನೋತ್ಸಾಹದ ಕಡೆಗೆ ಒಂದು ಕಣ್ಣಿಟ್ಟಿರುವುದು ಕಾಣುತ್ತದೆ.

ಪುತಿನ ಅವರು ಬಣ್ಣಿಸಿದಂತೆ ಎಕ್ಕುಂಡಿ 'ಸಹಜ ಕವಿ'ಯಾದ ಕಾರಣದಿಂದಲೇ ಇವರ ಕಾವ್ಯದಲ್ಲಿ ಜನಸಾಮಾನ್ಯರು ಮೂಡಿ ಬಂದರು. 'ನಂ.4, ಅಂತರ್ಸನ್ ಬೀದಿಯಲ್ಲಿ, ಮನೆಯ ತೊಟ್ಟಿಲು, ಹಾಸಿಗೆ, ದುಪ್ಪಟ್ಟಿ, ಲಾಲಿಯ ಹಾಡುಗಳು, ಹರಾಜನ್ನು ನೋಡುತ್ತಾ ನಿಂತ ಕಾರ್ಲ್ ಮಾರ್ಕ್ಸ್, ಬಿಕ್ಕುತ್ತಿರುವ ಹೆಂಡತಿ ಹೆಲೆನ್, ಬಂಡವಾಳ ಬರೆಯುವುದರಲ್ಲಿ ನಿರತನಾಗಿರುವ ಶ್ರಮಜೀವಿ, ಬಂಧುವಿನ ಮನೆಗೆ ಬೆಳಕಾದ ಎಂಗೆಲ್ಸ್, ಹೆರಿಗೆ ಆಸ್ಪತ್ರೆಯ ಪೌಡರ್, ಪಿಯರ್ಸ್ ಪರಿಮಳದ ಹೊದಿಕೆಯಿಂದ ದೂರವಾಗಿ ಎರಡು ಲಾರಿಗಳ ಕೆಳಗೆ ಕಟ್ಟಿರುವ ಸೀರೆ ತುಂಡನ್ನು ಅಪ್ಪಿ ಮಲಗಿರುವ ಚಿನ್ನಮ್ಮನ ಕಂದ, ಎಸೆದ ಬ್ರೆಡ್ಡಿನ ತುಂಡು ಆಯಲು ತೊಟ್ಟಿಯೊಳಗೆ ಇಳಿಯುವ ಮಡಿವ ಕಸುವಿರುವ ಹಸಿದ ಕೈಗಳು, ಉಳ್ಳವರ ಎದೆಯಿಂದ ಬಂದಂಥ ಬೆಣಚು ಕಲ್ಲುಗಳ ಮೇಲೆ ಕಾಲಿಟ್ಟು ಗಾಯಗೊಂಡ ಕೂಲಿಕಾರರು, ಕೆಲಸವೇ ಶಿವಧ್ಯಾನವಾದ ದಾಸಿಮಯ್ಯ, ಹಾಲೆಂದೇ ಹಿಟ್ಟು ನೀರು ಕುಡಿದ ಅಶ್ವತ್ಥಾಮ,

ಶ್ರೀಧರನಾಮದ ಖಜಾನೆ ತೆರೆಯುವ ಬೀಗದಕೈ ಹಿಡಿದು ಹಣದ ಖಜಾನೆಯಿಂದ ಹೊರಬಿದ್ದ ಪುರಂದರದಾಸ, ವಿಷದ ಬಟ್ಟಲಿಗೆ ಬಲಿಯಾದ ಸಾಕ್ರೆಟಿಸ್, ಎರಡು ದಂತಗಳ ಬೆಸೆದು ದೂರವಿದ್ದವರನ್ನು ಹತ್ತಿರ ತಂದ ಮಧ್ವಮುನಿ, ಏಸುಕ್ರಿಸ್ತ, ಜಬಾಲ, ರಂತಿದೇವ, ಪ್ರವಾದಿ, ಕಳ್ಳ ಡಕಾಯಿತ, ಅಂತೆಯೇ ಬಕುಲದ ಹೂಗಳನ್ನು ನೋಡಿ ಒಂದರೆಕ್ಷಣ ನೋವೆಲ್ಲವನ್ನೂ ಮರೆತ ಜೋಡಿ □ ಎಕ್ಕುಂಡಿಯವರ ಕವನಗಳ ಕ್ಯಾನ್ವಾಸ್ನಲ್ಲಿ ಜನರೊಂದಿಗೆ ಸಂಪಾದಿಸುವವರು ಅದೆಷ್ಟು ಜನ! ಎಕ್ಕುಂಡಿಯವರೇ ಬಣ್ಣಿಸುವ ಹಾಗೆ □ ಅವರ ಕಾವ್ಯ □ 'ಶಬರಿ, ಸುಧಾಮ, ಗಜೇಂದ್ರ, ಕುಬ್ಜೆ ಮತ್ತು ಪುರಂದರದಾಸರ ಭಕ್ತಿ ಮತ್ತು ಪ್ರೇಮಗಳನ್ನು ಕುರಿತು ಬಣ್ಣಿಸುತ್ತದೆ. ಏಸು, ಪ್ರವಾದಿ ಹಾಗೂ ದೇವರ ದಾಸೀಮಯ್ಯರಂಥ ಆತ್ಮದ ಒಕ್ಕಲಿಗರನ್ನು ಬಣ್ಣಿಸುತ್ತದೆ'. ಇಷ್ಟಕ್ಕೇ ನಿಲ್ಲದೆ ಹಸಿದವರನ್ನೂ ಬಡತನವನ್ನೂ ಕುರಿತು ಹೇಳಿದ ಕಾರ್ಲ್ ಮಾರ್ಕ್ಸ್ ಮತ್ತು ಶ್ರಮಜೀವಿಗಳ ಮನ ಕರಗಿಸುವ ಕಥೆಗಳಲ್ಲಿ ಶೋಷಿತರ ಹಾಗೂ ನಿರ್ಗತಿಕರ ಪರವಾಗಿ ಅದು ಕ್ಷೋಭೆಗೊಂಡು ಧ್ವನಿಯೆತ್ತಿದೆ. ನನ್ನ ಕಾವ್ಯವು ಉಳುವ ಕೈಗಳನ್ನೂ, ಪ್ರಾರ್ಥಿಸುವ ಕೈಗಳನ್ನೂ ಕುರಿತು ಹಾಡುತ್ತದೆ ಎನ್ನುತ್ತಿದ್ದರು ಎಕ್ಕುಂಡಿ. ಮಾರ್ಕ್ಸ್ ಮತ್ತು ಮಧ್ವ ಬದುಕಿನಿಂದ ಆಯ್ದು ಕಟ್ಟಿದ ಕವಿತೆಗಳು ಎಕ್ಕುಂಡಿಯವರ ಕಾವ್ಯದ ಎರಡು ದಂಡೆಗಳಂತೆ ಹಾಗೂ ಅವರೆ ಕವಿತೆಯಲ್ಲಿ ಹೇಳುವಂತೆ–

ದೂರವಿದ್ದವರನ್ನು ಹತ್ತಿರಕ್ಕೆ ತರಬೇ
ಕು, ಹರಿವ ಹೊಳೆಗೂ ಉಂಟು ಎರಡು
ತೋಳು, ನೆಲವನ್ನಪ್ಪಿದ ಎರಡು ದಂಡೆ
ಗಳ ಬಾಂಧವ್ಯ ಬೆಸೆಯ ಬೇಕಲ್ಲವೇ?
ನಮ್ಮ ಬಾಳು–

ಎಂಬಂತೆ ಎಕ್ಕುಂಡಿಯವರ ಕಾವ್ಯ ಈ ಎರಡೂ ದಂಡೆಗಳನ್ನು ಬೆಸೆದಿದೆ. ಅವರು ಹೇಳುವ ಮಹತ್ವದ ಮಾತು "ಅನುಯಾಯಿಗಳನ್ನು ನೋಡಿ ನಾವು ಮತದ ಬಗ್ಗೆ ನಿರ್ಣಯ ನೀಡಬಾರದು. ಮತವನ್ನು ನೋಡಿ ಅನುಯಾಯಿಗಳನ್ನು ನಿರ್ಧರಿಸಬೇಕು. ಮನಸ್ಸನ್ನು ವಿಶಾಲಗೊಳಿಸುವ ಎಲ್ಲವನ್ನೂ ಸ್ವೀಕರಿಸಬೇಕು, ಸಂಕುಚಿತಗೊಳಿಸುವುದನ್ನು ಬಿಟ್ಟುಬಿಡಬೇಕು." ಎಕ್ಕುಂಡಿ ಹೇಳುವ ಕಥೆಗಳು ಕಾವ್ಯೋದ್ದೇಶಕ್ಕೆ ಬದ್ಧವಾಗುವಂತೆ ಕವಿಯ ದರ್ಶನಕ್ಕೂ ಅರ್ಥಪೂರ್ಣವಾಗಿ ದುಡಿಯುತ್ತದೆ. ಎಕ್ಕುಂಡಿ ಮೂಲತಃ ಕವಿ, ಕತೆಗಾರರಲ್ಲ. ಆದ್ದರಿಂದಲೇ ಇವು ಪದ್ಯರೂಪದಲ್ಲಿ ಹೇಳಿರುವ ಕತೆಗಳಲ್ಲ, ಕಥನಕವನಗಳು. ಇಂದೊಂದು ನಿರಂತರ ಕಥನ. ಎಕ್ಕುಂಡಿ ಅವರ ಸಮಗ್ರ ಕಾವ್ಯವನ್ನು ಡಿ. ವಿ. ಪ್ರಹ್ಲಾದ್ ಸಂಚಯದ ಮೂಲಕ ಪ್ರೀತಿಯಿಂದ ಪ್ರಕಟಿಸಿದರು. ಸು.ರಂ. ಎಕ್ಕುಂಡಿ ಅವರಿಗೆ 1970ರಲ್ಲಿ ಸೋವಿಯತ್ ಲ್ಯಾಂಡ್ ಪ್ರಶಸ್ತಿ, 1982 ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1992ರಲ್ಲಿ 'ಬಕುಳದ ಹೂಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿದ್ದವು. 1984ರಲ್ಲಿ ರೋಮ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಸು.ರಂ. ಎಕ್ಕುಂಡಿಯವರು 1995ರ ಆಗಸ್ಟ್ 20ರಂದು ನಿಧನರಾದರು.

ಇಬ್ಬರು ರೈತರು ಕಥನಕವಿತೆ 'ಬಕುಲದ ಹೂಗಳು' ಕವನ ಸಂಕಲನದ ಪ್ರಮುಖವಾದ ಕವಿತೆ. 1991ರಲ್ಲಿ ಅಭಿನವ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ ಕೃತಿ 'ಬಕುಲದ ಹೂಗಳು'. 1992ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ. 35 ಕಥನಕವಿತೆಗಳಿರುವ ಕೃತಿ. ಮಾರ್ಕ್ಸ್‌ವಾದದ ಚಿಂತನೆಗಳಿಂದ ಪ್ರಭಾವಗೊಂಡು ಸಮಾಜದ ಎಲ್ಲ ವರ್ಗಗಳಿಗೂ ಸಿಗಬೇಕಾದ ಸ್ಥಾನಮಾನಗಳ ಕುರಿತು ಸೂಕ್ಷ್ಮ ಚಿಂತನೆಯನ್ನು ಹೊಂದಿದ್ದ ಕವಿ ಎಕ್ಕುಂಡಿಯವರು. ಈ ಕವಿತೆಯಲ್ಲಿ ಕಾವ್ಯಲೋಕದ ರೊಮ್ಯಾಂಟಿಕ್ ಚಿಂತನೆಯನ್ನು ನೇರವಾಗಿ ವಾಸ್ತವದ ನೆಲೆಗೆ ತಂದು ಕೂರಿಸಿರುವ ಬಗೆ ಕವಿಯ ಸಾಮಾಜಿಕ ಪ್ರಜ್ಞೆಯನ್ನು ಸ್ಪಷ್ಟಪಡಿಸುತ್ತದೆ. ಕವಿ ಕಾಳಿದಾಸರ ಕಾವ್ಯದ ವಸ್ತುವನ್ನು ಹೀಗೂ ನೋಡಬಹುದೆಂಬ ಹೊಸ ಚಿಂತನೆಯನ್ನು ಇಲ್ಲಿ ಮೂಡಿಸಿದ್ದಾರೆ. ಅಸಹಾಯಕ ಹಾಗೂ ಮುಗ್ಧ ರೈತರ ಪಾತ್ರಗಳ ಮೂಲಕ ಮೋಡಗಳ ಉಪಯೋಗದ ಕುರಿತು ಚಿಂತಿಸುವಂತೆ ಮಾಡಿದ್ದಾರೆ.

ಕವಿ ಕಾಳಿದಾಸನ ಜನನ ಹಾಗೂ ಆತನ ಜೀವತ ಕಾಲಕ್ಕೆ ಸಂಬಂಧಿಸಿದಂತೆ ಹಲವು ಗೊಂದಲಗಳಿರುವುದುನ್ನು ನಾವು ಕಾಣುತ್ತೇವೆ. ಕಾಳೀಮಾತೆಯ ಆಶೀರ್ವಾದದಿಂದ ಪಾಂಡಿತ್ಯವನ್ನು ಪಡೆದನೆನ್ನುವ ಕಥೆಯಿಂದಾಗಿ ಹಲವು ಕಾವ್ಯಗಳನ್ನು ನಾಟಕಗಳನ್ನು ಸೃಜಿಸಿದ್ದಾನೆನ್ನುವುದನ್ನು ನಾವು ಕಾಣಬಹುದು. ರಘುವಂಶಂ, ಕುಮಾರ ಸಂಭವ, ಋತುಸಹಾರ, ಅಭಿಜ್ಞಾನ ಶಾಕುಂತಲೆ, ಮೇಘಧೂತ ಹೀಗೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಕಾಳಿದಾಸ ತನ್ನ ಎಲ್ಲಾ ಕಾವ್ಯಗಳಲ್ಲೂ ಪ್ರಕೃತಿಯ ವರ್ಣನೆ, ಗಂಡು ಹೆಣ್ಣಿನ ಪ್ರೇಮ, ವಿರಹ ಹಾಗೂ ಮನಸನ್ನು ಸದಾ ಪುಳಕಿತಗೊಳಿಸುವ ವರ್ಣನೆಗಳನ್ನು ಓದುಗರಿಗೆ ಉಣಬಡಿಸಿ ರಸಿಕರ ಎದೆಯನ್ನು ಸೂರೆಗೊಂಡ ಕವಿ. ಈ ಕವಿಯ ಕಾವ್ಯ ಎಷ್ಟು ಜನಪ್ರಿಯವಾಗಿತ್ತೆಂದರೆ ಕೇವಲ ಪಂಡಿತ ವರ್ಗ ಮಾತ್ರವಲ್ಲದೆ ಸಾಮನ್ಯ ಜನರೂ ಕೂಡ ಕಾಳಿದಾಸನ ಕವಿತೆಯ

ಶೈಲಿಗೆ ಸೋತುಹೋಗಿದ್ದರು. ಹೀಗೆ ಕಾವ್ಯ ವೈಶಿಷ್ಟ್ಯತೆಗೆ ಸೋತುಹೋಗಿದ್ದ ಇಬ್ಬರು ರೈತರು ತಮ್ಮ ವಾಸ್ತವಿಕ ನೆಲೆಯ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಕಾಳಿದಾಸನ ಕಾವ್ಯದ ವಸ್ತುವನ್ನು ವಾಸ್ತವಿಕತೆಗೆ ತರುವಂತೆ ಮನವಿ ಮಾಡಲು ಕಾಳಿದಾಸನನ್ನು ಹುಡುಕಿಕೊಂಡು ಬರುತ್ತಾರೆ. ಅವರ ಮುಗ್ದತೆಯನ್ನು ಕವಿ ಎಕ್ಕುಂಡಿಯವರು ಅತ್ಯಂತ ಆಪ್ತವಾಗುವಂತೆ ಚಿತ್ರಿಸಿದ್ದಾರೆ.

ಕಾಳಿದಾಸನ ಮೇಘಧೂತ ಅತ್ಯಾಪ್ತವೆನಿಸುವ ಖಂಡಕಾವ್ಯ. ಈ ಮೇಘಧೂತದ ಒಂದು ಎಳೆಯನ್ನು ವಾಸ್ತವಿಕ ನೆಲೆಗೆ ಕವಿ ಸು.ರಂ. ಎಕ್ಕುಂಡಿಯವರು ಆಪ್ತವೆನ್ನಿಸುವ ಹಾಗೆ ಹೆಣೆದಿದ್ದಾರೆ. ಶಾಪಗ್ರಸ್ತ ಯಕ್ಷನು ತನ್ನ ಪ್ರಿಯತಮೆಯ ವಿರಹದಲ್ಲಿ ನೊಂದು ತನ್ನ ಸಂದೇಶವನ್ನು ಆಷಾಢದ ಮೋಡಗಳೊಟ್ಟಿಗೆ ಸಂದೇಶವನ್ನು ಕಳುಹಿಸಿಕೊಡುವಂತೆ ಮಾಡಿರುವುದೇ ಕಾಳಿದಾಸನ ಸೃಜನ ಶಕ್ತಿಗೆ ಹಿಡಿದ ಕನ್ನಡಿ. ಒಬ್ಬ ಯಕ್ಷ ಅಥವ ಅತಿಮಾನುಷ ಈ ಕೃತಿಯ ಮುಖ್ಯ ಪಾತ್ರಧಾರಿ. ಈ ಯಕ್ಷನ ಅತಿಮಾನುಷ ಶಕ್ತಿಗಳನ್ನು ಅವನ ಯಜಮಾನ ಕುಬೇರನು ಕಸಿದುಕೊಂಡು, ಅವನನ್ನು ಬಹಿಷ್ಕರಿಸಿ ಒಂದು ವರ್ಷದ ಕಾಲಾವಧಿಗೆ ಭೂಮಿಗೆ ಅಟ್ಟುತ್ತಾನೆ. ಈ ಸಮಯವನ್ನು ಆ ಯಕ್ಷ ರಾಮಗಿರಿಯ ಪರ್ವತ ಪ್ರದೇಶಗಳಲ್ಲಿ ಹಾಗು ಅಲ್ಲಿನ ವಿರಕ್ತ ಮಂದಿರಗಳಲ್ಲಿ ತನ್ನ ಹೆಂಡತಿಯ ಪ್ರೀತಿಯನ್ನು ಹಂಬಲಿಸುತ್ತಾ ಕಳೆಯುತ್ತಾನೆ. ಅಂದು ಆಷಾಢ ಮಾಸದ ಮೊದಲನೆಯ ದಿನ. ಮೋಡಗಳು ಹೆಪ್ಪುಗಟ್ಟಿರುವುದನ್ನು ನೋಡಿ ಅವನ ಮನಸ್ಸಿನಲ್ಲಿ ಒಂದು ಕಲ್ಪನೆಯು ಮೂಡುತ್ತದೆ. ಹಿಮಾಲಯದ ತಪ್ಪಲಲ್ಲಿರುವ ಯಕ್ಷರ ಪಟ್ಟಣವಾದ ಅಲಕಾ ಎಂಬ ಪುರಿಯಲ್ಲಿರುವ ತನ್ನ ಮಡದಿಗೆ ತನ್ನ ಪ್ರೇಮದ ಸಂದೇಶವನ್ನು ಮೋಡಗಳೇ ತಲುಪಿಸಬಹುದಲ್ಲವೇ ಎಂದು ಊಹಿಸಿಕೊಳ್ಳುತ್ತಾನೆ. ಈ ಊಹೆಯೇ ನಮ್ಮ ಕವಿ ಎಕ್ಕುಂಡಿಯವರಲ್ಲಿ ಮತ್ತೊಂದು ಹೊಸ ಆಲೋಚನೆಯನ್ನು ಮೂಡಿಸುತ್ತದೆ. ಅದರ ಫಲವೇ ಈ 'ಇಬ್ಬರು ರೈತರು' ಎಂಬ ಕಥನಕವನ.

ಸಹಾಯಾರ್ಥವಾಗಿ ಕವಿ ಕಾಳಿದಾಸನನ್ನು ಹುಡುಕಿಕೊಂಡು ಬಂದ ರೈತರಿಬ್ಬರು ಕುಂಭರಾಮ ಹಾಗೂ ಭೈರೋಸಿಂಹ ಸಹಜ ಮುಜುಗರದಿಂದಲೇ ಕವಿತೆಯ ಪ್ರಾರಂಭದಲ್ಲಿ ಮಾತನಾಡಿಕೊಳ್ಳುತ್ತಾರೆ. ಒಬ್ಬರಿಗೊಬ್ಬರು ಕುರುಹುಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಾರೆ. ಇಡೀ ಚೈತ್ರವೇ ಮನೆ ಮಾಡಿಕೊಂಡಿರುವ ಈ ಜಾಗವೇ ಇರಬೇಕು ಅವರ ನೆಲೆ ಎನ್ನುವಲ್ಲಿ ಭೈರೋಸಿಂಹನ ಸೂಕ್ಷ್ಮತೆ ಓದುಗರ ಅರಿವಿಗೆ ಬರುತ್ತದೆ. ಚಿಗುರೆಲೆಯ ಮೊಗ್ಗುಗಳು, ದುಂಬಿಗಳ ರಸಬಯಸಿ ಬಂದು ಮಾಡುವ ಝೇಂಕಾರ ಇವೆಲ್ಲವೂ ಆ ಜಾಗದ ಮಹತ್ವವನ್ನು ಜೊತೆಗೆ ಕಾಳಿದಾಸನ ವಿವಿಧ ಕಾವ್ಯ ಕೃತಿಗಳಲ್ಲಿ ನಮಗೆ ಕಾಣಿಸುವ ಸನ್ನಿವೇಶಗಳನ್ನು ನೆನಪಿಸುತ್ತವೆ.

ಇದೇ ಮನೆ ಇರಬೇಕು ಕುಂಭರಾಮ, ಕಂ
ಡೆಯ ಚೈತ್ರವೇ ಹೂಡಿದೆ ಬಿಡಾರ ಇಲ್ಲಿ
ಚಿಗುರೆಲೆ ಮೊಗ್ಗೆಗಳು ತುಂಬಿವೆ ದುಂ
ಬಿಗಳು ರಸಬಯಸಿ ಬಂದಿವೆ ಶಬ್ದದಲ್ಲಿ'

ಇಲ್ಲಿ ಸ್ನೇಹಿತರಿಬ್ಬರು ಹೊಸ ಜಾಗಕ್ಕೆ ಬಂದಾಗ ತಮಗೆ ಪರಿಚಿತವಿರುವ ಕುರುಹುಗಳನ್ನು ಸೂತ್ರವಾಗಿಸಿಕೊಂಡು ಜಾಗದ ನಿಖರತೆಯನ್ನು ಖಾತ್ರಿಪಡಿಸಿಕೊಳ್ಳುವ ರೈತರಿಬ್ಬರ ಜಾಣ್ಮೆ ಮೆಚ್ಚುವಂತದ್ದು. ಕವಿ ಇಲ್ಲಿ ಶ್ರಮಿಕ ವರ್ಗದ ಸಹಜ ಮುಜುಗರ ಹಾಗೂ ಮುಗ್ಧತೆಯನ್ನು ಪರಿಚಯಿಸುತ್ತಾರೆ.

'ಹಾಗೆಯೆ ತೋರುವುದು ಭೈರೋಸಿಂಹ. ಇ
ಲ್ಲೆಲ್ಲ ಜಿಂಕೆ ಓಡಾಡಿವೆ, ಮುದವ ತಾಳಿ
ಹೂವುಗಳ ಕೆನ್ನೆಯಲ್ಲಿರುವ ಹನಿ ಉದು
ರಿಸಿ, ಬೀಸುತಿವೆ ಪರಿಮಳದ ತಂಪುಗಾಳಿ'

ಗೆಳೆಯನ ಗ್ರಹಿಕೆಗೆ ತನ್ನ ಸಹಮತವನ್ನು ಸೂಚಿಸುವ ಮಾತುಗಳನ್ನೂ ಕುಂಭರಾಮ ಹೇಳುತ್ತಾನೆ. ತನಗೂ ಹಾಗೆಯೇ ತೋರುತ್ತಿದೆ. ಜೊತೆಗೆ ಇಲ್ಲಿ ಜಿಂಕೆಗಳು ಓಡಾಡಿವೆ. ತಂಪಾದ ಗಾಳಿಗೆ ಹೂವುಗಳ ಕೆನ್ನೆಗಳಂತಹ ದಳಗಳ ಮೇಲಿರುವ ಮಂಜಿನ ಹನಿ ಉದುರಿಸಿ ಆಕರ್ಷಕವಾಗಿ ತೋರುತ್ತಿದೆ. ನನಗೂ ನಿನ್ನ ಹಾಗೆ ಅನ್ನಿಸುತ್ತಿದೆ. ನಾವು ಹುಡುಕುತ್ತಿರುವ ಸ್ಥಳ ಇದೇ ಇರಬಹುದೆಂದು ಎಂಬ ಸಹಮತವನ್ನು ಗೆಳೆಯನಿಗೆ ತಿಳಿಸುತ್ತಿದ್ದಾನೆ.

ಬಂದಿರುವ ಬಂಧುಗಳ ಬರಮಾಡಿಕೊಳ್ಳ
ಲು, ತೆರೆದ ತೋಳುಗಳಂತೆ, ಬಿಚ್ಚಿಕೊಂಡು.
ಕಾದಿರುವ ಬಾಗಿಲದಿ ಧ್ವನಿಗಳ ಕೇಳ
ಲು; ಇವರೆ ಅವರಿರಬೇಕು ಅಂದುಕೊಂಡು.

ಕೈಮುಗಿದು ಕಾದಿರಲು, ಹೊರಗೆ ಬಂದರು
ಆತ ಮಂಜಿರದ ಮುಂಜಾವಿನಂಥ ಬಟ್ಟೆ.
ಹೆಗಲಲ್ಲಿ ಶಾಲು, ಮುಖದಲ್ಲಿ ನಗೆ, ಕೂ
ತಂತೆ ಹೊಂಬಾಳೆ ಎಲೆಯಲ್ಲಿ ಒಂದು ಚಿಟ್ಟೆ.

ಯಾರೋ ಹೊರಗೆ ಜನ ಮಾತನಾಡುತ್ತಿದ್ದಾರೆ. ಅವರು ತನ್ನ ಬಂಧುಗಳೇ ಸರಿ. ಅವರನ್ನು ಬರಮಾಡಿಕೊಳ್ಳಬೇಕಿಂದ ಎಂಬ ಸೌಜನ್ಯದೊಂದಿಗೆ ಕವಿ ಹೊರಗೆ ಬರುತ್ತಿದ್ದಾರೆ. ಇಲ್ಲಿ ಕವಿಯಾದವನು ಅಪರಿಚಿತರನ್ನು ಬರಮಾಡಿಕೊಳ್ಳುವ ರೀತಿ ಹಾಗೂ ಪ್ರೀತಿ ಅತ್ಯಂತ ಆಪ್ತವೆನಿಸುತ್ತದೆ. ಯಾರನ್ನೂ ಅನುಮಾನದಿಂದ ನೋಡದೆ ಓದುಗ ದೊರೆಯನ್ನು ಗೌರವಿಸಬೇಕೆಂಬ ಭಾವ ಕವಿಯಲ್ಲಿ ಇರಬೇಕಾದ ರೀತಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಬಾಗಿಲುಗಳು ಬಂದಿರುವ ಬಂಧುಗಳನ್ನು ಬರಮಾಡಿಕೊಳ್ಳವ ಹಾಗೆ ಎರಡೂ ತೋಳುಗಳನ್ನು ತೆರೆದು ಆಪ್ತವಾಗಿ ಅಪ್ಪಿಕೊಂಡು ಬರಮಾಡಿಕೊಳ್ಳುವಂತೆ ತೋರುತ್ತಿದ್ದವು. ಬಾಗಿಲ ಹಿಂದಿನ ಸದ್ದು ಕೇಳಿ ಒಳಗಿಂದ ಬರುವ ವ್ಯಕ್ತಿಗೆ ಗೌರವ ಸೂಚಕವಾಗಿ ಕೈಮುಗಿದು ಕಾಯತ್ತಾರೆ. ಹೊರಗೆ ಬಂದ ವ್ಯಕ್ತಿಯ ವರ್ಣನೆಯಂತ ವಿಶೇಷವೆನಿಸುತ್ತದೆ. 'ಮಂಜಿರದ ಮುಂಜಾವಿನಂಥ ಬಟ್ಟೆ' ಅಷ್ಟು ಶುಭ್ರವಾದ ಬಟ್ಟೆಯನ್ನುಟ್ಟು ಬಂದಿರುವ ಬಂಧುಗಳನ್ನು ಭೇಟಿಯಾಗಲು ಬರುತ್ತಿದ್ದಾರೆ. ಹೆಗಲ ಮೇಲಿರುವ ಶಾಲು ಹಿರಿತನದ ಸಂಕೇತವಾಗಿದೆ. ಮುಖದ ಮೇಲಿದ್ದ ನಗು ಹೊಂಬಾಲೆಯ ಎಲೆಯ ಮೇಲೆ ಕೂತಿರುವ ಚಿಟ್ಟೆಯಂತೆ ಎಲ್ಲರ ಚಿತ್ತವನ್ನೂ ಸೂರೆಗೊಳಿಸುವ ಹಾಗೆ ಕಾಣಿಸುತ್ತದೆ.

ಅಂದರು, "ಒಳಗೆ ಬನ್ನಿರಿ, ಏನು ಬೇಕಿತ್ತು?
ಯಾರು ತಾವೆ"ನಲು ಅನುಮಾನಗೊಂಡು
ಬಂದವರು ಅಂದರು, "ಶಿವರಾತ್ರಿಯಲ್ಲವೆ?
ನಾವಿಲ್ಲಿ ಬಂದದ್ದು ಯಾತ್ರೆಗೆಂದು

ಹೊರಗೆ ಬಂದಿದ್ದ ಅಪರಿಚಿತ ಬಂಧುಗಳನ್ನು ಎಷ್ಟು ಆಪ್ತವೆನಿಸುವ ಹಾಗೆ ಕವಿ ಮಾತನಾಡಿಸುತ್ತಾರೆಂಬ ವಸ್ತು ಇಲ್ಲಿ ಚಿತ್ರಿತವಾಗಿದೆ. ಒಳಗೆ ಬನ್ನಿರೆಂಬ ಆಹ್ವಾನವನ್ನು ನೀಡುತ್ತಲೇ, ತಮಗೆ ಏನು ಬೇಕಿತ್ತೆಂದು ಕೇಳುತ್ತಾರೆ. ಜೊತೆಗೆ ತಾವು ಯಾರು? ಎಂಬ ಪ್ರಶ್ನೆಯನ್ನೂ ಕೇಳುತ್ತಾರೆ. ಅವರು ಅಪರಿಚಿತರಾದರೂ ಒಳಗೆ ಕರೆದು ಸತ್ಕರಿಸುವ ಸಂಸ್ಕಾರ ನಮ್ಮ ಕವಿಗಳದ್ದು. ಅತ್ಯಂತ ಮುಜುಗರದಿಂದ ರೈತರಿಬ್ಬರೂ ತಾವು ಬಂದ ವಿಷಯವನ್ನು ನೇರವಾಗಿ ಸೂಚಿಸದೆ ತಾವು ಬಂದಿರುವುದು ಯಾತ್ರೆಗೆ ಎಂದು ಹೇಳುತ್ತಾರೆ. ಶಿವರಾತ್ರಿಯ ಕಾಲವಾಗಿರುವುದರಿಂದ ಒಂದಷ್ಟು ರೈತರಿಗೆ ಸಿಗುವ ಬಿಡುವನ್ನು ತೀರ್ಥಕ್ಷೇತ್ರಗಳನ್ನು ಭೇಟಿಯಾಗಲು ಬಳಸಿಕೊಳ್ಳುತ್ತಾರೆಂಬುದನ್ನು ಸೂಚ್ಯವಾಗಿ ಇಲ್ಲಿ ತಿಳಿಸಿದ್ದಾರೆ.

ನಾವಿಬ್ಬರೂ ನೆರೆಹೊರೆ ರೈತರು. ಮಹಾ
ಕಾಲೇಶ್ವರನ ಕಂಡು ಹರ್ಷಗೊಂಡು
ದೊಡ್ಡವರು ತಾವೆಂದು ಕೇಳಿಬಂದೆವು ಇ
ಲ್ಲಿ. ಹೋಗೋಣವೆಂದು ತಮ್ಮನ್ನು ಕಂಡು.

ತಮ್ಮ ಪರಿಚಯ ಮಾಡಿಕೊಡುವ ರೈತರು ನಾವು ನೆರೆಹೊರೆಯ ರೈತರೆಂಬ ವಾಸ್ತವಿಕ ಅಂಶವನ್ನು ಪರಿಚಯಿಸುತ್ತಾರೆ. ನೆರೆಹೊರೆಯೆಂದರೆ ನಮಗೆ ತಿಳಿದ ಮಟ್ಟಿಗೆ ಅನಗತ್ಯ ಕಾರಣಗಳಿಗೆ ಜಗಳ ಮಾಡುವ, ಇಲ್ಲದ ತೊಂದರೆಯನ್ನು ಇತರರಿಗೆ ನೀಡುವ ಜನರೇ ಇಂದು ನಮಗೆ ಕಾಣವುದು. ಆದರೆ ಅದನ್ನು ಮೀರಿ ತಾವು ನೆರೆಹೊರೆಯ ರೈತರೆಂದು, ಮಹಾ ಕಾಲೇಶ್ವರನ ದರ್ಷನ ಮಾಡಿಕೊಂಡು ಹೋಗಲು ಬಂದಿರುವುದಾಗಿ ತಿಳಿಸುತ್ತಾರೆ. ಜೊತೆಗೆ ಅದೇ ದಾರಿಯಲ್ಲಿ ಹೋಗುತ್ತಿರುವುದರಿಂದ ದೊಡ್ಡವರು ತಾವು ಇಲ್ಲೇ ಇರುವುದೆಂದು ತಿಳಿದುಕೊಂಡು ಬಂದಿರುವುದಾಗಿ ಹೇಳುತ್ತಾರೆ. ನಿಮ್ಮನ್ನೊಮ್ಮೆ ನೋಡಿ ಹೋಗುವ ಖುಷಿಗಾಗಿ ಇಲ್ಲಿಗೆ ಬಂದಿರುವುದಾಗಿ ಹೇಳುತ್ತಾರೆ, ಅತ್ಯಂತ ವಿನಯದಿಂದ.

ಕವಿರತ್ನ ಕಾಳಿದಾಸರು ನೀವೆ ಅಲ್ಲವೆ?...!
ಕಣ್ವಪುತ್ರಿಯ ದೊರೆಗೆ ಒಪ್ಪಿಸಿದಿರಿ?
ಅಂದು ಶಾಪಗ್ರಸ್ತ ಬಾಲೆಗಿದಿರಾಗಿದ್ದ
ನಾಹುತವ, ಉಂಗುರದಿ ತಪ್ಪಿಸಿದಿರಿ?

ತಮ್ಮ ನಿರೀಕ್ಷೆಯ ಕವಿ ಅವರೇ ಎಂಬ ಅನುಮಾನವನ್ನು ಅತ್ಯಂತ ವಿನಯದಿಂದ ಖಾತರಿ ಪಡಿಸಿಕೊಳ್ಳುವ ಈ ಕವಿತೆಯ ಸಾಲುಗಳು ವಿಶೇಷ. ಜೊತೆಗೆ ಸಾಮನ್ಯ ರೈತರಾಗಿದ್ದರೂ ಕೂಡ ಕಾಳಿದಾಸರು ಬರೆದಿರುವ ಅಷ್ಟೂ ಕಾವ್ಯದ ವಸ್ತುಗಳನ್ನು ಒಪ್ಪಿಸುವ ರೀತಿ ಕವಿಗೆ ಖುಸಿಯನ್ನೂ, ಮುಜುಗರವನ್ನೂ ನೀಡುತ್ತವೆ. ನೀವೆ ಅಲ್ಲವೆ ಕವಿರತ್ನ ಕಾಳಿದಾಸರು? ಎಂದು ಕೇಳುವುದರ ಜೊತೆಗೆ ಅವರ ಹಿರಿಮೆಯನ್ನು ಸೂಚಿಸುವ ಕಾವ್ಯದ ವಸ್ತುಗಳನ್ನೂ ಉಲ್ಲೇಖಿಸುತ್ತಾರೆ. ಕಣ್ವ ಪುತ್ರಿಯನ್ನು ಶಾಪದ ಕಾರಣಕ್ಕೆ ಮರೆತುಹೋಗಿದ್ದ ದೊರೆ ದುಷ್ಯಂತ ಮಹಾರಾಜರಿಗೆ ಒಪ್ಪಿಸಿದ್ದು, ತನ್ನದಲ್ಲದ ತಪ್ಪಿಗೆ ದೂರ್ವಾಸ ಮುನಿಗಳ ಶಾಪಕ್ಕೆ ತುತ್ತಾಗಿದೆ ಬಾಲೆ ಶಕುಂತಲೆಯ ಶಾಪವನ್ನು ಉಂಗರದಿಂದ ತಪ್ಪಿಸಿದ್ದು ತಾವೇ ಅಲ್ಲವೇ ಎಂಬ ಓದಿನ ಆಳದ ಪ್ರಶ್ನೆಗಳನ್ನು ಮುಂದಿಡುತ್ತಾರೆ.

ಅಂಬಿಕೆಯ ಮುಗ್ಧಮೌನದ ಹೊರಳು ಕಂ
ಪಿನಲಿ, ಹಸೆಯನೇರಿದ ಶಿವನ ಕರುಣೆ ಹಾಡಿ
ರಸದ ಕಾವಡಿ ಹೊತ್ತು ಋತುಚಕ್ರ, ಚೆ
ಲುವೆಯರ, ಬೆಟ್ಟಗಳ ಮೋಡಗಳ ಮಾತನಾಡಿ.

ಮುಗ್ದೆಯಾಗಿದ್ದ ಪಾರ್ವತಿಯ ಪ್ರೀತಿಯನ್ನು, ಆಕೆಯ ಮನಸ್ಸಿನ ಭಾವನೆಯನ್ನು ಗ್ರಹಿಸದ ಶಿವ ತಪಸ್ಸಿನಲ್ಲಿರಬೇಕಾದರೆ ಆಕೆಯ ಮುಗ್ದ ಮೌನದ ಸಂದೇಶವನ್ನು ಶಿವನಿಗೆ ತಲುಪಿಸಿದ್ದು, ರಸದ ಕಾವಡಿಯನ್ನು ಮೆರೆಸುವಂತಹ ಕೃತಿ ಋತುಸಂಹಾರವನ್ನು ರಚಿಸಿದ್ದು, ಚೆಲುವೆಯರನ್ನು, ಬೆಟ್ಟಗಳನ್ನು, ಮೋಡಗಳನ್ನು ತಮ್ಮ ಕೃತಿಗಳಲ್ಲಿ ಮಾತನಾಡಿಸಿ ಅವರ ಬಯಕೆಗಳನ್ನು ಈಡೇರಿಸಿದವರೂ ನೀವೆ ಅಲ್ಲವೆ ಎನ್ನುವಾಗ ಆ ರೈತರ ಓದಿನ ಆಳ ನಮಗೆ ಅರ್ಥವಾಗಬೇಕಾಗುತ್ತದೆ. "ಕುರಿತೋದಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್" ಎಂಬ ಮಾತು ನಮಗೆ ನೆನಪಾಗದೆ ಇರದು. ಸಾಮಾನ್ಯ ಜನರಲ್ಲಿಯೂ ಇದ್ದ ಕಾವ್ಯ ಅಧ್ಯಯನದ ವಿಧಾನ ಆಕರ್ಷಕವೆನಿಸುತ್ತದೆ.

ಕೀರ್ತಿವೃಕ್ಷದ ಹೂವು ನೀವಲ್ಲವೇ? ಎನಲು
ಮುಜುಗರದ ಧ್ವನಿಯಲ್ಲಿ ಕರೆದು... ಒಳಗೆ
ಬಂದವರ ಸತ್ಕರಿಸಿ ಕೇಳಿದರು ಕವಿ "ಇ
ನ್ನೇನಾದರೂ ಆಗಬೇಕೆ ತಮಗೆ?"

ಕಾಲಿದಾರನ್ನು ರೈತರು "ಕೀರ್ತಿವೃಕ್ಷದ ಹೂವು ನೀವಲ್ಲವೇ?" ಎಂದು ಪ್ರಶ್ನಿಸುತ್ತಾರೆ. ಇಷ್ಟೆಲ್ಲ ಹೊಗಳಿಕೆಯನ್ನು ಯಾರಿಂದಲಾದರೂ ಕೇಳಿಸಿಕೊಳ್ಳುವುದು ಕಷ್ಟವೇ ಸರಿ. ಕವಿ ಕಾಳಿದಾಸರೂ ಇದರಿಂದ ಹೊರತಾಗಿರಲಿಲ್ಲ. ಬಹುಶಃ ಈ ರೈತಮಿತ್ರರಿಗೆ ತನ್ನಿಂದ ಯಾವುದೋ ಮಹತ್ತರ ಕಾರ್ಯವಾಗಬೇಕಾಗಿದೆ ಎಂಬು ಅಂಶವನ್ನು ಗ್ರಹಿಸಿ ಅವರನ್ನು ಬರಮಾಡಿಕೊಳ್ಳುತ್ತಾರೆ. ಜೊತೆಗೆ ಅವರನ್ನು ಸತ್ಕರಿಸುತ್ತಾರೆ. ಕವಿ ನಿಧಾನವಾಗಿ ಅವರನ್ನು ಕೇಳುತ್ತಾರೆ. "ಇನ್ನೇನಾದರೂ ಆಗಬೇಕೆ ತಮಗೆ?" ಇದು ಅದೆಷ್ಟು ಆಪ್ತವೆನಿಸುವ ಸಂಪರ್ಕವೆನಿಸುತ್ತದೆ ಅಧ್ಯಯನ ಮಾಡುವವರಿಗೆ. ಒಂದು ಮಾತಿನಲ್ಲಿ ಪಕ್ಕಕ್ಕಿರಿಸದೆ ಅವರಿಗೆ ಕವಿ ನೀಡುವ ಗೌರವ ಎಂಥವರನ್ನು ಮುದಗೊಳಿಸುತ್ತದೆ. ರೈತರೂ ಕೂಡ ಒರಟರಂತೆ ನಡೆದುಕೊಳ್ಳದೆ ಸೌಜನ್ಯದ, ಮುಗ್ದತೆಯಿಂದ ನಡೆದುಕೊಳ್ಳುವ ರೀತಿ ಆಕರ್ಷಕವಾದ ಚಿತ್ರಣವೆನಿಸುತ್ತದೆ.

ಭೈರೊಸಿಂಹ ಅಂದರು, "ಹೌದು ಸ್ವಾಮಿ, ಹೌ
ದು. ನೀವು ಕಳಿಸಿದಿರಲ್ಲ ಒಂದು ಮೋಡ,
ರಾಮಗಿರಿಯಿಂದ ಅಲಕಾವತಿಯ ಯಕ್ಷಿ
ಣಿಗೆ, ಆ ಕುರಿತೆ ಒಂದಷ್ಟು ತಮ್ಮ ಕೂಡ.

ತಾವು ಶಿವರಾತ್ರಿಯ ಕಾರಣಕ್ಕೆ ಕಾಡುಮಲ್ಲೇಶನನ್ನು ನೋಡಲು ಬಂದವರೆಂದು, ದಾರಿಯಲ್ಲಿ ಹೋಗುವಾಗ ತಾವು ದೊಡ್ಡವರೆಂದು ಸುಮ್ಮನೆ ಒಮ್ಮೆ ನೋಡಿ ಹೋಗೋಣವೆಂದು ಬಂದಿರುವುದಷ್ಟೇ ಎಂದು ಹೇಳಿದ್ದ ಈ ರೈತಗೆಳೆಯರು ಯಾವಗ ಕಾಳಿದಾಸರು ನಿಮಗೆ ಇನ್ನೇನಾದರೂ ನನ್ನಿಂದ ಆಗಬೇಕೆ ಎಂಬು ಪ್ರಶ್ನೆ ಬಂದಕೂಡಲೆ ಪ್ರತಿಕ್ರಿಯಿಸುತ್ತಾರೆ. ಭೈರೋಸಿಂಹ 'ಹೌದು ಸ್ವಾಮಿ, ಹೌದು' ಎಂದು ಹೇಳುವ ಪರಿಯ ಅವರ ತುರ್ತನ್ನು ಬಿಂಬಿಸುತ್ತದೆ. ಅದಾದ ನಂತರ ಒಂದೇ ಸಮನೆ ತಮ್ಮ ಬೇಡಿಕೆಯನ್ನು ಅವರ ಮುಂದಿಡುತ್ತಾರೆ. ಮೇಘಧೂತ ಕಾವ್ಯದಲ್ಲಿ ನೀವು ರಾಮಗಿರಿಯಿಂದ ಅಲಕಾವತಿಗೆ ಕಳುಹಿಸಿದ್ದಿರಲ್ಲ ಯಕ್ಷನಿಂದ ಯಕ್ಷಿಣಿಗೆ ಒಂದು ಮೋಡ ಸಂದೇಶದ ರೂಪದಲ್ಲಿ ಅದರ ಕುರಿತು ಒಂದಷ್ಟು ತಮ್ಮೊಂದಿಗೆ ಮಾತನಾಡುವುದಿತ್ತು ಎನ್ನುತ್ತಾನೆ.

ಬಿನ್ನವಿಸಲೆಂದು ಬಂದದ್ದು ನಾವಿಬ್ಬರೂ.

ಬಾಯೊಣಗಿ ನಿಂತಿಹುದು ನಮ್ಮ ಪಯರು
ಹನಿನೀರಿಲ್ಲದೆ ಮೋಡಕ್ಕೆ ಹೇಳುವಿರೆ?
'ದಾರಿಯಲ್ಲಿವರಿಗೂ, ನೀರು ಸುರಿಸು.'

ನಾವು ಬಂದ ಉದ್ದೇಶವೇ ಇದು. ನಮ್ಮ ಗದ್ದೆಯ ಪೈರು ನೀರಿಲ್ಲದೆ ಒಣಗಿ ನಿಂತಿವೆ ಹನಿ ನೀರೂ ಇಲ್ಲದೆ. ಹಾಗಾಗಿ ನೀವು ಆ ಯಕ್ಷನ ಸಂದೇಶವನ್ನು ಕಳುಹಿಸಿದ ಆ ಮೋಡಕ್ಕೆ ಹೇಳುವಿರಾ 'ದಾರಿಯಲ್ಲಿವರಿಗೂ ನೀರು ಸುರಿಸು' ಎಂದು ಕೇಳಿಕೊಳ್ಳುತ್ತರೆ. ಜೊತೆಗೆ ಅಲ್ಲಿಗೆ ಕವಿತೆಯನ್ನು ಕವಿ ಕೊನೆಗೊಳಿಸುತ್ತಾರೆ. ಕವಿತೆಯನ್ನು ಓದು ಪ್ರತಿಯೊಬ್ಬರಲ್ಲೂ ಒಂದು ಪ್ರಶ್ನೆಯನ್ನು ಉಳಿಸುತ್ತಾರೆ. ಅರೆ! ಹೀಗೂ ಬೇಡಿಕೆಯೊಂದನ್ನು ನೀಡಬಹುದೇ? ಅನ್ನಿಸುವಂತೆ ಮಾಡುತ್ತದೆ. ಜೊತೆಗೆ ಇಡೀ ಕವಿತೆಯ ದಿಕ್ಕನ್ನು ಕೊನೆಯ ಒಂದು ಸಾಲು ಬದಲಿಸುತ್ತದೆ. ಇದು ಸು.ರಂ. ಎಕ್ಕುಂಡಿಯವರ ಸಾಮಾಜಿಕ ಪ್ರಜ್ಞೆಯ ಮಹತ್ವದ ಸ್ವರೂಪವೆಂದು ಖಾತ್ರಿಯಾಗುತ್ತದೆ.

ಕಾಳಿದಾಸನಂತಹ ಶ್ರೇಷ್ಠ ಕವಿಯ ಕಾವ್ಯಗಳ ವಸ್ತುವನ್ನು ಮೂಲ ಪ್ರೇರಣೆಯನ್ನಾಗಿಸಿಕೊಂಡು ಇಡೀ ಕಾವ್ಯವನ್ನು ನಡೆಸುವ ಕವಿ ಎಕ್ಕುಂಡಿಯವರು ತಮ್ಮ ಒಳಗಿನ ಸಾಮಾಜಿಕ ಪ್ರಜ್ಞೆಯನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುತ್ತಾರೆ. ಎಲ್ಲಿಯೂ ಅಬ್ಬರ ಮಾತಿರದೆ ಅತ್ಯಂತ ಸೌಮ್ಯ ಸ್ವರೂಪದಲ್ಲಿಯೇ ನಡೆಯುವ ಕಾವ್ಯ ಓದುಗರನ್ನು ಅವರ ಕೊನೆಯ ಪ್ರಶ್ನೆಯ ಮೂಲಕ ಚಿಂತಿಸುವ ಹಾಗೆ ಮಾಡುತ್ತದೆ. ದುಡಿಯುವ ವರ್ಗಕ್ಕೆ ಅಗತ್ಯವಾಗಿ ಬೇಕಿರುವ ಅಂಶಗಳನ್ನು ಎಷ್ಟು ಸೂಕ್ಷ್ಮವಾಗಿ ಕವಿ ಗ್ರಹಿಸಿದ್ದಾರೆಂಬುದಕ್ಕೆ ಇದು ಸ್ಪಷ್ಟ ನಿದರ್ಶನ. ಇಲ್ಲಿ ಬರುವ ಇಬ್ಬರು ರೈತರು ಇಡೀ ದೇಶದ ನೊಂದ ರೈತರ ಪ್ರತಿನಿಧಿಗಳ ಹಾಗೆ ಕಾಣುತ್ತಾರೆ. ಕಾವ್ಯವನ್ನು ಓದುತ್ತಿರುವ ನಾವು ಸಮಾಜದ ಭಾಗವಾಗಿದ್ದರೂ ಮರೆತಿರುವ ಅಂಶಗಳನ್ನು ಎಚ್ಚರಿಸುವ ಕೆಲಸನ್ನು ಕವಿತೆ ಮಡುತ್ತದೆ. ಕವಿತೆ ಗೆಲ್ಲುತ್ತದೆ.

■■

**ಪರಾಮರ್ಶನ ಕೃತಿಗಳು:**

1. ಬಕುಲದ ಹೂವುಗಳು– ಸು.ರಂ. ಎಕ್ಕುಂಡಿ– ಅಭಿನವ ಪ್ರಕಾಶನ, ಬೆಂಗಳೂರು– 1991
2. https://www.bookbrahma.com/author/s-r-ekkundi
3. https://www.udayavani.com/supplements/weekly-supplement/poet-su-ram-ekkundi
4. https://www.youtube.com/watch?v=y0dTFEdYUSQ

ISSN: 2320-9941


# ಗಂಡುಕಲೆ – ಡೊಳ್ಳುಕುಣಿತ

● ರುಜುವಾನ್ ಕೆ.

ಕರ್ನಾಟಕದಾತ್ಯಂತ ಪ್ರಚಲಿತದಲ್ಲಿರುವ ಜನಪದ ಪ್ರದರ್ಶನ ಕಲೆಗಳಲ್ಲಿ ಡೊಳ್ಳುಕುಣಿತವೂ ಒಂದು. ವಾದ್ಯ, ನೃತ್ಯ, ಹಾಡಿನೊಂದಿಗೆ ನಡೆಯುವ ಈ ಕುಣಿತವು ಗಂಡುಕಲೆಯೆಂದೇ ಹೆಸರಾಗಿದ್ದು, ಗಟ್ಟಿಮುಟ್ಟಾದ ಆಳುಗಳು ಮಾತ್ರ ಇದನ್ನು ಪ್ರದರ್ಶಿಸಲು ಸಶಕ್ತರು. ಬಹುತೇಖವಾಗಿ ಕುರುಬ ಜನಾಂಗದವರೇ ಈ ಕಲೆಯನ್ನು ಪ್ರದರ್ಶಿಸುವವರಾಗಿದ್ದು, ಇತ್ತೀಚೆಗೆ ಆಸಕ್ತಿಯುಳ್ಳ ಇತರ ಜನಾಂಗದವರೂ ಈ ಕಲೆಯನ್ನು ಕರಗತ ಮಾಡಿಕೊಂಡು ಪ್ರದರ್ಶಿಸುತ್ತಿದ್ದಾರೆ. ಇಂದಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳೂ ಸಹಿತ ಡೊಳ್ಳುಕುಣಿತವನ್ನು ಕಲಿತು ಪ್ರದರ್ಶನ ನೀಡುತ್ತಿರುವುದನ್ನು ನಾವು ನೀವುಗಳು ಗಮನಿಸಿದ್ದೇವೆ. ಈ ನಿಟ್ಟಿನಲ್ಲಿ ಡೊಳ್ಳು ಕುಣಿತವು ಒಂದು ರೀತಿಯಲ್ಲಿ ಸಾರ್ವತ್ರಿಕ ಕಲೆಯಾಗಿ ಇಂದಿನ ದಿನಮಾನಗಳಲ್ಲಿ ಕಂಡು ಬರುತ್ತಿದೆ. ಕರ್ನಾಟಕದ ಮೂಲೆ–ಮೂಲೆಗಳಲ್ಲಿ, ಹಳ್ಳಿ–ಹಳ್ಳಿಗಳಲ್ಲಿ ಡೊಳ್ಳು ಬಾರಿಸುವವರು ಕಾಣಸಿಗುತ್ತಾರೆ. ಹಬ್ಬ–ಹರಿದಿನ, ಜಾತ್ರೋತ್ಸವಗಳಲ್ಲಿ ಡೊಳ್ಳು ಕುಣಿತವು ಪ್ರದರ್ಶನಗೊಂಡು ಅಲ್ಲಿನ ಜನಮಾನಸವನ್ನು ತನ್ನತ್ತ ಸೆಳೆಯುವಂತಹ ಕಲಾ ವೈಭವ ಈ ಗಂಡು ಕುಣಿತಕ್ಕಿದೆ.

"ಕುರಿಯ ಮ್ಯಾಲೊಂದು ಕಣ್ಣಿರಲೆಪ್ಪ
ಡೊಳ್ಳಿನ ಮ್ಯಾಲೊಂದು ಕೈಯಿರಲೆಪ್ಪ"1

ಈ ಮೇಲಿನ ಹಾಡು ಕುರಿ ಕಾಯುವ ಸಂದರ್ಭದಲ್ಲಿ ಡೊಳ್ಳು ವಾದ್ಯ ಬಳಕೆಯಾಗುತ್ತಿದ್ದುದರ ಬಗ್ಗೆ ತಿಳಿಸುತ್ತದೆ. ಕುರಿ ಕಾಯುವ ಕಾಯಕದೊಂದಿಗೆ ಡೊಳ್ಳು ಬಾರಿಸುತ್ತಾ ಆನಂದ ಪಡೆಯುವುದಕ್ಕೆ ಮತ್ತು ಅಡವಿಯಲ್ಲಿನ ಮೃಗಗಳನ್ನು ಡೊಳ್ಳಿನ ಸದ್ದಿನ ಮೂಲಕ ಹೆದರಿಸುವುದಕ್ಕೆ ಹಾಗೂ ಕುರಿಗಳನ್ನು ಎಚ್ಚರಿಸುವುದಕ್ಕೆ ಡೊಳ್ಳಿಗೆ ಪೆಟ್ಟುಕೊಟ್ಟು, ಜೋರಾದ ಧ್ವನಿಯಿಂದ ಕೂಗಿ,

**ವಿಳಾಸ:** ರುಜುವಾನ್ ಕೆ.
ಸಂಶೋಧಕರು
ಕನ್ನಡ ಅಧ್ಯಯನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
rujusuchi@gmail.com

ಹಾಡಿ, ಹಾರಿ ಜಿಗಿದು ಹೆಜ್ಜೆ ಹಾಕುತ್ತಿರುತ್ತಾರೆ. ಈ ಜೋರಾದ ಧ್ವನಿ, ಬಿರುಸಾದ ಹೆಜ್ಜೆ, ಡೊಳ್ಳಿನ ಮೇಲೆ ತಟ್ಟಿದ ಸದ್ದು ಇವೆಲ್ಲವೂ ಮೇಳವಿಸಿ ಸಂಕೀರ್ಣ ಕಲೆಯಾಗಿ ಇಂದು ಡೊಳ್ಳು ಕುಣಿತವು ನಮ್ಮ ನಿಮ್ಮೆಲ್ಲರ ಮುಂದೆ ಪ್ರಸ್ತುತದಲ್ಲಿದೆ. "ಈ ಕಲೆಯಲ್ಲಿ ಜಾಣತನ ಅಡಗಿದೆ. ಆವೇಶ ತುಂಬಿದೆ. ಕಲಾತ್ಮಕವಾಗಿ ಬಾರಿಸುವ ಡೊಳ್ಳಿನ ಗತಿ, ನಾದದಲ್ಲಿ ಇಹವನ್ನೇ ಮರೆಯುವ ದೈವದ ಕಡೆ ಚಿತ್ತವನ್ನು ಹರಿಸುವ ಮೋಡಿ ಇದೆ. ಆದ್ದರಿಂದ ಈ ಕಲೆ ಇಂದಿನವರೆಗೂ ನಿರಂತರವಾಗಿ ಬೆಳೆದು ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲ"2 ಎಂಬುದು ಗಮನಾರ್ಹವಾಗಿದೆ.

ಕುರುಬ ಜನಾಂಗದ ಸಾಂಸ್ಕೃತಿಕ ಬದುಕಿನೊಂದಿಗೆ ಬೆಸೆದುಕೊಂಡಿರುವ ಈ ಡೊಳ್ಳು ವಾದ್ಯ, ಅವರು ಆಚರಿಸುವ ಹಬ್ಬ ಹರಿದಿನಗಳಲ್ಲಿ, ಉತ್ಸವಗಳಲ್ಲಿ ವಿಶೇಷವಾಗಿ ಬಳಕೆಯಾಗುತ್ತದೆ. ಡೊಳ್ಳು ವಾದ್ಯಕ್ಕೆ ಸಂಬಂಧಿಸಿದಂತೆ ಅನೇಕ ಪೌರಾಣಿಕ ಕಥೆಗಳಿದ್ದು, ಅವುಗಳಲ್ಲಿ ಒಂದು ಕಥೆ ಹೀಗಿದೆ. ಡೊಳ್ಳಾಸುರನೆಂಬ ದೈತ್ಯ ಅಸುರನು, ತಪಸ್ಸು ಕೈಗೊಂಡು ಪರಶಿವನನ್ನು ಮೆಚ್ಚಿಸಿ, ಆತನನ್ನು ಒಲಿಸಿಕೊಂಡು, ತನ್ನ ಹೊಟ್ಟೆಯಲ್ಲಿ ಪರಶಿವನು ನೆಲೆಸಬೇಕೆಂಬ ವರವನ್ನು ಪಡೆಯುತ್ತಾನೆ. ಭಕ್ತರ ಬೇಡಿಕೆಗಳನ್ನು ಪೂರೈಸಲು ಹೆಸರುವಾಸಿಯಾದ ಪರಶಿವನು, ಸರಿ ನಾನು ನಿನ್ನ ಆಸೆಯಂತೆಯೇ ನಿನ್ನ ಹೊಟ್ಟೆಯಲ್ಲಿ ನೆಲೆಸುತ್ತೇನೆ, ನನ್ನನ್ನು ಯಾವಾಗ ಈ ಬಂಧನದಿಂದ ಮುಕ್ತನನ್ನಾಗಿ ಮಾಡುತ್ತೀಯ ಎಂಬ ಪ್ರಶ್ನೆಯನ್ನು ಹಾಕುತ್ತಾನೆ. ಆಗ ಆ ಅಸುರನು ಪಂಚರಾತ್ರಿಗಳು ಸೇರಿದಾಗ ಎಂದು ಹೇಳಿ ಪರಶಿವನನ್ನು ನುಂಗಿ ಬಿಡುತ್ತಾನೆ. (ಹಿಂದೂ ಧರ್ಮದಲ್ಲಿ ಅರಿಷಡ್ವರ್ಗಗಳು ಇರುವಂತೆ, ಪಂಚರಾತ್ರಿಗಳು ಇವೆ. ಈ ಐದು ರಾತ್ರಿಗಳು ಏಕಕಾಲದಲ್ಲಿ, ಒಂದೇ ದಿನದಂದು ಸಂದಿಸುವುದು ಅಸಾಧ್ಯವಾಗಿರುತ್ತದೆ.) ಹೀಗೆ ಶಿವನಿಲ್ಲದೆ ಕೈಲಾಸವೇ ಕಳೆಗುಂದಿದಂತಾಗುತ್ತದೆ. ದುಃಖಿತರಾದ ದೇವಾನು ದೇವತೆಗಳು ಅಸುರ ಡೊಳ್ಳಾಸುರನಿಂದ ಶಿವನನ್ನು ಮುಕ್ತಿಗೊಳಿಸಲು ವಿಷ್ಣುವಿನ ಮೊರೆ ಹೋಗುತ್ತಾರೆ. ಆಗ ವಿಷ್ಣುವು ತನ್ನ ತಂತ್ರದಿಂದ ಡೊಳ್ಳಾಸುರನು ಸೂಚಿಸಿದ ಪಂಚರಾತ್ರಿಗಳು ಸಂಗಮಿಸುವಂತಾಗುತ್ತದೆ. ಈಗ ಕೊಟ್ಟ ಮಾತಿಗೆ ತಕ್ಕಂತೆ ಡೊಳ್ಳಾಸುರನು ಶಿವನನ್ನು ಬಂಧನದಿಂದ ಮುಕ್ತನನ್ನಾಗಿ ಮಾಡಬೇಕು ಆದರೆ ಮಾಡುವುದಿಲ್ಲ. ಕೋಪಗೊಂಡ ವಿಷ್ಣುವು ಡೊಳ್ಳಾಸುರನ ವಧೆ ಮಾಡಿ, ಅವನ ಹೊಟ್ಟೆಯನ್ನು ಬಗೆದು ಬಂಧನದಲ್ಲಿದ್ದ ಶಿವನನ್ನು ಬಿಡಿಸುತ್ತಾನೆ. "ಬಂಧನದಲ್ಲಿದ್ದ ಶಿವನು ಕೋಪದಿಂದ ಕಣ್ಣು ತೆರೆದರೆ ಪ್ರಳಯವೇ ಉಂಟಾಗುತ್ತದೆಂದು ಅರಿತ ವಿಷ್ಣು, ಡೊಳ್ಳಾಸುರನ ಹೊಟ್ಟೆಯನ್ನೇ ವಾದ್ಯ ವಿಶೇಷವಾಗಿ ಮಾಡಿಕೊಂಡು, ಅವನ ಮೂಳೆಗಳಿಂದ ಡೊಳ್ಳು ಬಾರಿಸಲು ಪ್ರಾರಂಭಿಸಿದ. ಶಿವನು ಆ ವಾದ್ಯದ ದನಿಗೆ ಮಾರು ಹೋಗಿ ಲಾಸ್ಯದಲ್ಲಿ ತೊಡಗಿದ. ಈ ವೇಳೆಗೆ ತೊಡೆಯ ಗೌರಿ, ಜಡೆಯ ಗಂಗೆ ಬಂದು ಶಿವನನ್ನು ಸೇರಿದರು. ಶಿವ ಸಂಪ್ರೀತನಾದ ಮುಂದೆ ಡೊಳ್ಳು ಸ್ತುತಿಯು ವಿಶೇಷವಾಯಿತು."3 ಹೀಗೆ ಅನೇಕ ತಲೆಮಾರುಗಳಿಂದ ದೈವ ಆರಾಧನೆಯ ಸಾಧನವಾಗಿ ಡೊಳ್ಳು ವಾದನವು ಬೆಳೆದು ಬಂದಿದೆ. ಸಾಕ್ಷಾತ್ ವೀರಭದ್ರನ ಅವತಾರವಾದ ಬೀರದೇವರನ್ನು ತೃಪ್ತಿಪಡಿಸಲು ಇಂದಿಗೂ ಕೂಡ ಹಬ್ಬ–ಹರಿದಿನಗಳಲ್ಲಿ ಡೊಳ್ಳು ಬಾರಿಸಿ ಕುಣಿಯುತ್ತಾರೆ.

ವಾದ್ಯ ಚಕ್ರವರ್ತಿ ಎನಿಸಿಕೊಂಡಿರುವ ಡೊಳ್ಳು, ಗಾತ್ರದಲ್ಲಿ ದೊಡ್ಡದು. ಬೇವಿನ ಮರ ಇಲ್ಲವೇ ಮಾವಿನ ಮರದಿಂದ ಇದನ್ನು ತಯಾರಿಸುತ್ತಾರೆ. ಮರದ ಒಳಗಿನ ಭಾಗವನ್ನು ಪೊಳ್ಳಾಗಿರುವಂತೆ ಕೊರೆದು ಸಿಲಿಂಡರಿನ ಆಕಾರದಲ್ಲಿ ಪಿಪಾಯಿಯನ್ನು ತಯಾರಿಸಿಕೊಳ್ಳುತ್ತಾರೆ. ಬಲ ಭಾಗಕ್ಕೆ ಕುರಿಯ ಚರ್ಮವನ್ನು, ಎಡ ಭಾಗಕ್ಕೆ ಆಡಿನ ಚರ್ಮವನ್ನು ಬಿಗಿಯುತ್ತಾರೆ. ಬಲ ಭಾಗಕ್ಕೆ ಔಡಲ ಬೀಜ ಅರೆದು, ಎಣ್ಣೆ ಅಗಸಿಯೊಡನೆ ಬೆರೆಸಿ ಲೇಪಿಸಿರುತ್ತಾರೆ. ಮುಖ್ಯ ಹೊಡೆತ ಬೀಳುವುದು ಇಲ್ಲಿಯೇ. ಒಂದಡಿ ಉದ್ದದ ಗುಣಿಯಿಂದ ಬಾರಿಸಿದಾಗ ಈ ಭಾಗವು ದಪ್ಪಗಿನ ಮಂದ್ರ ನಾದವನ್ನು ಕೊಡುತ್ತದೆ. ಮತ್ತೊಂದು ಭಾಗವನ್ನು ಎಡಗೈ ಹಸ್ತ ಮತ್ತು ಬೆರಳುಗಳಿಂದ ಏಕಕಾಲಕ್ಕೆ ತಟ್ಟಿ ಶಬ್ಧ ಹೊರಡಿಸುತ್ತಾರೆ. ಡೊಳ್ಳಿನ ಪಗಡಗಳು ಉದ್ದದಲ್ಲಿ ಒಂದೂವರೆ ಅಡಿಯಿಂದ ಎರಡು ಅಡಿ ವ್ಯಾಸದಲ್ಲಿ ಇದ್ದು, ಎರಡೂ ಕೈಗಳಿಂದ ಬಡಿದು ನುಡಿಸುವ ವಾದ್ಯ ವಾದನ ಇದಾಗಿದೆ.

ಡೊಳ್ಳು ಬಾರಿಸುವವರ ವೇಷಭೂಷಣ ಸರಳವಾದಂತಹದ್ದಾಗಿರುತ್ತದೆ. ತಲೆಗೆ ಕೆಂಪು, ಹಳದಿ, ನೀಲಿ ಯಾವುದಾದರೊಂದು ಬಣ್ಣದ ರುಮಾಲು ಬಿಗಿದಿರುತ್ತಾರೆ. ಬನಿಯನ್‌ಗಳ ರೀತಿಯ ಮೇಲಂಗಿಯನ್ನು ಧರಿಸಿದ್ದು, ಮೊಣಕಾಲಿನವರೆಗೆ ಕಚ್ಚೆಪಂಚೆಯನ್ನು ಕಟ್ಟಿರುತ್ತಾರೆ. ಇನ್ನು ಕಾಲಿಗೆ ಗೆಜ್ಜೆಯನ್ನು ಕಟ್ಟಿದ್ದು, ತೋಳು ಭುಜಗಳಿಗೆ ವಿಭೂತಿಯನ್ನು ಹಚ್ಚಿರುತ್ತಾರೆ. ಕೆಲವೊಬ್ಬರು ಕೊರಳಿಗೆ ರುದ್ರಾಕ್ಷಿ ಸರ ಮತ್ತು ಡೊಳ್ಳು ಬಡಿಯುವ ಗುಣಿಗಳ ಹಿಂಬಾಗಕ್ಕೆ ರಿಬ್ಬನ್ ಅಥವಾ ಬಟ್ಟೆಯ ಟೇಪುಗಳನ್ನು ಕಟ್ಟಿರುತ್ತಾರೆ. ಹೆಗಲಿನ ಬಲ ಬದಿಯಿಂದ ಸೊಂಟವನ್ನು ಸುತ್ತುವರೆಯುವಂತೆ ಕಂಬಳಿಯನ್ನು ಸಹ ಬಿಗಿದು ಕಟ್ಟಿಕೊಂಡಿರುತ್ತಾರೆ. ಡೊಳ್ಳಿನ ಅಂದವನ್ನು ಹೆಚ್ಚಿಸಲು ಅದರ ಮೇಲ್ಮೈ ಮೇಲೆಯೂ ವಸ್ತ್ರಗಳಿಂದ ವಿವಿಧ ಆಕಾರದಲ್ಲಿ ಹೊಲೆಸಿದ ಬಟ್ಟೆಗಳನ್ನು ಹಾಕಿರುತ್ತಾರೆ. ಬಿಗಿಯಾದ

ಹಗ್ಗಗಳಿಂದ ಡೊಳ್ಳನ್ನು ತಮ್ಮ ಸೊಂಟದೆತ್ತರಕ್ಕೆ ಕಟ್ಟಿಕೊಂಡು ಡೊಳ್ಳು ಬಡಿಯುತ್ತಾ ಕುಣಿಯುತ್ತಾರೆ.

ಹಳ್ಳಿಯಿಂದ ಡಿಲ್ಲಿಯವರೆಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಳ್ಳುತ್ತಿರುವ ಡೊಳ್ಳು ಕುಣಿತವು ಕುರುಬ ಸಮುದಾಯದ ಬೀರಪ್ಪ ದೇವರಿಗೆ ಸಂಬಂಧಿಸಿದ್ದು, ಇದನ್ನು ಹಬ್ಬ-ಹರಿದಿನಗಳಲ್ಲಿ, ಗ್ರಾಮ ದೇವತೆಯ ಜಾತ್ರೋತ್ಸವಗಳಲ್ಲಿ, ವಿಶೇಷವಾದ ಅಮವಾಸೆ, ಹುಣ್ಣಿಮೆ, ಕಾರ್ತಿಕಗಳಲ್ಲಿ ಪ್ರದರ್ಶನಗೊಳ್ಳಲ್ಪಡುತ್ತದೆ. ಬೃಹತ್ ಗಾತ್ರದ ಡೊಳ್ಳು ಕಟ್ಟಿಕೊಂಡು ಕುಣಿಯುವುದೇನು ಸಾಮಾನ್ಯವಾದ ಸಂಗತಿಯಲ್ಲ. ಶಾರೀರಿಕವಾಗಿ ಸದೃಢರಾಗಿರುವ ಕಲಾವಿದರು ಮಾತ್ರ ಈ ಕಲೆಯನ್ನು ಪ್ರದರ್ಶಿಸಬಲ್ಲರು. ಕರ್ನಾಟಕದಾತ್ಯಂತ ಪ್ರದರ್ಶನದಲ್ಲಿರುವ ಈ ಡೊಳ್ಳು ಕುಣಿತದ ತಂಡದಲ್ಲಿ ಸುಮಾರು 8 ರಿಂದ 10 ಜನ ಕಲಾವಿದರಿರುತ್ತಾರೆ. ಇದಕ್ಕಿಂತ ಹೆಚ್ಚು ಇರಬಹುದು. ಈ ಕುಣಿತಕ್ಕೆ ಹಿನ್ನೆಲೆಯಾಗಿ ತಾಳ, ಜಾಗಟೆಗಳನ್ನು ಸಹ ಬಳಸುತ್ತಾರೆ. ಡೊಳ್ಳು ಬಾರಿಸುವವರ ಕೈಯಲ್ಲಿ ಮಾತ್ರ ಕಟ್ಟಿಗೆಯ ಗುಣಿಯಿದ್ದು, ಬಲಗೈಯಿಂದ ಕಟ್ಟಿಗೆಯಲ್ಲಿ ಮತ್ತು ಎಡಗೈಯಿಂದ ಹಸ್ತದಲ್ಲಿ ಪೆಟ್ಟು ಕೊಡುತ್ತಾ-ರೆ. ಕಲಾವಿದರೆಲ್ಲರೂ ವೃತ್ತಾಕಾರವಾಗಿ ನಿಂತು, ನಿಧಾನವಾಗಿ ಡೊಳ್ಳು ಬಾರಿಸುವ ಮೂಲಕ ಪ್ರಾರಂಭಿಸುತ್ತಾರೆ. ಗುಣಿಯಿಂದ ಕೊಡುವ ಪೆಟ್ಟು ಜೋರಾದ ಸದ್ದು ಹೊರಡಿಸಿದರೆ ಎಡಗೈ ಹಸ್ತದಿಂದ ಕೊಡುವ ಪೆಟ್ಟು ಮೃದುವಾದ ನಾದವನ್ನು ಹೊರಡಿಸುತ್ತದೆ.

'ದಿಲ್ಲಿಗೆ ಹೋದರೂ ಡೊಳ್ಳಿಗೆ ಒಂದೇ ಪೆಟ್ಟು' ಎನ್ನುವ ಮಾತಿನಂತೆ, ಡೊಳ್ಳು ಬಾರಿಸುವ ಗತ್ತು ಮತ್ತು ಕ್ರಮಗಳೆಲ್ಲವೂ ಗುಣಿ ಲೆಕ್ಕದಲ್ಲಿ ಇರುತ್ತದೆ. ಒಂದು ಕೋಲಿನ ಪೆಟ್ಟು ಒಂದು ಕೈ ಪೆಟ್ಟು ಹಾಕಿದರೆ ಅದಕ್ಕೆ ಒಂದು ಗುಣಿ ಎಂದು ಹೇಳಲಾಗುತ್ತದೆ. ಹೀಗೆ ಡೊಳ್ಳು ಕುಣಿತದ ಸಂದರ್ಭದಲ್ಲಿ ಮೂರು ಗುಣಿ, ಐದು ಗುಣಿ, ಏಳು ಗುಣಿ ಎಂಬಂತೆ ಬೆಸ ಸಂಖ್ಯೆಯನ್ನು ಆಧರಿಸಿ ಪೆಟ್ಟುಗಳು ಇರುತ್ತವೆ. ಹೀಗೆ ಡೊಳ್ಳು ಬಾರಿಸುತ್ತಾ ಆ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಕುಣಿಯುತ್ತಾ ವೃತ್ತಾಕಾರವಾಗಿ ಸುತ್ತುವರೆದು ನಿಧಾನಗತಿಯಿಂದ ವೇಗದ ಗತಿಯೆಡೆಗೆ ಬಾರಿಸುವ ಸದ್ದು ಮತ್ತು ಕುಣಿತವು ಸಾಗುತ್ತದೆ. ಹೀಗೆ ಕರ್ನಾಟಕದಾತ್ಯಂತ ಒಂದೇ ಬಗೆಯಾದ ಡೊಳ್ಳು ಬಾರಿಸುವ ಮತ್ತು ಕುಣಿಯುವ ವಿಧಾನಗಳು ಕಂಡು ಬರುತ್ತದೆ. ಡೊಳ್ಳು ಕುಣಿತದಲ್ಲಿ ಕೆಲವು ಪ್ರಕಾರಗಳು ಇದ್ದು, ಕುಕ್ಕರುಗಾಲಿನಲ್ಲಿ ಕುಳಿತು ಬಾರಿಸುವುದು, ಮಂಡಿಯೂರಿ ಬಾರಿಸುವುದು, ಲಾಗ ಹಾಕುವುದು, ಡೊಳ್ಳು ಬಾರಿಸುತ್ತಲೇ ಮೇಲೆ ಜಿಗಿದು ಬಾರಿಸುವುದು ಈ ಮೊದಲಾದವುಗಳು ಕಂಡು ಬರುತ್ತವೆ.

ಡೊಳ್ಳು ಕುಣಿತದಲ್ಲಿ ತಾಳವು ಪ್ರಮುಖ ಪಾತ್ರವನ್ನು ನಿಭಾಯಿಸುವಂತಹದ್ದಾಗಿದ್ದು, ತಾಳ ಹಾಕುವವನು ಈ ಕುಣಿತದ ನಿರ್ದೇಶಕನಾಗಿರುತ್ತಾನೆ. "ಡೊಳ್ಳಿನವರ ಬಲಗೈಯ ಪೆಟ್ಟು ಏಕಕಾಲದಲ್ಲಿ ಸಾಗಿದಂತೆ ಇದಕ್ಕೆ ಸಂವಾದಿಯಾಗಿ ಎಡಗೈಯ ನಾಲ್ಕು ತುದಿ ಬೆರಳಿನ ಪೆಟ್ಟು ವಾದ್ಯದ ದಂಡೆಗೆ ಬಡಿದು ಬಲಗೈ ತಾಳಕ್ಕೆ ತಕ್ಕಂತೆ ಇರುತ್ತದೆ. ಎಡಗೈ ಲಯ ಎಲ್ಲರಿಂದ ಒಮ್ಮೆಲೆ ಬರುವುದಿಲ್ಲ. ಕ್ರಮವಾಗಿ ಒಬ್ಬರಾದ ಮೇಲೆ ಒಬ್ಬರು ಹುಸಿಕೊಟ್ಟು ನುಡಿಸುತ್ತಾರೆ."4 "ಡೊಳ್ಳಿನಲ್ಲಿ ಹುಸಿ ತಾಳು ಎಂದು ಅನ್ನಬಾರದು ಹುಸಿ ಪೆಟ್ಟು ಎಂದು ಅನ್ನಬಾರದು, ಬಾರಿಸಿದ್ದೆಲ್ಲ, ಬಡಿದುದೆಲ್ಲ ಬರೆ ಪೆಟ್ಟು"5 ಎಂಬುದು ವಿದ್ವಾಂಸರ ಅಭಿಮತವಾಗಿದೆ.

ಬೀರಪ್ಪ ದೇವರ ಭಕ್ತರಾದ ಕುರುಬ ಸಮುದಾಯದವರು "ತಲ-ತಲಾಂತರಗಳಿಂದ ದೈವೀ ಆರಾಧನೆಯ ಸಾಧನವಾಗಿ ಬೆಳೆದು ಬಂದ ಈ ಕಲೆಯು, ಇತ್ತೀಚೆಗೆ ಮನರಂಜನೆಯ ಮಾಧ್ಯಮವಾಗಿ ಮನ್ನಣೆಯನ್ನು ಗಳಿಸಿದೆ. ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಡೊಳ್ಳು ಕುಣಿತ ಒಂದು ಮುಖ್ಯ ಪ್ರದರ್ಶನವಾಗಿ ಕಂಡು ಬರುತ್ತದೆ."6 ಇಂದಿನ ದಿನಮಾನಗಳಲ್ಲಿ ಅದು ಧಾರ್ಮಿಕತೆ, ಸಾಂಸ್ಕೃತಿಗಳನ್ನು ಮೀರಿ ಒಂದು ಸ್ಪರ್ಧೆಯ ರೂಪು ಪಡೆದು ತನ್ನ ಪ್ರದರ್ಶನವನ್ನು ನೀಡುತ್ತಿದೆ. ಅಲ್ಲದೇ ಪ್ರಮುಖ ಸಭೆ ಸಮಾರಂಭಗಳು, ಜಾನಪದ ಮೇಳ, ಉತ್ಸವ, ಊರಿನ ವಿಶೇಷ ಸಂದರ್ಭಗಳಲ್ಲಿ ಉದ್ಘಾಟನಾ ರೂಪದಲ್ಲಿ ಇಲ್ಲವೇ ಸ್ವಾಗತ ಕೋರುವ ಪ್ರದರ್ಶನ ಕಲೆಯಾಗಿ ಮೆರವಣಿಗೆಗಳಲ್ಲಿ ಪ್ರದರ್ಶನ ಕಂಡುಕೊಳ್ಳುತ್ತಿದೆ. ಹಿಂದೆ ಡೊಳ್ಳು ಕುಣಿತ ಬರೀ ಧಾರ್ಮಿಕ ಆಚರಣೆ-ಯ ಕುಣಿತವಾಗಿದ್ದು, ಇಂದು ಅಂತರಾಷ್ಟ್ರೀಯ ಮನ್ನಣೆಯನ್ನು ಪಡೆದಿದೆ ಎಂದರೆ ತಪ್ಪಾಗಲಾರದು. ಕೇವಲ ಗಂಡಸರಷ್ಟೇ ಪ್ರದರ್ಶಿಸುತ್ತಿದ್ದ ಈ ಕಲೆಯು ಹೆಂಗಸರ ಭಾಗವಹಿಸುವಿಕೆಗೂ ತನ್ನನ್ನು ತಾನು ತೆರೆದುಕೊಂಡಿದೆ. ವಿಶೇಷ ಸಂದರ್ಭಗಳಲ್ಲಿ, ಹಬ್ಬ-ಹರಿದಿನಗಳಲ್ಲಿ ಪ್ರದರ್ಶಿತಗೊಳ್ಳುವ ಈ ಕಲೆಯಲ್ಲಿನ ಡೊಳ್ಳಿನ ಬಡಿತ, ಬಡಿತಕ್ಕೆ ತಕ್ಕಂತೆ ತಾಳ, ತಾಳಕ್ಕೆ ತಕ್ಕಂತೆ ಕುಣಿತ ಇವೆಲ್ಲವಕ್ಕೂ ಹೊಸ ಮೆರಗು ತಂದುಕೊಡುವ ವೇಷಭೂಷಣದೊಂದಿಗೆ ಕಲಾವಿದರ ಕುಣಿತ ನೋಡುಗರನ್ನು ರಂಜಿಸುವುದರ ಜೊತೆಗೆ ಕಿವಿಗೆ ಇಂಪು, ಕಣ್ಣಿಗೆ ತಂಪು, ಮನಸ್ಸಿಗೆ ಆಹ್ಲಾದಕತೆಯನ್ನು ನೀಡುತ್ತದೆ. ■■

**ಕೊನೆ ಟಿಪ್ಪಣಿಗಳು:**

1. ಡಾ.ಎಂ.ಎಸ್.ಸುಂಕಾಪುರ – (ಸಂ) ಜೀವನ ಜೋಕಾಲಿ ಭಾಗ:6, ಪೀಠಿಕೆ ಭಾಗ, ಪು.ಸಂ–vii
2. ಡಾ.ಎಂ.ಎಸ್.ಸುಂಕಾಪುರ – (ಸಂ) ಜೀವನ ಜೋಕಾಲಿ ಭಾಗ:6, ಪೀಠಿಕೆ ಭಾಗ, ಪು.ಸಂ–vii
3. ಗೊ.ರು.ಚ – (ಸಂ) ಕರ್ನಾಟಕ ಜನಪದ ಕಲೆಗಳು, ಪು.ಸಂ–80
4. ಡಾ.ಅರ್ಜುನ ಗೊಳಸಂಗಿ – ಡೊಳ್ಳಿನ ಪದಗಳು, ಪು.ಸಂ–10
5. ಡಾ.ನಿಂಗಣ್ಣ ಸಣ್ಣಕ್ಕಿ – ಜಾನಪದ ತರಂಗಗಳು, ಪು.ಸಂ–61
6. ಗೊ.ರು.ಚ – (ಸಂ) ಕರ್ನಾಟಕ ಜನಪದ ಕಲೆಗಳ ಕೋಶ, ಪು.ಸಂ–80

**ಪರಾಮರ್ಶನ ಕೃತಿಗಳು:**


1. ಕನ್ನಡ ಜಾನಪದ (ಸಂ) – ಡಾ. ಜಯಲಕ್ಷ್ಮೀ ಸೀತಾಪುರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 2011
2. ಕರ್ನಾಟಕ ಜನಪದ ಕಲೆಗಳ ಕೋಶ (ಸಂ) – ಗೊ.ರು.ಚನ್ನಬಸಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1977
3. ಜಾನಪದ ತರಂಗಗಳು – ಡಾ. ಸಣ್ಣಕ್ಕಿ ನಿಂಗಣ್ಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 2002
4. ಜೀವನ ಜೋಕಾಲಿ ಭಾಗ 6, ಡೊಳ್ಳಿನ ಹಾಡು (ಸಂ) – ಎಂ.ಎಸ್.ಸುಂಕಾಪುರ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1976
5. ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ–1 – ಡಾ. ಸ. ಚಿ. ರಮೇಶ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. 2022
6. ಡೊಳ್ಳಿನ ಪದಗಳು – ಡಾ. ಅರ್ಜುನ ಗೊಳಸಂಗಿ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1998

ISSN: 2320-9941
ಪ್ರತಿಸ್ಪಂದ । Prathispandha

# ಕನ್ನಡ–ಮರಾಠಿ ಭಾಷೆ–ಸಾಹಿತ್ಯ ಬಾಂಧವ್ಯ

• ಡಾ. ಗೌರಮ್ಮಾ ಏಳಂಗಡಿ. (ಡಿಗ್ಗೆ ಜಿ ಎಸ್)

ಭಾಷೆ ಮಾನವ ಜನಾಂಗದ ಬಹುದೊಡ್ಡ ಅಮೂಲ್ಯ ಸೊತ್ತು. ಭಾಷೆಯಿಂದಲೇ ಅನಾಗರಿಕ ಮಾನವ ಸುಸಂಸ್ಕೃತನಾಗಿರುವದು. ಹಾಗೂ ಸಂಸ್ಕೃತಿ ಬೆಳೆದು ಸಂಶೋಧನೆ ಮುಂದುವರೆಯುತ್ತಲಿರುವದು. ಆದರೆ, ಭಾಷೆಯು ವಿಚಾರಗಳ ಆದಾನ–ಪ್ರಧಾನ ಸಾಧನವಾಗಿ ಯಾವಾಗ ಹುಟ್ಟಿತು? ಜಗತ್ತಿನಾದ್ಯಂತ ಅನೇಕ ಭಾಷೆಗಳು ಯಾವಾಗ ಉದಯಿಸಿದವು? ಎಂಬ ಪ್ರಶ್ನೆ ಅನುತ್ತರವಾಗಿ ಉಳಿದಿರುವದು. ಭಾಷೆಯ ಬೆಳಕಿನಲ್ಲೇ ಇಡೀ ಜಗತ್ತು ಬೆಳಗುತ್ತಿದೆ. ಭಾಷೆ ಮೊದಲು ಆಮೇಲೆ ಸಾಹಿತ್ಯದ ಸುಂದರ ರೂಪ. ವಿಚಾರವಿನಿಮಯದ ಸಾಧನವಾದ ಭಾಷೆಯಿಂದ ಮಾನವ ಮಾನವರ ಸಂಬಂಧಗಳಲ್ಲಿ ಅನ್ಯೋನ್ಯತೆ ಬೆಳೆಯಿತು. ನಂತರ ಭಾಷೆ ಸಮೃದ್ಧವಾದ ನಂತರ ಆಯಾಭಾಷೆಗಳಲ್ಲಿ ಸಾಹಿತ್ಯ ನಿರ್ಮಾಣವಾಯಿತು. ಸಾಹಿತ್ಯದ ಮೂಲಕ ಸಂಸ್ಕೃತಿ ಜನ್ಮತಾಳಿತು. ಜ್ಞಾನಪ್ರಧಾನ ಸಂಸ್ಕೃತಿ ಬೆಳೆಯಿತು. ಡಿ.ವಿ. ಜಿ ಯವರು ಹೇಳಿದಂತೆ 'ನಡೆ–ನುಡಿ ಚೊಕ್ಕಾಟವೇ ಸಂಸ್ಕೃತಿ' ಇದು ಮಾನವ ಸಮಾಜದ ಉಸಿರಾಯಿತು.

ಭಾರತವು ಖಂಡಪ್ರಾಯ ದೇಶ. ಬಹುಭಾಷಿಕತೆ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ಇಲ್ಲಿ ಸಾವಿರಾರು ಭಾಷೆಗಳು ಅಸ್ತಿತ್ವದಲ್ಲಿವೆ. ಭಾಷೆ, ಸಾಹಿತ್ಯ ಕೊಡು–ಕೊಳುವಿಕೆಯ ಕ್ರಿಯೆಯಿಂದ ಯಾವೊಂದು ಜನಾಂಗಕ್ಕೆ ಸೀಮಿತವಾಗದೇ ಸಜೀವವಾಗಿ, ಸಮೃದ್ಧತೆಯಿಂದ ಬೆಳೆಯುತ್ತ ಬಂದಿವೆ. ಒಂದು ಭಾಷೆಯನ್ನಾಡುವ ಬಹುಸಂಖ್ಯಾತರನ್ನು ಮುಖ್ಯವಾಗಿಟ್ಟುಕೊಂಡು ಭಾಷಾವಾರು ರಾಜ್ಯಗಳನ್ನು ರಚಿಸಲಾಯಿತು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಗುಜರಾತ ಮುಂತಾದ ರಾಜ್ಯಗಳ

**ವಿಳಾಸ:** ಡಾ. ಗೌರಮ್ಮಾ ಏಳಂಗಡಿ. (ಡಿಗ್ಗೆ ಜಿ ಎಸ್)
ಕನ್ನಡ ಸಹಾಯಕ ಪ್ರಾಧ್ಯಾಪಕರು
ಪುಣ್ಯಶ್ಲೋಕ ಅಹಿಲ್ಯಾದೇವಿ ಹೋಳ್ಕರ್ ಸೊಲ್ಲಾಪುರ
ವಿಶ್ವವಿದ್ಯಾಲಯ, ಸೊಲ್ಲಾಪುರ.
geetadigge01@gmail.com.

ಆಡಳಿತ ನಕ್ಷೆಗಳಾಗಿವೆ. ಆದರೆ, ಆ ರಾಜ್ಯಗಳ ಭಾಷಿಕ ನಕ್ಷೆಗಳಲ್ಲ ಎಂಬುದು ಅಕ್ಷರಶಃ ಸತ್ಯವಾದುದು. ಭಾರತದಲ್ಲಿ ಇರುವ ವಿವಿಧ ಭಾಷೆಗಳು ಪರಸ್ಪರ ಸೋದರ ಸಂಬಂಧವನ್ನು ರೂಪಿಸಿಕೊಂಡಿವೆ. ಇದು ಭಾಷೆಗಳಿಗೆ ಗಡಿಗಳಿಲ್ಲ ಎನ್ನುವದನ್ನು ಸ್ಪಷ್ಟಪಡಿಸುತ್ತದೆ.

ಕನ್ನಡ ಮತ್ತು ಮರಾಠಿ ಇವು ಅಕ್ಕಪಕ್ಕದ ರಾಜ್ಯ ಭಾಷೆಗಳು. ಇವೆರಡೂ ಭಾಷೆಗಳು ಭಿನ್ನ ಭಾಷಾವರ್ಗಕ್ಕೆ ಸೇರಿದವುಗಳು. ಕನ್ನಡ ಭಾಷೆ ದ್ರಾವಿಡ ಜನ್ಯ. ಆದರೆ ಮರಾಠಿ ಭಾಷೆ ಆರ್ಯಜನ್ಯವಾಗಿದೆ. ಹೀಗೆ ಭಾಷೆಗಳ ಮೂಲ ಭಿನ್ನವಾದರೂ ಸಾಂಸ್ಕೃತಿಕವಾಗಿ ಒಂದೇ ಆಗಿವೆ. ಎನ್ನುವದನ್ನು ಅನೇಕ ಸಂಶೋಧಕರು, ಹಿರಿಯ ವಿದ್ವಾಂಸರು ಸ್ಪಷ್ಟಪಡಿಸಿರುವರು.

**ಇತಿಹಾಸ : ಕನ್ನಡ – ಮರಾಠಿ ಬಾಂಧವ್ಯ**

ಇತಿಹಾಸದ ಪುಟಗಳನ್ನು ತೆರದು ನೋಡಿದಾಗ ಸುಮಾರು ಐದಾರು ನೂರು ವರ್ಷಗಳ ಕಾಲ ಕನ್ನಡ ರಾಜರು ಈಗಿನ ಮಹಾರಾಷ್ಟ್ರದ ಬಹುಭಾಗವನ್ನು ಆಳಿದ್ದಾರೆ ಎನ್ನುವದು ಸ್ಪಷ್ಟವಾಗುತ್ತದೆ. ಹಾಗೆಯೇ ಮರಾಠಾ ರಾಜರು ಕರ್ನಾಟಕದ ಕೆಲಭಾಗಗಳಲ್ಲಿ ನೇರವಾಗಿಯೂ ಹಾಗೂ ಸಂಸ್ಥಾನಿಕರಾಗಿಯೂ ಹಲವಾರು ವರ್ಷಗಳ ಕಾಲ ಆಡಳಿತ ಮಾಡಿದ್ದಾರೆ. ರಾಷ್ಟ್ರಕೂಟರು, ಕಲ್ಯಾಣಿ ಕಳಚೂರಿಯರು, ದೇವಗಿರಿಯ ಸೇವುಣರು, ಕನ್ನಡನಾಡಿನ ಕೀರ್ತಿಯನ್ನು ನರ್ಮದಾ ನದಿಯವರೆಗೂ ವಿಸ್ತರಿಸಿದ್ದರು. ಕವಿರಾಜಮಾರ್ಗಕಾರ ಹೇಳಿದ "ಕಾವೇರಿಯಿಂದ ಗೋದಾವರಿ ವರಮಿರ್ದ ನಾಡದಾ ಕನ್ನಡ" ಎಂಬ ಉಲ್ಲೇಖವಿದು ಇಲ್ಲಿ ಸ್ಪಷ್ಟತೆ ತಿಳಿಸುವ ಅಂಶವಾಗಿದೆ. ಶಿಲಾಹಾರ, ಯಾದವರು, ಸೇವುಣರ ಹಾಗೂ ಕಳಚೂರಿಗಳ ಇತಿಹಾಸವೆಂದರೆ ಕನ್ನಡ ಮತ್ತು ಮರಾಠಿ ಸಂಸ್ಕೃತಿಯ ಇತಿಹಾಸವೆಂದೇ ಹೇಳಲಾಗುತ್ತದೆ. ಮರಾಠಾ ಅರಸ ಛತ್ರಪತಿ ಶಿವಾಜಿಯ ವಂಶದ ಮೂಲ ಪುರುಷರು ಕರ್ನಾಟಕದ ಗದಗ ಜಿಲ್ಲೆಯ ಸೊರಟೂರಿನವರು. ಮುಂಬೈ ಮೂಲನಿವಾಸಿಗಳಾದ "ಕೋಳಿ" ಎಂಬ ಅಂಬಿಗ ಜಾತಿಗೆ ಸೇರಿದವರು ಕನ್ನಡಿಗರೇ ಆಗಿದ್ದರು ಎನ್ನುವದು ವಿದ್ವಾಂಸರು ಮತ್ತು ವಿದೇಶಿ ಬರಹಗಾರರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಉತ್ತರಕರ್ನಾಟಕವು ಮೊದಲು ಮುಂಬಯಿ ರಾಜ್ಯದಲ್ಲಿತ್ತು. ಇದರಲ್ಲಿ ಬಿಜಾಪುರ, ಬೆಳಗಾಂವ, ಧಾರವಾಡ, ಕಾರವಾರ ಜಿಲ್ಲೆಗಳ ಸಮಾವೇಶವಿತ್ತು. ಇಲ್ಲಿನ ಜನರಿಗೆ ಕನ್ನಡ ಮತ್ತು ಮರಾಠಿ ಭಾಷೆಯ ಪರಿಚಯವಿತ್ತು. ಈ ಭಾಗ ಕೆಲಕಾಲ ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಉರ್ದು, ಮರಾಠಿ ಶಾಲೆಗಳೂ ಅಸ್ತಿತ್ವದಲ್ಲಿದ್ದವು. ಕನ್ನಡವು ಕೇವಲ ಆಡುಭಾಷೆಯಾಗಿತ್ತು. ಆಡಳಿತ ಭಾಷೆ ಮರಾಠಿ. ಕನ್ನಡ ಮತ್ತು ಮರಾಠಿ ಭಾಷೆಗಳು ಒಂದಕ್ಕೊಂದು ಭಾವನಾತ್ಮಕ ಬಾಂಧವ್ಯವನ್ನು ಬೆಸೆದುಕೊಂಡ "ಅವಳಿ ಸಹೋದರ ಭಾಷೆಗಳು" ಎಂಬ ವಿಶೇಷತೆಗೆ ಪಾತ್ರವಾಗಿದ್ದವು.

**ಕನ್ನಡ–ಮರಾಠಿ ಭಾಷಾ ಬಾಂಧವ್ಯ:**

ಕರ್ನಾಟಕ ಮತ್ತು ಮಹಾರಾಷ್ಟ್ರ ಇವೆರಡೂ ರಾಜ್ಯಗಳು ನರ್ಮದಾ ನದಿಯಿಂದ ದಕ್ಷಿಣ ಭಾರತದಲ್ಲಿ ಒಂದ–ಕ್ಕೊಂದು ಅಕ್ಕಪಕ್ಕದಲ್ಲಿವೆ. ವ್ಯಾಪಾರ, ಉದ್ಯೋಗ, ಶಿಕ್ಷಣಕ್ಕಾಗಿ ಕರ್ನಾಟಕದವರು ಮಹಾರಾಷ್ಟ್ರಕ್ಕೆ ಬಂದಾಗ ಮರಾಠಿ ಭಾಷೆ ಆಡುವದು. ಮಹಾರಾಷ್ಟ್ರದವರು ಕನ್ನಡ ಭಾಷೆಯನ್ನು ಆಡುವದು. ಈ ಪ್ರಕಾರದ ಭಾಷಿಕ ವ್ಯವಹಾರ ಪರಸ್ಪರ ನಡೆಯುತ್ತಲೇ ಬಂದಿತು. ಈ ರೀತಿಯ ವಿಚಾರವಿನಿಮಯಗಳೊಂದಿಗೆ ಈ ಎರಡೂ ಭಾಷಿಕ ಪ್ರದೇಶಗಳ ನಡುವೆ ಸಾಂಸ್ಕೃತಿಕವಾಗಿಯೂ ಉಂಟಾದ ಕೊಳುಕೊಡುಗೆ ನಿರಂತರವಾದುದರಿಂದ ಭಾಷೆಗಳು ಅನ್ಯೋನ್ಯ ಸಂಬಂಧಗಳನ್ನು ಬೆಸೆದವು. ಗಡಿರೇಖೆಯನ್ನು ಮೀರಿದ 'ಸಂಸ್ಕೃತಿಕ–ಭೌಗೋಳಿಕ ವ್ಯವಸ್ಥೆಯೊಂದು ಪ್ರಾಚೀನ ಕಾಲದಿಂದಲೂ ರೂಪುಗೊಳ್ಳಲು ಕಾರಣವಾಯಿತು. ಈ ಒಂದು ಪ್ರಕ್ರಿಯೆ ಈ ಎರಡೂ ಭಾಷೆಗಳ ಸಾಂಸ್ಕೃತಿಕ ಸ್ವರೂಪವನ್ನು ಸೂಕ್ಷ್ಮವಾಗಿ ಗ್ರಹಿಸಿರುವ ಮರಾಠಿ ಲೇಖಕರಾದ ಗಂಗಾಧರ ಗಾಡಗೀಳರು "ಇವೆರಡು ಭಾಷೆಗಳು ವೈರಿಗಳಲ್ಲ; ಭಗಿನಿಯ ಸ್ವರೂಪದಲ್ಲಿ ಇರುವ ಭಾಷೆಗಳಾಗಿವೆ" ಎಂದು ಹೇಳಿರುವರು.

ಕನ್ನಡ–ಮರಾಠಿ ಭಾಷಾ ಬಾಂಧವ್ಯ ಪುರಾತನವಾದುದು. ಇವೆರಡರಲ್ಲಿ ಭಾಷೆ–ಸಾಹಿತ್ಯ–ಸಂಸ್ಕೃತಿಯ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ಇದನ್ನು ಕುರಿತು ಮರಾಠಿ ಹಿರಿಯ ಸಾಹಿತಿ ಭಾಸ್ಕರರಾವ ಜಾಧವ "ಮಹಾರಾಷ್ಟ್ರೀಯ ಮೈಯ್ಯಲ್ಲಿ ದ್ರವಿಡ ನೆತ್ತರವು ಹರಿದಾಡುತ್ತಿದೆ" ಎಂದು ಹೇಳಿ ಸಿದ್ಧಮಾಡಿ ತೋರಿಸಿದ್ದಾರೆ.

ISSN: 2320-9941
ಪ್ರತಿಸ್ಪಂದ । Prathispandha

ಹಾಲರಾಜನು ಬರೆದ 'ಗಾಥಾಸಪ್ತಶತಿ' ಕೃತಿಯು ಪ್ರಾಕೃತಭಾಷೆಯಲ್ಲಿದೆ. ಈತನ ರಾಜ್ಯಾಡಳಿತದ ಪ್ರಮುಖ ಪ್ರದೇಶ ಈಗಿನ ಮಹಾರಾಷ್ಟ್ರವೇ ಆಗಿತ್ತು. ಈ ವೇಳೆಯಲ್ಲಿ ಇಲ್ಲಿನ ರಾಜ್ಯಭಾಷೆ ಪ್ರಾಕೃತವಾಗಿತ್ತು ಎಂಬುದು ವಿದ್ವಾಂಸರ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ನೋಡಿದಾಗ 'ಗಾಥಾಸಪ್ತಶತಿ' ಕೃತಿಯಲ್ಲಿ ಅನೇಕ ಕನ್ನಡದ ಪದಗಳು ಕಾಣಿಸುತ್ತವೆ. ಅಂದರೆ ಕ್ರಿ.ಶ.1ನೇ ಶತಮಾನದ ಹೊತ್ತಿಗೆ ಕನ್ನಡ ಮತ್ತು ಮಹಾರಾಷ್ಟ್ರೀ ಪ್ರಾಕೃತ ಭಾಷೆಗಳ ನಡುವೆ ಕೊಳುಕೊಡುಗೆಯು ನಡೆಯುತ್ತ ಇದ್ದಿರಬಹುದು. ಇಂದಿನ ಮಹಾರಾಷ್ಟ್ರದ ಭಾಷೆಯೇ ಅಂದಿನ ಮಹಾರಾಷ್ಟ್ರೀ ಪ್ರಾಕೃತ ಎಂಬುದಾಗಿ ಚಿಂತಾಮಣರಾವ್ ವೈದ್ಯ  ಹಾಗೂ ಡಾ.ಸ್ಟೆನ್ಕೊನೊ, ಡಾ.ಗ್ರಿಯರ್ ಸನ್, ಡಾ.ಭಾಂಡಾರಕರ, ಗ್ಯಾರೆಜ್, ಜಾಕೋಬಿ, ಕಾನ್ಹಾ, ಪಿಶೇಲ, ರಾಜಾರಾಮ, ರಾಮಕೃಷ್ಣ ಭಾಗವತ ಮುಂತಾದವರು ಹೇಳಿದ್ದಾರೆ.

ಕನ್ನಡ ಮರಾಠಿ ಭಾಷೆಯ ಸಂಶೋಧಕರಾದ ಶಂ.ಬಾ.ಜೋಶಿಯವರು "ಮಹಾರಾಷ್ಟ್ರ ಪದವು ಮರಹಟ್ಟಿ ಶಬ್ದದಿಂದ ಬಂದಿದೆ. ಮರ+ಹಟ್ಟಿ (ಝಾಡಮಂಡಳ ಪ್ರದೇಶ)ಇವು ಕನ್ನಡದ ಪದಗಳು. ಈ ಭಾಗವು ಹಿಂದೆ ದಟ್ಟವಾದ ಅರಣ್ಯದಿಂದ ಕೂಡಿತ್ತು. ಇದಕ್ಕೆ ದಂಡಕಾರಣ್ಯವೆಂದೂ ಕರೆಯಲಾಗುತ್ತಿತ್ತು. ಮರಹಟ್ಟಿ–ಮರಹಾಟ–ಮಹಾರಟ್ಟ–ಮಹಾರಾಷ್ಟ್ರ ಹೀಗೆ ಸಂಸ್ಕೃತಿಗೊಂಡಿದೆ" ಎಂದು ಅಭಿಪ್ರಾಯ ಪಡುತ್ತಾರೆ.

ಕ್ರಿ.ಶ 9ನೇಶತಮಾನದಲ್ಲಿ ಚಾವುಂಡರಾಯನು ಕೆತ್ತಿಸಿದ ಶ್ರವಣಬೆಳಗೊಳದ ಶಾಸನದಲ್ಲಿ ಕನ್ನಡ, ಮರಾಠಿ ಹಾಗೂ ತಮಿಳು ಭಾಷೆಗಳ ಲಿಖಿತ ವಾಕ್ಯಗಳಿವೆ. 'ಶ್ರೀ ಚಾವುಂಡರಾಜೇ ಕರವಿಯಲೇ, ಗಂಗರಾಜೇ ಸುತ್ತಾಲೇ ಕರವಿಯಲೇ' ಇದು ಮರಾಠಿ ಭಾಷೆಯ ಮೊಟ್ಟಮೊದಲ ದಾಖಲೆ. ಇದುವೇ ಮರಾಠಿ ಭಾಷೆಯ ಪ್ರಥಮ ಶಿಲಾಶಾಸನ. ಇದು ಇರುವದು ಕರ್ನಾಟಕದಲ್ಲಿ. ಇಂತಹ ಸಂಸ್ಕೃತಿಕ ಸಂಬಂಧದ ಉಲ್ಲೇಖಗಳು ಸಾಕಷ್ಟು ಸಿಗುತ್ತವೆ. ಇಂದಿಗೂ ಸೊಲ್ಲಾಪುರ, ಸಾಂಗಲಿ, ಕೊಲ್ಹಾಪುರ ಜಿಲ್ಲೆಯ ಭಾಗಗಳು ಕನ್ನಡಮಯವಾಗಿವೆ. ಕನ್ನಡ ಅರ್ಥಬರುವ ಬಹಳಷ್ಟು ಗ್ರಾಮನಾಮಗಳು ಮಹಾರಾಷ್ಟ್ರದಲ್ಲಿವೆ. ಕಾನ್ಹೇರಿ, ಆಂಜನೇರಿ,  ರತ್ನಾಗಿರಿ, ಮುಂತಾದವುಗಳು.

**ಕನ್ನಡ–ಮರಾಠಿ ಸಾಹಿತ್ಯ ಸಂಬಂಧ:**

ಕನ್ನಡ–ಮರಾಠಿ ಭಾಷಾ ಸಂಬಂಧವನ್ನು ಉಪಲಬ್ಧ ಸಾಹಿತ್ಯ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ನೋಡಲಾಗಿದೆ. ಆದರೆ, ಮಹಾರಾಷ್ಟ್ರೀ ಪ್ರಾಕೃತದಲ್ಲಿ ರಚನೆಯಾದ ಸಾಹಿತ್ಯ ಕೃತಿಗಳ ಅಧ್ಯಯನ ನಡೆದರೆ ಈ ಎರಡೂ ಭಾಷೆಗಳ ಬಾಂಧವ್ಯದ ಇತಿಹಾಸ ಇನ್ನೂ ಹಿಂದಕ್ಕೆ ಹೋಗುತ್ತದೆ ಎಂಬ ಸಂಶೋಧಕ, ವಿದ್ವಾಂಸರ ಅಭಿಪ್ರಾಯವೂ ಇಲ್ಲಿ ಗಮನಾರ್ಹವಾದುದು. ಒಂದು ಸಮುದಾಯದ ಭಾಷೆ ಸಾಹಿತ್ಯಿಕ ಭಾಷೆಯಾಗುವಲ್ಲಿ ಸಾಂಸ್ಕೃತಿಕ ಒತ್ತಡಗಳು ಇರುವಂತೆಯೇ ಸಾಂಸ್ಕೃತಿಕ ಹಿಡಿತಗಳೂ ಅಷ್ಟೇ ಬಲವಾದ ಕಾರಣಗಳಾಗಿರುತ್ತವೆ. ಕನ್ನಡ ಸಾಹಿತ್ಯಿಕ ಭಾಷೆಯಾಗಲು ಕನ್ನಡ ಆಡಳಿತ ಭಾಷೆಯಾಗಿ ಸುಮಾರು ಐದುನೂರು ವರ್ಷಗಳೇ ಬೇಕಾಯಿತು. ಕ್ರಿ.ಶ 4ನೇ ಶತಮಾನದ ಕದಂಬ ವಂಶದ ರಾಜರ ಆಡಳಿತ ಭಾಷೆ ಕನ್ನಡವಾಗಿತ್ತು. ಶಾತವಾಹನರು ಮರಾಠಾ ವಂಶಸ್ಥರು ಎಂಬುದು ಅಲ್ಲಿನ ವಿದ್ವಾಂಸರ ವಾದ. ಶಾತವಾಹನರು ಕನ್ನಡಿಗರು, ಆಂಧ್ರಭೃತ್ಯರು ಎಂಬ ವಾದವೂ ಇದೆ. 'ಮಹಾರಾಷ್ಟ್ರಾಶ್ರಯಂ ಭಾಷಾಂ ಪ್ರಕೃಷ್ಟಂ ಪ್ರಾಕೃತಂ ವಿದುಃ' ಎಂಬುದು ದಂಡಿಯ ಹೇಳಿಕೆ. ಕನ್ನಡ ಮತ್ತು ಮರಾಠಿ ಭಾಷಿಕರ ನಡುವಿನ ನಿಕಟ ಒಡನಾಟದಿಂದಾಗಿ ವಾಙ್ಮಯ ಸಂಬಂಧ ಬೆಳೆಯಿತು. ಕಾಲದ ದೃಷ್ಟಿಯಿಂದ ಹೇಳುವದಾದರೆ ಕನ್ನಡ ಪ್ರಾಚೀನ ಭಾಷೆ. ಕನ್ನಡದ ಆರಂಭದ ಕಾಲ ಎರಡು ಮೂರನೇ ಶತಮಾನವೆಂದು ಒಪ್ಪಿಕೊಳ್ಳಲಾಗಿದೆ. ಸಾಹಿತ್ಯ ರಚನೆಗೊಂಡದ್ದು ಒಂಭತ್ತನೇ ಶತಮಾನ. ಕನ್ನಡದ ಮೊದಲ ಉಪಲಬ್ಧ ಗ್ರಂಥ ಕವಿರಾಜಮಾರ್ಗ. ಕನ್ನಡದ ಆದಿ ಕವಿ ಪಂಪ. ಈತ ಬರೆದ 'ವಿಕ್ರಮಾರ್ಜುನ ವಿಜಯ ಕನ್ನಡದ ಆದಿಗ್ರಂಥ. ಮರಾಠಿ ಸಾಹಿತ್ಯದ ಉದಯಕಾಲ ಹನ್ನೆರಡನೇಯ ಶತಮಾನದ ಉತ್ತರಾರ್ಧ. ಹಾಗೆಯೇ ಮರಾಠಿ ಆದಿಕವಿ ಮುಕುಂದರಾಜ. ಈತನು ಬರೆದ 'ವಿವೇಕಸಿಂಧು' ಮರಾಠಿಯ ಆದಿಗ್ರಂಥ. ಪಂಪನು ತನ್ನ ಕೃತಿ 'ವಿಕ್ರಮಾರ್ಜುನ ವಿಜಯ'ದಲ್ಲಿ ಆಶ್ರಯದಾತ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಬರೆದಂತೆ, ಮರಾಠಿ ಕವಿ ಮುಕುಂದರಾಜನು 'ವಿವೇಕಸಿಂಧು' ಕೃತಿಯನ್ನು ಆಶ್ರಯದಾತ ಚೈತ್ರಪಾಲನಿಗೆ ತತ್ವ ಬೋಧಿಸಲು ಬರೆದಿರುವನು.

ಮುಕುಂದರಾಜನ ನಂತರವೇ ಮರಾಠಿ ಸಾಹಿತ್ಯದಲ್ಲಿ ಹೊಸ ಗಾಳಿ ಬೀಸತೊಡಗಿತು. 13ನೇ ಶತಮಾನದಲ್ಲಿ ಮಹಾನುಭಾವ ಪಂಥ ಉದಯವಾಯಿತು. ಗುಜರಾತದಿಂದ ಬಂದ ಚಕ್ರಧರ ಈ ಪಂಥದ ಸ್ಥಾಪಕ. ಇಲ್ಲಿಯ

ಅನೇಕ ವಿದ್ವಾಂಸರು ಈತನ ಶಿಷ್ಯರಾದರು. ಕನ್ನಡದಲ್ಲಿಯ ವಚನಕಾರರಂತೆ ಇವರೂ ಜಾತಿ–ಮತ–ಪಂಥಗಳನ್ನು ಧಿಕ್ಕರಿಸಿ ನೀತಿ ಸದ್‌ವಿಚಾರಗಳಿಗೆ ಮಹತ್ವ ನೀಡಿದರು. ಜನ ಬದುಕುವ ಸಾಹಿತ್ಯ ರಚಿಸಿದರು. ಮಹಾರಾಷ್ಟ್ರದಲ್ಲಿ ಭಕ್ತಿಪಂಥ ಸಾಹಿತ್ಯ ಸ್ಥಾಪಿಸಿದ ಶ್ರೇಯಸ್ಸು ಮಹಾನುಭಾವ ಪಂಥಕ್ಕೆ ಸಲ್ಲುತ್ತದೆ. ಕನ್ನಡದ ಶರಣರು ಮತ್ತು ಮರಾಠಿಯ ಮಹಾನುಭಾವರು ಇಬ್ಬರೂ ಅನುಭಾವ ಸಾಹಿತ್ಯ ರಚಿಸಿದರು. ಶರಣಪಥ–ವಾರಕರಿಪಥ ಹತ್ತಿರದ ಸಂಬಂಧವನ್ನು ಪಡೆದಿವೆ. ವಚನ ಚಳುವಳಿಯ ನಂತರ ಐವತ್ತು ಅರವತ್ತು ವರ್ಷಗಳ ಅಂತರದಲ್ಲಿ ಸಂತರ ಚಳುವಳಿ ಆರಂಭವಾಯಿತು. ಸಮಾಜದ ಎಲ್ಲಾ ವರ್ಗದ ಜನ ಭಕ್ತಿ ಚಳುವಳಿಯಲ್ಲಿ ಮಿಂದು ಪುನೀತರಾದರು. ಅಂದು ಸೊಲ್ಲಾಪುರ ಭಾಗ ಶರಣ ಮತ್ತು ಸಂತ ಚಳುವಳಿಯ ಸಂಗಮಕ್ಷೇತ್ರವಾಯಿತು. ಈ ವಿಶೇಷ ಸಾಂಸ್ಕೃತಿಕ ಬಂಧುತ್ವದ ಅವಿನಾಭಾವ ಬಾಂಧವ್ಯ ಅಪ್ರತಿಮವಾದುದು.

ಕನ್ನಡದ ದಾಸ ಪರಂಪರೆ ಮತ್ತು ಮರಾಠಿಯ ವಾರಕರಿ ಪಂಥ ಸರಿ–ಸಮಾರು ಒಂದೇ ಕಾಲದಲ್ಲಿ ಉದಯಿಸಿವೆ. ಇವರಿಬ್ಬರ ಅರಾಧ್ಯದೈವ 'ವಿಠಲ'. ಮರಾಠಿಯಲ್ಲಿ 'ಕನ್ನಡದ ವಿಠಲ'ನೆಂದೇ ಪ್ರಸಿದ್ಧನಾಗಿದ್ದಾನೆ. ಈ ವಿಠಲನು ದಾಸರು ಮತ್ತು ಸಂತರ ಬಾಂಧವ್ಯದ ಕೊಂಡಿಯಾಗಿದ್ದಾನೆ. ಜೀವನದಲ್ಲಿ ಭಕ್ತಿ, ಮುಕ್ತಿ, ಆಧ್ಯಾತ್ಮ, ಅನುಭಾವದ ಅರಿವು ಈ ಎರಡೂ ಪರಂಪರೆಯಲ್ಲಿ ಇರುವದು ಕಂಡುಬರುತ್ತದೆ. 'ಜೀವನವೆಂಬುದು ನೀರ ಮೇಲಿನ ಗುಳ್ಳೆ', 'ಈಸಬೇಕು ಇದ್ದು ಜಯಿಸಬೇಕು' ಇವು ಇಲ್ಲಿನ ಮುಖ್ಯ ವಿಚಾರಗಳಾಗಿವೆ. ಈ ವೈಚಾರಿಕ ತಳಹದಿಯಲ್ಲಿ ನೋಡಿದಾಗ ದಾಸರಲ್ಲಿ ಕನಕದಾಸರು ಮುಖ್ಯವಾದಂತೆ, ಸಂತರಲ್ಲಿ ಚೋಕಾಮೇಳಾ ಮುಖ್ಯರಾಗಿರುವರು. ಕನ್ನಡಸಾಹಿತ್ಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನಂತೆ ಸಂತರಲ್ಲಿ ಜನಾಬಾಯಿ, ಕಾನ್ಹೋಪಾತ್ರಾ ಇರುವರು. ದಾಸರ ಮಂಡಿಗೆಗಳು ಮತ್ತು ಸಂತರ ಭಾರುಡಗಳಲ್ಲಿ ಸಾಕಷ್ಟು ಸಾಮ್ಯತೆ ಇರುವದು ಕಂಡುಬರುತ್ತದೆ.

ಪ್ರಾಚೀನದಿಂದ ಆಧುನಿಕ ಸಾಹಿತ್ಯದವರೆಗೂ ಅವಲೋಕಿಸಿದಾಗ ಕನ್ನಡ ಮತ್ತು ಮರಾಠಿಯ ಅವಿನಾಭಾವ ಸಂಬಂಧವಿರುವದು ಸ್ಪಷ್ಟವಾಗುತ್ತದೆ. ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯದ ಐದನೇ ಆಶ್ವಾಸದಲ್ಲಿ 'ವರ್ಹಾಟ' ಎಂಬ ಪದವು ಮರಾಠಾ ಸೈನಿಕರನ್ನು ಕುರಿತು ಹೇಳಿರುವದಾಗಿದೆ. ಜನ್ನನ 'ಅನಂತನಾಥ ಪುರಾಣ'ದಲ್ಲಿ 'ಊಠಿ ಊಠಿ ಮ್ಹಾಗಾ ಬೈಸ್ ಜಾ ತೂ ಹಳೂ (ಏಳು ಏಳು ಮೆಲ್ಲಗೆ ಹಿಂದಕ್ಕೆ ಹೋಗಿ ಕುಳಿತು ಕೊ) ಎಂಬ ಸಾಲು ಇರುವದು. 'ನೇಮಿನಾಥ ಪುರಾಣ' ಬರೆದ ಕನ್ನಡ ಕವಿ ಕರ್ಣಪಾರ್ಯ ಮೂಲತಃ ಮಹಾರಾಷ್ಟ್ರದ ಕೊಲ್ಲಾಪುರದವನು. ಮಂಗಳವೇಡೆಯಲ್ಲಿದ್ದ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮುಂತಾದವರ ವಚನಗಳಲ್ಲಿ ಮರಾಠಿ ಪದಗಳು (ಬತ್ತೀರ್ಸ ರಾಗ, ನಿರಾಳಾ, ಕಂಟಾಳೂ, ತ್ರಾಸು) ಸಿಗುತ್ತವೆ. 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದ ಕರ್ತೃ ಕುಮಾರವ್ಯಾಸನ ಕೃತಿಯಲ್ಲಿ ಜೇವಣ, ವೀರವಣ, ಮಂಜರ ಮುಂತಾದ ಮರಾಠಿ ಶಬ್ದ ಮತ್ತು ವಾಕ್ಯಗಳಿವೆ. ಕನ್ನಡದಂತೆಯೇ ಮರಾಠಿ ಭಾಷೆಯ ಕೃತಿಗಳಲ್ಲಿಯೂ ಸಾಕಷ್ಟು ಉಲ್ಲೇಖಗಳಿರುವವು. ಜ್ಞಾನೇಶ್ವರಿ ಕಾವ್ಯದಲ್ಲಿ ಅಡಿತರ (ಅಡ್ಡಿ), ಮಿರವಿಣ(ಮೆರವಣಿಗೆ), ಓಗರ(ಊಟ)ಮುಂತಾದವು. ಹಾಗೂ 'ಅನುಭವಾಮೃತದಲ್ಲಿ' ಬೋಣೆ(ಬಾನ), ಮಾಂದಿ(ಮದುವೆ), ಸಾನ(ಸಣ್ಣ) ಮುಂತಾದ ಅಸಂಖ್ಯ ಕನ್ನಡ ಪದಗಳು, ಪಡೆನುಡಿಗಳು ಬಳಕೆಯಾಗಿರುವದನ್ನು ರಂ.ಶಾ.ಲೋಕಾಪುರವರು ತಮ್ಮ 'ಜ್ಞಾನೇಶ್ವರಿವರಿಲ್ ಕನ್ನಡಚಾ ಪ್ರಭಾವ' ಎನ್ನುವ ಕೃತಿಯಲ್ಲಿ ವಿವರಿಸಿದ್ದಾರೆ. 'ಕಾನಡಾ ಹೊ ವಿಠಲೂ ಕರ್ನಾಟಕೂ' ಎಂಬ ಅಭಂಗ ವಿಠಲ ಕನ್ನಡದ ದೈವ ಎಂಬುದರ ನಿರ್ಧಿಷ್ಟತೆಯನ್ನು ತಿಳಿಸುತ್ತದೆ. ಪೈಠಾಣದ ಸಂತ ಏಕನಾಥರು ಕನ್ನಡದ ಕನಕದಾಸರು ಸಮಕಾಲೀನರು. ಇವರು ಕನ್ನಡದಲ್ಲಿಯೂ ಅಭಂಗ ರಚನೆ ಮಾಡಿದ್ದಾರೆ. 'ನಮೋ ಕಾನಡೀ ಭಾಷೆ' ಎಂದು ಉದ್ಗರಸಿದ್ದಾರೆ. ಮುಕ್ತೇಶ್ವರ, ಶಾಂತಲಿಂಗಸ್ವಾಮಿ ಇವರು ಕನ್ನಡದ ನಿಜಗುಣಶಿವಯೋಗಿಗಳ 'ವಿವೇಕಚಿಂತಾಮಣಿ', ಚನ್ನಬಸವಣ್ಣನ 'ಕರಣಹಸುಗೆ'ಗಳ ಅನುವಾದಕರಾಗಿರುವರು. ಚಂದ್ರಾತ್ಮಜ ರುದ್ರ ಕುಮಾರವ್ಯಾಸಭಾರತದ ಅನುವಾದಕರು. ಬ್ರಹ್ಮದಾಸರು ಪ್ರಭುಲಿಂಗಲೀಲೆಯ ಮರಾಠಿ ಅನುವಾದಕರು. ಶಿವದಾಸವು ಸಿದ್ಧರಾಮ ಚಾರಿತ್ರ್ಯದ ಮರಾಠಿ ಅನುವಾದ, ಸಂತರಾಮದಾಸ ಮತ್ತು ಚಿದಂಬರ ದೀಕ್ಷಿತರು ಮೊದಲಾದವರು ಮರಾಠಿ ಮತ್ತು ಕನ್ನಡದಲ್ಲಿಯೂ ಸಾಹಿತ್ಯ ರಚನೆ ಮಾಡಿದ್ದಾರೆ.

ಆಧುನಿಕ ಸಾಹಿತ್ಯದಲ್ಲಿ ಮರಾಠಿ ಬಲ್ಲಂತಹ ಕನ್ನಡ ಲೇಖಕರಿಂದಾಗಿ ವಿಶಿಷ್ಟ ಪ್ರಭಾವವು ರಂಗಭೂಮಿಯ

ISSN: 2320-9941
ಪ್ರತಿಸ್ಪಂದ । Prathispandha

ಮೇಲೂ ಆಗಿರುವದನ್ನು ನೋಡಬಹುದು. ಕನ್ನಡ ರಂಗಭೂಮಿಯ ಪ್ರಭಾವದಿಂದಾಗಿ ಮರಾಠಿಯಲ್ಲಿ ಸಂಗೀತ ರಂಗಭೂಮಿಯು ಹುಟ್ಟಿಕೊಂಡಿತು. 1880ರಲ್ಲಿ ಕಿರ್ಲೋಸ್ಕರರು ಮರಾಠಿಯಲ್ಲಿ ಸಂಸ್ಕೃತ ಪದ್ಧತಿಯ ನಾಟಕಗಳನ್ನು ರಚಿಸಲಾರಂಭಿಸಿದರು. ಇದರ ಪರಿಣಾಮವಾಗಿ ಕನ್ನಡ ಮತ್ತು ಮರಾಠಿ ನಾಟಕಗಳಲ್ಲಿ ಹೊಸಬೆಳಕು ಮೂಡಿತು. ಕೇಶವರಾವ ಭೋಸ್ಲೆಯವರ 'ಲಲಿತ ಕಲಾದರ್ಶ' ಎಂಬ ನಾಟಕ ಕಂಪನಿ ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಯಿತು. ಇದರ ಮೂಲಕವೇ 19ನೇ ಶತಮಾನದ ಮೊದಲಭಾಗದಲ್ಲಿ ಮರಾಠಿ ನಾಟಕ ಸಂಘಗಳ ಪ್ರೇರಣೆಯಿಂದ ಉತ್ತರಕರ್ನಾಟಕದಲ್ಲಿ ನಾಟ್ಯಸಂಘಗಳು ಹುಟ್ಟಿಕೊಂಡವು.

20ನೇ ಶತಮಾನದ ಆಧುನಿಕ ಸಾಹಿತ್ಯದಲ್ಲಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಬೇಂದ್ರೆ ಮತ್ತು ಜಯದೇವತಾಯ ಲಿಗಾಡೆ, ಕನ್ನಡ ಮತ್ತು ಮರಾಠಿ ಸಾಹಿತ್ಯ ಕೃಷಿಯಲ್ಲಿ ಗೈದ ಈ ದಿಗ್ಗಜರುಗಳ ಕಾರ್ಯ ಅನುಪಮವಾದುದು. ಎರಡೂ ಸಾಹಿತ್ಯದಲ್ಲಿಯ ಅನುವಾದದ ಕಾರ್ಯವೂ ಸಹ ಈ ಬಾಂಧವ್ಯವನ್ನು ಇನ್ನೂ ಗಟ್ಟಿಗೊಳಿಸಿದೆ. ಕನ್ನಡದ ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ಎಸ್.ಎಲ್ ಭೈರಪ್ಪ, ಶಿವರಾಮಕಾರಂತ, ವಸಂತಕುಮಾರ ದಿವಾಣಜಿ, ಚಂದ್ರಶೇಖರ ಕಂಬಾರ, ಶರಣಕುಮಾರ ಲಿಂಬಾಳೆ ಮುಂತಾದವರ ಕೃತಿಗಳ ಅನುವಾದ ಕಾರ್ಯ ಸಾಗುತ್ತಲೇ ಇರುವದು. ಹಾಗೆಯೇ ವಿ.ಸ.ಖಾಂಡೇಕರ, ವಿ.ವಾ.ಶಿರವಾಡಕರ, ವಿಜಯ ತೆಂಡೂಲಕರ, ರಾ.ಚಿಂ.ಢೇರೆ ಮುಂತಾದ ಪ್ರಮುಖ ಮರಾಠಿ ಲೇಖಕರ–ಸಂಶೋಧಕರ ಗ್ರಂಥಗಳು ಕನ್ನಡ ಭಾಷೆಯಲ್ಲಿ ಅನುವಾದಗೊಂಡಿವೆ. ಇತ್ತೀಚೆಗೆ ಡಾ.ಗುರುಲಿಂಗ ಕಾಪಸೆಯವರು ವಿ.ಸ. ಖಾಂಡೇಕರ ಅವರ 'ಒಂದು ಪುಟದ ಕಥೆ' ಎಂಬ ಆತ್ಮಕಥೆಯನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿರುವರು. ಇದು 2022ರ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅನುವಾದ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ.

ಭಾಷೆ–ಸಾಹಿತ್ಯದಲ್ಲಿ ಗಡಿ ಮೀರಿದ ಹೃದಯ ಸ್ಪಂದನೆಯಿದೆ. ಅನೇಕ ಗೊಂದಲಗಳ ನಡುವೆಯೂ ಭಾಷಾ–ಸಾಹಿತ್ಯ ಸಂಬಂಧಗಳು ಸಹಜವಾಗಿ ಸಾಗುತ್ತಲಿವೆ. "ಕನ್ನಡಿಗರೆಲ್ಲರನ್ನು ಕರ್ನಾಟಕದಲ್ಲಿ ಮರಾಠಿಗರೆಲ್ಲರನ್ನು ಮಹಾರಾಷ್ಟ್ರದಲ್ಲಿ ಕಲೆಹಾಕಲು ಆ ದೇವರಿಂದಲೂ ಸಾಧ್ಯವಿಲ್ಲ" ಎನ್ನುವ ಪಾಟೀಲ ಪುಟ್ಟಪ್ಪನವರ ಮಾತು ಅಕ್ಷರಶಃ ನಿಜವಾದುದು. ವೈವಿಧ್ಯಮಯ ಭಾಷೆ–ಸಾಹಿತ್ಯ–ಸಂಸ್ಕೃತಿ ಪರಂಪರೆಯ ಭಾರತ ದೇಶ ಸೌಹಾರ್ದತೆಯ ಅಂಶಗಳನ್ನೇ ರೂಪಿಸಿಕೊಂಡು ಮುಂದುವರೆಯುತ್ತಲಿರುವದು ಆದರ್ಶಪ್ರಾಯವಾದುದು. ಅಭಿಮಾನಪಡುವಂತಹದ್ದು. ಇದಕ್ಕೆ ತಕ್ಕ ನಿದರ್ಶನವನ್ನು ಕನ್ನಡ–ಮರಾಠಿ ಬಾಂದವ್ಯದಲ್ಲಿ ಕಾಣಬಹುದು.

■■

---

**ಪರಾಮರ್ಶನ ಕೃತಿಗಳು:**


1. ಕರ್ನಾಟಕ ಸಂಸ್ಕೃತಿ ಸಮೀಕ್ಷೆ– ಡಾ ಎಚ್.ತಿಪ್ಪೇರುದ್ರಸ್ವಾಮಿ.
2. ಕನ್ನಡ–ಮರಾಠಿ ಸಾಂಸ್ಕೃತಿಕ ಬಾಂಧವ್ಯ– ಡಾ. ವಿಠ್ಠಲರಾವ ಗಾಯಕ್ವಾಡ್.
3. ಮಹಾರಾಷ್ಟ್ರದ ಕನ್ನಡ ಶಾಸನಗಳು– ಡಾ.ಜಿ.ಎನ್.ಉಪಾಧ್ಯಾಯ
4. ಕನ್ನಡ–ಮರಾಠಿ ಬಾಂಧವ್ಯ– ಸಂ.ಡಾ.ಗುರುಲಿಂಗಪ್ಪ ಧಬಾಲೆ.
5. ಮಹಾರಾಷ್ಟ್ರ–ಕರ್ನಾಟಕಸಾಹಿತ್ಯದ ಆದಾನ–ಪ್ರದಾನ– ಡಾ.ಜಿ.ಎನ್.ಉಪಾಧ್ಯಾಯ
6. ಸಾಹಿತ್ಯದ ವಿರಾಟ್ ಸ್ವರೂಪ– ದ.ರಾ.ಬೇಂದ್ರೆ.
7. ಕನ್ನಡ ಸಾಹಿತ್ಯ ಚರಿತ್ರೆ– ರಂ.ಶ್ರೀ.ಮುಗಳಿ.

ISSN: 2320-9941
Prathispandha । ಪ್ರತಿಸ್ಪಂದ



# 'ಅಂಬೇಡ್ಕರ್' ನಾಟಕದಲ್ಲಿ ಎಲ್. ಹನುಮಂತಯ್ಯ ಅವರ ಚಿಂತನೆಗಳು

● ಡಾ. ರವಿಶಂಕರ್ ಎ. ಕೆ.

ಶತಮಾನದ ಸೇಡಿನ ಕಿಡಿ
ಜಗದೊಲವಿನ ಜ್ಯೋತಿಯೇ
ಒಡಲಿನಾಳದಿಂದ ಬಂದ
ಅರಿವಿನ ಅಸ್ಫೋಟವೇ
ಗಾಂಧಿಯೆಂಬ ಬಲೆಯ ಸೀಳಿ
ಬೆಳಕಿನೆಡೆಗೆ ಸಾಗಿದವನೆ
ಧರ್ಮ ಅರಿವ ವ್ಯೂಹದಲ್ಲಿ
ಅಭಿಮನ್ಯುವಾದವನೆ.
(ಅವ್ವ–ಬಾಬಾ ಸಾಹೇಬ್)

ಪ್ರಪಂಚದ ಚಿಂತನೆಗಳಲ್ಲಿ ಅರ್ಥಪೂರ್ಣವಾಗಿ ಉಳಿದ ಭಾರತೀಯ ಚಿಂತಕ ಡಾ. ಬಿ.ಆರ್. ಅಂಬೇಡ್ಕರ್. ಸಮಾನತೆಯನ್ನು ಅಸ್ಪಶ್ಯರ ಬೇರಿನಿಂದ ಗುರ್ತಿಸಿದವರು. ಬದುಕಿನುದ್ದಕ್ಕೂ ಹೋರಾಟಗಳನ್ನು ನಡೆಸುತ್ತಲೇ ದಲಿತರ ಆಶಾಕಿರಣವಾಗಿ ದುಡಿದ ಚಿಂತಕ ಇವರು. ಭಾರತೀಯ ಎಲ್ಲಾ ಭಾಷೆಗಳಲ್ಲೂ ಲಕ್ಷಾಂತರ ಬರೆಹಗಳು, ಬದುಕುಗಳು ಇಂದಿಗೂ ನೆನೆಯುತ್ತಿರುವುದು ಇವರು ನೀಡಿದ ಸಂವಿಧಾನದ ಶಕ್ತಿಯಿಂದ ಎನ್ನಬಹುದು. ಇವರನ್ನು, ಇವರ ಚಿಂತನೆಗಳನ್ನು ಉಸಿರಾಡುತ್ತಲೇ ಬದುಕುವ ಹಲವು ವಿಭಿನ್ನ ಬಗೆಯ ಜನಸಾಮಾನ್ಯರನ್ನು ಗುರ್ತಿಸಬಹುದು. ಕನ್ನಡದಲ್ಲೂ ಅಂತಹ ಸಾಹಿತಿಗಳ ಸಾಲಿನಲ್ಲಿ ಡಾ. ಎಲ್. ಹನುಮಂತಯ್ಯ ಅವರನ್ನೂ ಗುರ್ತಿಸಬಹುದು.

ಎಲ್. ಹನುಮಂತಯ್ಯ ಅವರು ಅಂಬೇಡ್ಕರ್ ಮತ್ತು ಗಾಂಧಿಯನ್ನು ಅರ್ಥಪೂರ್ಣವಾಗಿ ಓದಿಕೊಂಡವರು. ಅವರ ಹರಿಗೋಲು, ಕರ್ಣರಾಗ, ಅಕ್ಷಾರ ಅಕ್ಷಾರವೇ, ಅವ್ವ, ಕಪ್ಪು ಕಣ್ಣಿನ ಹುಡುಗಿ ಈ ಎಲ್ಲ ಕವನ ಸಂಕಲನಗಳಲ್ಲೂ ಅಂಬೇಡ್ಕರ್ ಚಿಂತನೆಗಳನ್ನು

**ವಿಳಾಸ:** ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಬೆಂಗಳೂರು – 560077
ravishankar@kristujayanti.com

ISSN: 2320-9941
ಪ್ರತಿಸ್ಪಂದ । Prathispandha

ಅರ್ಥಪೂರ್ಣವಾಗಿ ಜೋಡಿಸಿಕೊಂಡಿದ್ದಾರೆ. ಇವರ ಆಲೋಚನೆಗಳಲ್ಲಿ ಅಂಬೇಡ್ಕರ್ ತತ್ವಗಳು ಎಳೆ ಎಳೆಯಾಗಿ ಕಾಣಿಸಿಕೊಳ್ಳುತ್ತವೆ. ಇವರು ಬರೆದ ಏಕೈಕ ನಾಟಕ ಅಂಬೇಡ್ಕರ್. ಈ ನಾಟಕವನ್ನು ಕುರಿತು ಹೊಸ ಮಾದರಿಯ ಅಧ್ಯಯನ ರೂಪದಲ್ಲಿ ಇಲ್ಲಿ ಸಂಶೋಧಿಸಲಾಗಿದೆ

ಎಲ್. ಹನುಮಂತಯ್ಯ ಅವರು ರಚಿಸಿದ ಗದ್ಯಸಾಹಿತ್ಯವನ್ನು ಗಮನಿಸಿದಾಗ ಬೂದಿ ಮುಚ್ಚಿದ ಕೆಂಡ, ಅಂಬೇಡ್ಕರ್ ಮತ್ತು ಸಮಕಾಲೀನತೆ, ಒಂಟಿ ಕಾಲಿನ ನಡಿಗೆ ಈ ಮೂರು ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವ 110ಕ್ಕೂ ಹೆಚ್ಚು ಲೇಖನಗಳು ದಲಿತರ ನೋವುಗಳನ್ನು ವಿಭಿನ್ನ ಬಗೆಯಲ್ಲಿ ಕಟ್ಟಿಕೊಡುತ್ತವೆ. ಸಾಹಿತ್ಯ, ಸಂಘಟನೆ, ಹೋರಾಟ, ಕಾನೂನು ಇವೆಲ್ಲವುಗಳ ಕುರಿತು ಸಾಮಾಜಿಕ ಪ್ರಜ್ಞೆಯ ವಿಚಾರಗಳ ಮೂಲಕ ಲೇಖನಗಳನ್ನು ರಚಿಸಿದ್ದಾರೆ. ಎಲ್. ಹನುಮಂತಯ್ಯ ಅವರು ದಲಿತ ಸಂವೇದನೆಯನ್ನು ಹೊರತುಪಡಿಸಿ ಒಂದು ಲೇಖನವನ್ನು ರಚಿಸಿಲ್ಲ ಎನ್ನಬಹುದು. ಇವರ ಬರಹಗಳನ್ನು ಅಧ್ಯಯನ ಮಾಡುತ್ತಾ ಸಾಗಿದಾಗ ಪ್ರತಿ ವಿಚಾರದಲ್ಲಿಯೂ ಅಂಬೇಡ್ಕರ್ ಚಿಂತನೆಗಳು ಇವರ ಅಧ್ಯಯನದಲ್ಲಿ ಮಿಳಿತವಾಗುವುದನ್ನು ಗಮನಿಸಬಹುದು.

ಎಲ್. ಹನುಮಂತಯ್ಯ ಅವರು ಸರಳ ಮತ್ತು ಮಾರ್ಗದರ್ಶಿ ಎಳೆಯಾಗಿ ಬರೆದ ನಾಟಕ 'ಅಂಬೇಡ್ಕರ್'. ಇಪ್ಪತ್ತಕ್ಕೂ ಹೆಚ್ಚು ಪಾತ್ರಗಳು ಒಂದು ಪಾತ್ರದ ಸುತ್ತ ಹೆಣೆಯುವ ಬೌದ್ಧಿಕ ಕಸರತ್ತು ಈ ನಾಟಕದಲ್ಲಿದೆ. ಒಟ್ಟು ಎರಡು ಅಂಕಗಳಲ್ಲಿ, ಹದಿಮೂರು ದೃಶ್ಯಗಳನ್ನು ತರಲಾಗಿದೆ. ಪೂನಾ ಒಪ್ಪಂದವನ್ನೇ ಕೇಂದ್ರವಾಗಿಟ್ಟು ರಚಿಸಿದ ನಾಟಕವಿದು. ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವ ಕಾಲದಿಂದ ಪ್ರಾರಂಭವಾಗಿ ಎಪ್ಪತ್ತೈದು ವರ್ಷಗಳ ಹಿಂದಿನ ಗಾಂಧಿ ಮತ್ತು ಅಂಬೇಡ್ಕರ್ ದ್ವಂದ್ವಗಳಲ್ಲಿ ಮನುಷ್ಯನ ಅಂತಃಸತ್ವದ ಸೂಕ್ಷ್ಮಪ್ರಶ್ನೆಗಳು ಈ ನಾಟಕದಲ್ಲಿ ಬಂದು ಹೋಗುತ್ತವೆ. ಅಂಬೇಡ್ಕರ್ ಕೇಂದ್ರ ವ್ಯಕ್ತಿಯಾದ ಕಾರಣ, ಗಾಂಧಿಯವರು ತಮ್ಮ ಚಿಂತನೆಗಳಲ್ಲಿ ಹೇಗೆ ಅಂಬೇಡ್ಕರ್‌ಗಿಂತ ಭಿನ್ನವಾಗಿದ್ದರು. ಅಂಬೇಡ್ಕರ್ ಅವರು ಹುಟ್ಟಿನಿಂದ ಅನುಭವಿಸಿ, ಆ ನೋವಿನ ಜನರಿಗಾಗಿಯೇ ಹಪಾಹಪಿಸಿದ ದುಃಖದ ಕಣ್ಣೀರು ಇಲ್ಲಿ ಒಂದು ಎಳೆಯಾಗಿ ಬರುತ್ತದೆ. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದೆಂದರೆ, ಭಾಷಣ, ಬರಹದಂತಲ್ಲ, ಅವರನ್ನು ತಮ್ಮವರನ್ನಾಗಿಯೇ ಕಾಣುವುದು. ಕಾನೂನುಗೊಳಿಸುವ ಮೂಲಕ ಎಲ್ಲಾ ಕಡೆಯೂ ಸಮಾನತೆ ತರುವುದು ಅಂಬೇಡ್ಕರ್ ಅವರ ಮುಖ್ಯ ಉದ್ದೇಶವಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬರುವ ಹೋರಾಟಕ್ಕಿಂತಲೂ, ಇಲ್ಲಿನ ಜನಗಳಿಗೆ ಸಮಾನತೆ ಬೇಕಿತ್ತು. ಈ ಎಲ್ಲಾ ವಿಚಾರಗಳನ್ನು ಈ ನಾಟಕದಲ್ಲಿ ಹಂತ ಹಂತವಾಗಿ ಪರಿಚಯಿಸಿದ್ದಾರೆ. ಇಲ್ಲಿ ಚಿಂತನೆಗಳಿವೆ. ಅವು ಶ್ರೀಸಾಮಾನ್ಯನಿಗೂ ತಲುಪುವಂತಿವೆ.

ಮಹಾದ್ ಕರೆಯ ನೀರು ಮುಟ್ಟುವ ಹಕ್ಕಿನ ಹೋರಾಟದಿಂದ ಪ್ರಾರಂಭವಾಗಿ ರಾಜಕೀಯವಾಗಿ ಅಸ್ಪೃಶ್ಯರಿಗೆ ಪ್ರತ್ಯೇಕ ಹಕ್ಕನ್ನು ಜಾರಿಗೊಳಿಸುವ ವಿಧೇಯಕದವರೆಗೂ ಹೋರಾಟಗಳ ಚಿತ್ರಣವಿಲ್ಲಿದೆ. ಮೂರು ದೃಶ್ಯಗಳು ಒಂದು ದೃಶ್ಯ ಎದುರು ಬಂದು ಹೋಗುವ ಸರಳ ಚಿತ್ರಣ ಇಲ್ಲಿದೆ. ಎರಡನೇ ದುಂಡು ಮೇಜಿನ ಪರಿಷತ್ತಿಗೆ ಹೋಗುವ ಮುನ್ನ ಗಾಂಧೀಯನ್ನು ಭೇಟಿಯಾಗುವುದು, ದುಂಡು ಮೇಜಿನ ಪರಿಷತ್ತಿನ ಸಭೆ, ನಂತರ ಯರವಾಡ ಜೈಲಿನಲ್ಲಿ ಉಪವಾಸ ಕುಳಿತ ಗಾಂಧಿಯನ್ನು ಭೇಟಿಯಾಗುವ ಚಿತ್ರಣ ಇಲ್ಲಿದೆ.

ಈ ನಾಟಕದ ಪ್ರವೇಶಕ್ಕೂ ಮುನ್ನ ದೇವನೂರು ಮಹಾದೇವ ಅವರು ಗಾಂಧಿ ಮತ್ತು ಅಂಬೇಡ್ಕರ್ ಕುರಿತು ಎದೆಗೆ ಬಿದ್ದ ಅಕ್ಷರ ಕೃತಿಯಲ್ಲಿ ನೀಡಿರುವ ಚಿಂತನೆಗಳನ್ನು ಗಮನಿಸೋಣ.

"ಹಿಂದೂ ಧರ್ಮ ಎಂಬ ಮನೆಯೊಳಗೆ ಭಿನ್ನಭಾವ ಜಾತಿ ತಾರತಮ್ಯದ ಕಂಬಗಳನ್ನು ಒಳಗೊಳಗೇ ಕೊಯ್ಯುವವನಂತೆ ಗಾಂಧಿ ಕಾಣಿಸುತ್ತಾರೆ. ಅದೇ ಅಂಬೇಡ್ಕರ್ ಹೊರಗಿನಿಂದ ಆ ಅಸಮಾನತೆಯ ಮನೆಗೆ ಕಲ್ಲೆಸೆಯುವವನಂತೆ ಕಾಣಿಸುತ್ತಾರೆ. ಈ ಪ್ರಕ್ರಿಯೆಯಿಂದಾಗಿ ಅಂಬೇಡ್ಕರ್ ಎಸೆದ ಕಲ್ಲು ಒಳಗಿದ್ದ ಗಾಂಧಿಗೂ ಬಿದ್ದು ರಕ್ತ ಚೆಲ್ಲಿರಬಹುದು. ಇದನ್ನು ಕಂಡು ಹೊರಲೋಕವು ಗಾಂಧಿಗೂ, ಅಂಬೇಡ್ಕರ್‌ಗೂ ಮಾರಾಮಾರಿ ಹೊಡೆದಾಟ ಎನ್ನಬಹುದು. ಆದರೆ ಇಬ್ಬರೂ ಮಾಡುತ್ತಿದ್ದುದು ಹೆಚ್ಚೂಕಮ್ಮಿ ಒಂದೇ ಕೆಲಸವನ್ನಲ್ಲವೇ?"1 ಸಮಾನತೆಯ ಚಳುವಳಿಯನ್ನು ದೇವನೂರು ಗುರ್ತಿಸುವುದಕ್ಕೂ, ಇದೇ ಸಮಕಾಲೀನರಾದ ಎಲ್. ಹನುಮಂತಯ್ಯ ಅವರು ಗುರ್ತಿಸುವುದಕ್ಕೂ ವಿಭಿನ್ನ ನೆಲೆಗಳಿವೆ. ಹಿಂದೂ ಧರ್ಮವನ್ನು ವಿಭಾಗಿಸದೆ, ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವುದು ಮುಖ್ಯವಾಗಿ ಗಾಂಧಿ ಚಿಂತನೆಯಾಗಿತ್ತು. ಆದರೆ, ಹಿಂದೂ ಧರ್ಮವೆಂದು ಕರೆಯುವಾಗ ಅದರಲ್ಲಿ ಮನುಷ್ಯರನ್ನು ಮನುಷ್ಯರಂತೆಯೇ ಕಾಣದೆ, ಅಸ್ಪೃಶ್ಯತೆಯನ್ನು ಶೋಷಣೆಯಂತೆ ಆಚರಿಸುವವರಿಗೆ

ಧರ್ಮದ ಕರುಣೆಯೇ ಇಲ್ಲವೆಂದು ಅಂಬೇಡ್ಕರ್ ಚಿಂತನೆಗಳು ಪ್ರತ್ಯೇಕತೆಯನ್ನೇ ಬಿಡುಗಡೆಯಾಗಿ ಬಯಸುತ್ತಿದ್ದವು. ಈ ಹಿನ್ನಲೆಯಲ್ಲಿ ನಾಟಕವನ್ನು ಕುರಿತು ಚರ್ಚಿಸಬಹುದು.

ಮೊದಲ ದೃಶ್ಯ ಮತ್ತು ಹದಿಮೂರನೇ ದೃಶ್ಯಗಳು ಏಕ ಚಿಂತನೆಯಲ್ಲಿ ಅಂಬೇಡ್ಕರ್ ಅವರ ಕೊನೆಯ ನೋವುಗಳನ್ನು ನೆನೆಯುತ್ತವೆ. ಆ ನೋವಿನ ಕಾರಣಗಳಾಗಿ ಉಳಿದ ನಡುವಿನ ದೃಶ್ಯಗಳು ಬಂದು ಹೋಗುತ್ತವೆ. ಅಂದು ಜೊತೆಯಲ್ಲಿದ್ದ ರಮಾಬಾಯಿ, ಶಿವತಾರಕರ್ ಈಗ ಜೊತೆಯಲ್ಲಿ ಇಲ್ಲ. ಆ ಜಾಗದಲ್ಲಿ ಸವಿತಾ, ರತ್ತು ಕಾಣುತ್ತಿದ್ದಾರೆ. ಹೋರಾಟದ ಕಿಚ್ಚಿನಲ್ಲಿ ಬೆಂಕಿಯ ಉಂಡೆಯಂತೆ ಚಲಿಸುತ್ತಿದ್ದ ಅಂಬೇಡ್ಕರ್ ಈಗ ಮೌನವಾಗಿ, ಹಲವು ನೋವುಗಳನ್ನು ತುಂಬಿಕೊಂಡು ನಿತ್ರಾಣರಾಗಿದ್ದಾರೆ. ಆರೋಗ್ಯ ಹದಗೆಟ್ಟಿದೆ. 'ಹಿಂದೂವಾಗಿ ಹುಟ್ಟಿದ್ದೇನೆ. ಆದರೆ ಹಿಂದೂವಾಗಿ ಸಾಯಲಾರೆ' ಎಂಬ ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿ ಬೌದ್ಧದರ್ಮದ ಕಡೆಗೆ ಮುಖಮಾಡಿದ್ದಾರೆ. ಈ ಅಂಬೇಡ್ಕರ್ ಬದುಕಿನ ವಿಚಾರಗಳ ನಡುವೆ ಎಲ್. ಹನುಮಂತಯ್ಯ ಅವರು ಧ್ವನಿಸುವ ಚಿಂತನೆಗಳು ವಿಶಿಷ್ಟವಾದವು.

"ನನ್ನ ಪತ್ಯೇತರ ಓದು ಪ್ರಾರಂಭವಾದದ್ದು ಅಂಬೇಡ್ಕರ್ ವಿಚಾರಗಳ ಪುಸ್ತಕಗಳಿಂದ, ಪ್ರಪಂಚವನ್ನು ಅಂಬೇಡ್ಕರ್ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾಗಲೇ ಮಾರ್ಕ್ಸ್‌ವಾದ, ಲೋಹಿಯಾವಾದದ ಪಾಠಗಳು ಕೂಡ ನನ್ನ ಸಹಾಯಕ್ಕೆ ಬಂದವು. 'ಅಂಬೇಡ್ಕರ್ ಮತ್ತು ಸಮಕಾಲೀನತೆ' ಎಂಬ ಪುಸ್ತಕ ಬರೆದ ಮೇಲೆ ಇಂತಹ ನಾಟಕವೊಂದನ್ನು ಬರೆಯಬಹುದೆಂದು ನಾನಂದುಕೊಂಡಿರಲಿಲ್ಲ. ಯಾವುದೋ ಘಳಿಗೆಯಲ್ಲಿ ಸಿಜಿಕೆ ಎಂಬ ನಿರ್ದೇಶಕರ ಸಾಮೀಪ್ಯ ಹೆಚ್ಚಾದಂತೆಲ್ಲಾ ಅಂಬೇಡ್ಕರ್ ಕುರಿತ ನಾಟಕ ಮಾಡುವ ಆಶೆಯನ್ನು ವ್ಯಕ್ತಪಡಿಸಿದರು. ಅದನ್ನು ನಾನು ಬರೆಯಬೇಕೆಂದು ತಾಕೀತು ಮಾಡಿದರು. ನನ್ನ ಸಹಜ ಸೋಮಾರಿತನದಿಂದಲೇ ಬರವಣಿಗೆ ಮುಂದಕ್ಕೆ ಹೋಗುತ್ತಲೇ ಇದ್ದಾಗ ತೊಂಬತ್ತೆಂಟರ ಜೂನ್ ತಿಂಗಳ ಗಡಿರೇಖೆಯನ್ನು ಎಳೆದು, ಆಗಸ್ಟ್ ಹದಿನೆಂಟರಂದು ನಾಟಕ ಪ್ರದರ್ಶನವನ್ನು ಪ್ರಕಟಿಸಿಬಿಟ್ಟರು. ಅನೇಕ ವರ್ಷಗಳಿಂದ ನಾನು ಓದಿದ ಅಂಬೇಡ್ಕರ್ ಹಾಗೂ ಸಿಜಿಕೆ ಕೇಳಿದ ಅಂಬೇಡ್ಕರ್ ಬೇರೆಯಾಗೇ ಇದ್ದರು. ಬರೆಯಲು ಕೂತಾಗಲೇ ನಾನು ನಾಟಕಕ್ಕಾಗಿ ಬೇಕಾದ ಸಂತ ಅಂಬೇಡ್ಕರ್‌ನನ್ನು ಹುಡುಕಲು ಪ್ರಾರಂಭಿಸಿದ್ದು. ಅವರು ನನಗೆ ಎಷ್ಟು ದಕ್ಕಿದರೋ ಗೊತ್ತಿಲ್ಲ. ನಿರ್ದೇಶಕರ ಮನಸ್ಸಿನೊಳಗೆ ಆಗಲೇ ಹೊಕ್ಕು ಕೂತಿದ್ದರು, ನನ್ನನ್ನು ಕೆಣಕುತ್ತಿದ್ದರು. ಈಗಿನ ಚರಿತ್ರೆಯಲ್ಲಿ ಅಂಬೇಡ್ಕರ್ ವರ್ತಮಾನದ ವ್ಯಕ್ತಿತ್ವವಾಗಿದ್ದಾರೆ."2 ಉದ್ದೇಶಿತವಾಗಿ ರಚನೆಯಾದ ನಾಟಕದಲ್ಲಿ ಕೆಲವು ನಿರ್ದಿಷ್ಟ ಉದ್ದೇಶಗಳಿರುತ್ತವೆ. ನಿರ್ದೇಶಕನ ಕನಸಾದರಂತೂ ಬರವಣಿಗೆಯನ್ನೂ ಮೀರಿ, ತೆರೆಯ ಮೇಲೆ ಅಭಿನಯವು ಕಾಣುತ್ತದೆ. ಈ ನಾಟಕಕ್ಕೂ ಅಂತಹ ಶಕ್ತಿ ಇದೆ. ಪೂನಾ ಒಪ್ಪಂದವನ್ನೇ ಕೇಂದ್ರವಾಗಿಟ್ಟು, ನೋಡುಗರು ಅಂಬೇಡ್ಕರ್ ಅನ್ನು ಇವ ನಮ್ಮವ, ಇವ ನಮ್ಮವ ಎನ್ನುವ ಕನಸಂತೆ ರಚನೆ ಮತ್ತು ನಿರ್ದೇಶನದಲ್ಲಿ ಪ್ರಯತ್ನಿಸಿದ್ದಾರೆ. ಶತಮಾನಗಳಿಂದಲೂ ತಮ್ಮ ಮೇಲಿನ ಶೋಷಣೆಯನ್ನು ಒಪ್ಪಿಕೊಂಡು ಸಾಗಿದ ಬಗೆಯನ್ನು ದೃಶ್ಯ ಎರಡರಲ್ಲಿ ಅಜ್ಜನ ಮೂಲಕ ತರುತ್ತಲೇ ಹುಡುಗನ ಮೂಲಕ ಬದಲಾವಣೆಯನ್ನು ಮನವರಿಕೆ ಮಾಡಿಕೊಡುತ್ತಿದ್ದಾರೆ. 'ನಮ್ಮ ಬಾವಿ ನೀರು ನಾವು ಮಾತ್ರ ಮುಟ್ಟೋ ನೀರು. ಈಗ ನೀನೆ ಹೇಳು, ಯಾರ ನೀರು ಪವಿತ್ರ ಅಂತ?' ಈ ಪ್ರಶ್ನೆಗೆ ಉತ್ತರವಾಗಿ 'ನೀರು ಪವಿತ್ರ ಅಂತ ಅಲ್ಲಯ್ಯ ನೀರು ಮುಟ್ಟೋಕೆ ಹೋಗೋದು. ಊರ ಜನರೆಲ್ಲಾ ಹೇಗೆ ಭೇದಭಾವ ಇಲ್ಲದೆ ಮುಟ್ತಾರೋ, ಅಂತ ಹಕ್ಕು ನಮಗೂ ಬೇಕು ಅಂತ ನೀರು ಮುಟ್ತಾ ಇರೋದು' ಕೊನೆಯಲ್ಲಿ ಅಂಬೇಡ್ಕರ್ ಮಹಾದ್ ಕೆರೆಯ ನೀರನ್ನು ಮುಟ್ಟುವ ಮೂಲಕ ನೀರು, ಗಾಳಿ ಮತ್ತು ಬದುಕು ನಮ್ಮ ಹಕ್ಕು ಎಂದು ಪ್ರತಿಪಾದಿಸುವ ಸಂಕೇತವನ್ನು ನಾಟಕದಲ್ಲಿ ತರುತ್ತಾರೆ. ಪ್ರಾರಂಭದಿಂದಲೂ ಕೊನೆಯ ತನಕ ಯಾವುದೇ ಕಾರ್ಯ, ಕ್ರಿಯೆ, ಬದಲಾವಣೆ 'ನಿರಂತರ ಚಲನೆ'ಯ ಸೂಚಕವಾಗಿ ಸಾಗುತ್ತದೆ. ದೃಶ್ಯ ಮೂರರಲ್ಲಿ ಮುಂಬಯಿನ ಮಣಿ ಭವನದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರ ಭೇಟಿಯನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಗಾಂಧಿ, ಕಾಂಗ್ರೇಸ್ ಮತ್ತು ಅದರ ಪ್ರಾಮಾಣಿಕತೆಯ ಚರ್ಚೆ ಅಡಗಿದೆ. ಅಂಬೇಡ್ಕರ್ ಅವರು ಗಾಂಧಿಯನ್ನು ಒಪ್ಪಿದರೂ ಕಾಂಗ್ರೇಸ್‌ನ ಪ್ರಮಾಣಿಕತೆಯನ್ನು ಒಪ್ಪುತ್ತಿಲ್ಲ. ಅಸ್ಪೃಶ್ಯರ ಏಳಿಗೆಯು ಈ ಕಾಂಗ್ರೆಸ್ನ ಕಾರ್ಯಗಳಲ್ಲಿ ಇಲ್ಲ ಎಂಬುದು ಅವರ ಧೋರಣೆಯಾಗಿತ್ತು. ಕಾಂಗ್ರೆಸ್ ಮಾಡಬಹುದಾದ ಕಾರ್ಯಗಳನ್ನು ಅತ್ಯಂತ ಸರಳವಾಗಿ ಸೂಚಿಸುತ್ತಾರೆ. "ಪ್ರಾಮಾಣಿಕವಾಗಿದ್ದರೆ ಕಾಂಗ್ರೆಸ್ – ಪ್ರವೇಶಕ್ಕೆ ಖಾದಿ ತೊಡುವುದು ಕಡ್ಡಾಯವಾಗಿರುವಂತೆ ಅಸ್ಪಶ್ಯರನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳುವುದನ್ನೂ ಕಡ್ಡಾಯ ಮಾಡಬೇಕಿತ್ತು.

ISSN: 2320-9941
ಪ್ರತಿಸ್ಪಂದ । Prathispandha

ವಾರಕ್ಕೊಮ್ಮೆ ಅಸ್ಪೃಶ್ಯ ವಿದ್ಯಾರ್ಥಿ ಜೊತೆ ಊಟ ಮಾಡುವುದು ಕಡ್ಡಾಯ ಮಾಡಬೇಕಿತ್ತು. ಇದರಿಂದ ನಿಮ್ಮ ಜಿಲ್ಲಾ ಅಧ್ಯಕ್ಷರಂಥ ನಾಯಕರು, ನಮ್ಮ ದೇವಸ್ಥಾನ ಪ್ರವೇಶ ಚಳುವಳಿ ವಿರೋಧಿಸುವುದನ್ನು ತಪ್ಪಿಸಬಹುದಾಗಿತ್ತು."3 ಎಂಬ ನೇರವಾದ ಮಾತುಗಳು ಬೆಂಕಿಯ ಉಂಡೆಯಂತೆ ನುಗ್ಗುತ್ತವೆ. ಈ ನೋವುಗಳನ್ನು ಅನುಭವಿಸುತ್ತಿರುವ ಪ್ರೇಕ್ಷಕರು ಈ ಮಾತುಗಳನ್ನು ಕೇಳುವುದಾದರೆ, ದೇಹವೇ ರೋಮಾಂಚನಗೊಳ್ಳುತ್ತಾ ಸತ್ಯದ ನುಡಿಗಳಿಗೆ ಇವನು ನಮ್ಮ ನಾಯಕ ಎನಿಸುವಂತಿವೆ.

ದೃಶ್ಯ ನಾಲ್ಕು ಮತ್ತು ಐದರಲ್ಲಿ ಸಮಾಜದ ಇತರ ಹೋರಾಟಗಾರರನ್ನು ಒಟ್ಟಿಗೆ ತರುತ್ತದೆ. ಮುತ್ತಯ್ಯ, ಪೆರಿಯಾರ್, ಪಳನಿಚಾಮಿ ಇವರೆಲ್ಲರೂ ಅಂಬೇಡ್ಕರ್ ಚಿಂತನೆಗಳ, ಹೋರಾಟದ ಹಾದಿಯನ್ನು ಕುರಿತು ಚರ್ಚಿಸುತ್ತಾರೆ. ಹಿಂದೂ ಧರ್ಮದ ಮೂಢನಂಬಿಕೆಗಳನ್ನು ಗಹನವಾಗಿಯೇ ಚರ್ಚಿಸುತ್ತಾರೆ. ಶ್ರೀಸಾಮಾನ್ಯರು ಹೇಗೆ ಈ ಮೂಢನಂಬಿಕೆಗಳಿಗೆ ಬಲಿಯಾಗುತ್ತಿದ್ದಾರೆ. ಇದರಿಂದ ಸಮಾಜವು ಅಸ್ಪೃಶ್ಯತೆಯ ಭೂತಕ್ಕೆ ಸಿಲುಕಿರುವ ಕಾರಣಗಳನ್ನು ಚರ್ಚಿಸುತ್ತಾ, ಅಂಬೇಡ್ಕರ್ ಅವರನ್ನು ಮಾತನಾಡಿಸಲು ಅವರ ಮನೆಗೆ ಹೋಗುತ್ತಾರೆ. ಇಲ್ಲಿ ಅಂಬೇಡ್ಕರ್ ಅವರೊಂದಿಗಿನ ಚರ್ಚೆಯು ಸಮಾನ ಮನಸ್ಸುಗಳ ಹಿತಚಿಂತನೆ ನಡೆಯುತ್ತದೆ. ಎರಡನೇ ದುಂಡು ಮೇಜಿನ ಸಮ್ಮೇಳನಕ್ಕೆ ಹೋಗುವ ಕಾರಣದಲ್ಲಿ ಈ ಎಲ್ಲಾ ಚಳುವಳಿಕಾರರು ತಮ್ಮ ಚಿಂತನೆಗಳನ್ನು ಚರ್ಚಿಸುತ್ತಿದ್ದಾರೆ. ಇದೆಲ್ಲಾ ಮೌಖಿಕವಾಗಿ ನಡೆದಿದೆ ಎನ್ನಿಸುವುದಕ್ಕಿಂತ ಅವರ ಚರಿತ್ರೆಯ ಚಳುವಳಿಗಳನ್ನು ಒಂದು ಕಡೆ ತಂದಿದ್ದಾರೆ. ಅಂಬೇಡ್ಕರ್ ಹೇಳುವ ವಿಚಾರವು ಅವರ ಮುಖ್ಯ ಗುರಿಯೂ ಆಗಿ ಕೊನೆಯ ತನಕ ಬೆಂಬಲಿಸುತ್ತದೆ. "ನಿಮ್ಮ ಚಳುವಳಿಯನ್ನು ರಾಜಕೀಯವಾಗಿ ಕಟ್ಟುವುದೇ ಸರಿಯಾದದ್ದು. ಅಧಿಕಾರವನ್ನು ಹಿಡಿಯುವ ಮೂಲಕ ಇವರಿಗೆ ಬುದ್ಧಿ ಕಲಿಸಬಹುದು. ಅವರ ಹುಚ್ಚಾಟಗಳಿಗೆ ಸ್ವಲ್ಪವಾದರೂ ತಡೆಯೊಡ್ಡಬಹುದು"4 ಎಂಬ ನಿರ್ಣಯವು ಧೀಮಂತಿಕೆಯಿಂದ ಪ್ರಾರಂಭವಾದರೂ ಈ ವಿಚಾರದಲ್ಲಿ ಅಂಬೇಡ್ಕರ್ ಸೋಲುತ್ತಾರೆ. ಇದರಿಂದ ಬದುಕಿನುದ್ದಕ್ಕೂ ನೋಯುತ್ತಾರೆ.

ಆರನೇ ದೃಶ್ಯವು ನಾಟಕದಲ್ಲಿ ಒಂದು ರೀತಿಯ ಪ್ರತ್ಯೇಕ ಭಾಗ. ಸನಾತನ ಮನುಷ್ಯರ ಸಣ್ಣತನದ ಅನಾವರಣ ಇಲ್ಲಿದ್ದರೂ, ಇಂದಿಗೂ ಅದುವರೆಯುತ್ತಿರುವುದನ್ನು ಚರ್ಚಿಸಬಹುದು. ಲಾಹೋರ್‌ನ ಜಾತ್‌ಪತ್ ತೊಡಕ್ ಮಂಡಲದವರು ಏರ್ಪಡಿಸಿದ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಅಂಬೇಡ್ಕರ್ ಅವರನ್ನು ಆಹ್ವಾನಿಸಿರುತ್ತಾರೆ. ಪೂರ್ವಭಾವಿಯಾಗಿ ಕಾರ್ಯಕ್ರಮದಲ್ಲಿ ಮಾತನಾಡುವ ಭಾಷಣದ ಪ್ರತಿಯನ್ನು ಪಡೆಯುತ್ತಾರೆ. ಅಂಬೇಡ್ಕರ್ ಚಿಂತನೆಗಳು ನಮ್ಮ ಧರ್ಮದ ವಿರುದ್ಧ ಇವೆ ಎಂಬುದಕ್ಕೆ ಹಲವು ಕಾರಣಗಳನ್ನು ತೆಗೆದು ವಿರೋಧಿಸುತ್ತಾರೆ. ಅಂಬೇಡ್ಕರ್ ಅವರನ್ನು ಆಯ್ಕೆಮಾಡಿ ಒಪ್ಪಿಸಿದ ಭಗವಾನ್ ನಂತಹ ಸನಾತನಿಗಳೊಳಗಿನ ವಿಚಾರವಂತನು ಹಲವು ವಿಧಗಳಲ್ಲಿ ಹೇಳಿದರೂ, ಕೇಳುವ ಸ್ಥಿತಿಯಲ್ಲಿ ಯಾರೂ ಇರುವುದಿಲ್ಲ. ಡಿ. ಆರ್. ಭಂಡಾರ್‌ಕರ್ ಅವರ 'ಹಿಂದೂ ಜನತೆಯಲ್ಲಿ ಪರಕೀಯ ಅಂಶಗಳು' ಎಂಬ ಲೇಖನದ ಭಾಗವನ್ನು ಭಾಷಣದಲ್ಲಿ ಸೂಚಿಸಿದ್ದಾರೆ. ಅದನ್ನು ಪರಿಶೀಲಿಸೋಣವೆಂದರೂ ಕೇಳದೆ, ಸಮ್ಮೇಳನವನ್ನು ರದ್ದುಮಾಡುತ್ತಾರೆ. ಇತ್ತೀಚಿಗೆ ಇಂತಹ ಒಂದೆ–ರಡು ಪ್ರಕರಣಗಳು ನಮ್ಮಲ್ಲಿ ಕಂಡುಬಂದಿವೆ. ವಿಚಾರವಂತರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ, ಪತ್ರಿಕೆ ಹಂಚಿ, ಕೊನೆಯಲ್ಲಿ ರದ್ದುಮಾಡಿ, ಮತ್ತೊಮ್ಮೆ ಇನ್ನೊಬ್ಬರನ್ನು ಆಹ್ವಾನಿಸಿದ ಬಗೆಯು ವಿಶ್ವವಿದ್ಯಾಲಯದ ಮಟ್ಟದಲ್ಲಿ ನಡೆಯಿತು. ಮಂತ್ರಿಗಳಿಗೆ ತರಬೇತಿ ನೀಡಲು, ಶಿಕ್ಷಣತಜ್ಞರನ್ನು ಆಯ್ಕೆಮಾಡಿ ನಂತರ ರದ್ದುಮಾಡಿ, ಕೊನೆಗೆ ಸಿನಿಮಾ ನಟರನ್ನು ಆಹ್ವಾನಿಸಲಾಯಿತು. ಇಂತಹ ಪ್ರಕರಣಗಳನ್ನು ಗಮನಿಸಿದಾಗ ಇಂದು ಪ್ರತಿಯೊಬ್ಬರೂ ಸಮಸ್ಯೆಗಳನ್ನು ಎದುರಿಸುವುದಕ್ಕಿಂತ, ತಪ್ಪಿಸಿಕೊಳ್ಳುವ ಸುಲಭೋಪಾಯಗಳಿಗೆ ಜಾರುತ್ತಿದ್ದಾರೆ. ಇಂದು ಧರ್ಮ, ಜಾತಿಯ ಮಾತುಗಳು ಕಠಿಣವಾಗಿವೆ.

ಏಳನೇ ದೃಶ್ಯವು ಮಾರ್ಕ್ಸ್‌ವಾದದಲ್ಲಿ ನಂಬಿಕೆ ಇಟ್ಟ ಕಮ್ಯುನಿಸ್ಟರು ಸಮಾಜದ ಸಮತೆಗಾಗಿ ಹಂಬಲಿಸಿದವರು. ಆದರೆ ರಷ್ಯಾದಂತಹ ಉದಾಹರಣೆಗಳೇ ಭಾರತಕ್ಕೂ ಕೂಡ ಹೊಂದಿಕೆಯಾಗಿಲ್ಲ. ಅಲ್ಲಿಯೂ ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದೀರಿ ಎಂಬ ಚಿಂತನೆಯ ಕಿಡಿಗಳನ್ನು ಅಂಬೇಡ್ಕರ್ ಅವರು ಡಾಂಗೆ ಎಂಬವರ ವಿರುದ್ಧ ಕಾರುತ್ತಾರೆ. ಈ ದೃಶ್ಯದಲ್ಲಿ ಡಾಂಗೆ ಮತ್ತು ಅಂಬೇಡ್ಕರ್ ಅವರ ಮುಖಾಮುಖಿ ನೇರವಾಗಿ ಚರ್ಚಿಸಲ್ಪಟ್ಟಿದೆ. ಅಂಬೇಡ್ಕರ್ ಅವರು ತಿಳಿಯದೆ ಮಾತಾಡುತ್ತಿದ್ದಾರೆ ಎಂಬ ವಾದವನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ನಿಜವಾದ

ಸಮಾಜವಾದವೆಂದರೆ ಜನರನ್ನು ಮೌಢ್ಯಕ್ಕೆ ತಳ್ಳಿರುವ ಧರ್ಮ, ಶಾಸ್ತ್ರ, ಗ್ರಂಥಗಳನ್ನು ನಾಶಗೊಳಿಸಬೇಕು ಎಂಬ ಸಲಹೆ ನೀಡುತ್ತಾರೆ. ಇಲ್ಲಿ ಈ ಹಿಂದೆ ಅಂಬೇಡ್ಕರ್ ಮನುಸ್ಮೃತಿ ಗ್ರಂಥವನ್ನು ಸುಡುವ ಮೂಲಕ ಮಾಡಿದ ಕ್ರಾಂತಿಯ ಎಚ್ಚರದ ಹೆಜ್ಜೆಗಳನ್ನು ನೆನಪಿಸುತ್ತಾರೆ.

ಉಳಿದ ದೃಶ್ಯಗಳು 'ಪೂನಾ ಒಪ್ಪಂದ'ವನ್ನು ಪರಿಚಯಿಸುತ್ತವೆ. ಸಾಮಾನ್ಯರಿಗೂ ಸರಳವಾಗಿ ಅರ್ಥೈಸುತ್ತಾ, ಗಾಂಧಿ ಎಂಬ ಭೂಷಣದ ಪರದೆಯನ್ನು ಕಳಚುತ್ತಾರೆ. ಎಲ್. ಹನುಮಂತಯ್ಯನವರೇ ಹೇಳುವಂತೆ "ಮೋಹನದಾಸ ಕರಮಚಂದ ಗಾಂಧಿಯನ್ನು ಮಹಾತ್ಮ ಗಾಂಧೀಜಿಯನ್ನಾಗಿ ಮಾಡಿದ ಹಿಂದೂ ಸಮಾಜದಲ್ಲಿ ಮಹಾತ್ಮನನ್ನೂ, ಹಿಂದೂ ಧರ್ಮವನ್ನೂ ಏಕಕಾಲದಲ್ಲಿ ವಿರೋಧಿಸಿದವರು ಡಾ. ಬಿ.ಆರ್. ಅಂಬೇಡ್ಕರ್."5 ಇಂತಹ ಗಾಂಧಿಯ ನಡುವೆ ಅಂಬೇಡ್ಕರ್ ಅವರು ಹಲವು ವಿಚಾರಗಳಿಗೆ ಸಮನಾದ ಹಾಗೂ ವಿರುದ್ಧವಾದ ಹೆಜ್ಜೆಗಳನ್ನಿಡಬೇಕಾಯಿತು. ದುರಂತವೆಂದರೆ, ಈ ಭಾರತವು ಗಾಂಧಿಗೆ ನೀಡಿದಷ್ಟು ಗೌರವವನ್ನು ಅಂಬೇಡ್ಕರ್ ಗೆ ನೀಡಲಿಲ್ಲ. ಕನಿಷ್ಠ ಅಂಬೇಡ್ಕರ್ ಅವರ ವಿಚಾರಗಳಿಗೆ ಸರಿಯಾದ ಗೌರವವನ್ನು ನೀಡಬೇಕಿದೆ.

ಈ ಪೂನಾ ಒಪ್ಪಂದದ ವಿಚಾರಗಳನ್ನು ಎಲ್. ಹನುಮಂತಯ್ಯನವರೇ ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ. ಈ ವಿಚಾರಗಳ ಸರಳ ಸ್ವರೂಪವೇ ನಾಟಕದ ಉಳಿದ ದೃಶ್ಯಗಳು. ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಂಬೇಡ್ಕರ್ ಅವರ ಬಹುಮುಖ್ಯ ಬೇಡಿಕೆಯಾದ 'ಪ್ರತ್ಯೇಕ ಚುನಾವಣಾ ಕ್ಷೇತ್ರ'ವನ್ನು ಗಾಂಧಿಯವರು ವಿರೋಧಿಸುತ್ತಾರೆ. ಅಷ್ಟೇ ಅಲ್ಲದೆ, ಭಾರತಕ್ಕೆ ಬಂದ ನಂತರ ಯರವಾಡ ಜೈಲಿನಲ್ಲಿ ಗಾಂಧಿ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಾರೆ. ಈ ಉಪವಾಸ ಅದೆಷ್ಟು ಭೀಕರ ಸ್ವರೂಪವನ್ನು ತಳೆಯಿತೆಂದರೆ, ಅಂದಿನ ಸ್ವಾತಂತ್ರ್ಯ ಹೋರಾಟದಲ್ಲಿದ್ದ ರಾಜಾಜಿ, ಮಾಳವೀಯ, ನೆಹರು ಕೊನೆಗೆ ಅಂಬೇಡ್ಕರ್ ಅವರ ಪತ್ನಿ ರಮಾಬಾಯಿ ಕೂಡ (ಅಂಬೇಡ್ಕರ್ ಅವರಿಗೆ ಏನಾದರೂ ಅಪಾಯವಾದಿತೆಂದು), ದೇವದಾಸ್ ಎಲ್ಲರೂ ಅಂಬೇಡ್ಕರ್ ಅವರನ್ನು ಬೇಡಿಕೊಳ್ಳುತ್ತಾರೆ. ಗಾಂಧಿಯು ನೀರು ಕುಡಿಯುತ್ತಾ ಉಪವಾಸ ಮುಂದುವರೆಸಿದರೂ, ಆರೋಗ್ಯ ಹದಗೆಟ್ಟು ಪ್ರಾಣವನ್ನು ಉಳಿಸಲೇ ಬೇಕಾದ ಅನಿವಾರ್ಯತೆಯನ್ನು ವೈದ್ಯರು ಸೂಚಿಸುತ್ತಾರೆ. ಪ್ರತ್ಯೇಕ ಚುನಾವಣಾ ಸವಲತ್ತು ಕೈಬಿಡಲೇಬೇಕು ಎಂಬ ಹಠವು ಗಾಂಧಿಯದಾಗಿದೆ. ಅಂಬೇಡ್ಕರ್ ಅವರು ನಾನು ಇದುವರೆಗೂ ಅಸ್ಪೃಶ್ಯರಿಗಾಗಿ ಹೋರಾಡಿದ ರಾಜಕೀಯ ಫಲವದು ಕೈ ಬಿಡಲಾರೆ ಎಂಬ ಸ್ವಾಭಿಮಾನವಿರುತ್ತದೆ. ಎಲ್ಲರ ಕೋರಿಕೆಯ ಮೇರೆಗೆ ಅದಕ್ಕೂ ಒಪ್ಪಿ, ತನ್ನ ಇದುವರೆಗಿನ ಹೋರಾಟವನ್ನು ತ್ಯಾಗಮಾಡುತ್ತಾರೆ. ಇದಕ್ಕೆ ಪರ್ಯಾಯವಾಗಿ ಅಸೆಂಬ್ಲಿಯಲ್ಲಿ 197ಸ್ಥಾನಗಳನ್ನು ಅಸ್ಪೃಶ್ಯ ವರ್ಗಗಳಿಗೆ ಮೀಸಲಿಡುವ ಒತ್ತಾಯವಿಡುತ್ತಾರೆ. ಇದಕ್ಕೂ ಗಾಂಧಿ ಒಪ್ಪುವುದಿಲ್ಲ. ಅಂತಿಮವಾಗಿ 148ಸ್ಥಾನಗಳು ಪ್ರಾಂತೀಯವಾಗಿ, ಕೇಂದ್ರೀಯ ಅಸೆಂಬ್ಲಿಯಲ್ಲಿ ಶೇ.10ರಷ್ಟು ಬಿಡುವಂತೆ ಒಪ್ಪಿಸುತ್ತಾರೆ. ನಾಟಕದಲ್ಲಿ ಈ ಭಾಗವನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡು ಹೋಗಿ ಗಾಂಧಿ ಖುಷಿಯಿಂದ ಇದಕ್ಕೆ ನನ್ನ ಒಪ್ಪಿಗೆ ಇದೆ ಎಂದು ಇನ್ನು ನಿಮ್ಮ ಕೆಲಸಗಳನ್ನು ಮುಂದುವರೆಸಬಹುದು ಥ್ಯಾಂಕ್ಯು ನಾನಿನ್ನು ಬರುತ್ತೇನೆ, ಕ್ಯಾರಿ ಆನ್, ಕ್ಯಾರಿ ಆನ್ ಎನ್ನುವ ಪ್ರಸಂಗವಂತೂ ಗಂಭೀರತೆಯನ್ನು ಕಳೆದುಕೊಂಡಿದೆ. ದೃಶ್ಯದಲ್ಲಿ ತರುವಾಗ ಸ್ವಲ್ಪ ಬದಲಿಸಿಕೊಂಡರೆ ನಾಟಕದ ಸ್ವರೂಪ ಅರ್ಥಪೂರ್ಣವಾಗುತ್ತದೆ.

ದೃಶ್ಯ ಹನ್ನೆರಡು ನೆಹರು ಮತ್ತು ಅಂಬೇಡ್ಕರ್ ನಡುವಿನ ಸ್ವಾತಂತ್ರ್ಯೋತ್ತರ ಭಾರತದ ಚಿತ್ರಣವು ಇಲ್ಲಿದೆ. ಕೊನೆಯ ದಿನಗಳಲ್ಲೂ ಅಂಬೇಡ್ಕರ್ ಕೊರಗಿದ್ದು ಈ ಎರಡು ವಿಷಯಗಳಾದ ಅಸ್ಪೃಶ್ಯರಿಗೆ ಸವಲತ್ತು ಮತ್ತು ಸ್ತ್ರೀಯರಿಗೆ ವಿಮೋಚನೆ. ಸಂವಿಧಾನದ ಕರಡುಪ್ರತಿ ಪೂರ್ಣಗೊಳಿಸಿ, ಹಿಂದೂ ಕೋಡ್ ಬಿಲ್ ಅನ್ನು ಸಿದ್ಧಗೊಳಿಸಿ ನೆಹರು ಅವರಿಗೆ ನೀಡುತ್ತಾರೆ. ಕ್ಯಾಬಿನೆಟ್ ನಲ್ಲಿ ಮಂಡಿಸಿ ಆದಷ್ಟು ಬೇಗ ಒಪ್ಪಿಗೆ ಪಡೆಯಿರಿ ಇದು ನನ್ನ ಅಪೇಕ್ಷೆ ಎನ್ನುತ್ತಾರೆ. ನೆಹರೂ ಈ ಸಂದರ್ಭದಲ್ಲಿ ಗಾಂಧೀ ಚಿಂತನೆಗಳನ್ನು, ಅಂಬೇಡ್ಕರ್ ಚಿಂತನೆಗಳನ್ನು ಸಮವಾಗಿ ಸ್ವೀಕರಿಸಿ, ಇಬ್ಬರಿಗೂ ಒಳ್ಳೆಯವರಾಗಲು ಪ್ರಯತ್ನಿಸಿದರು. ಆದರೆ ಈ ಮಸೂದೆಯು ಒಪ್ಪಿತವಾಗದ ಕಾರಣ, ಅಂಬೇಡ್ಕರ್ ನಿರ್ವಹಿಸುತ್ತಿದ್ದ ಕಾನೂನು ಮಂತ್ರಿ ಪದವಿಗೆ ರಾಜಿನಾಮೆ ಸಲ್ಲಿಸುತ್ತಾರೆ. ತನ್ನ ಇದುವರೆಗಿನ ಕನಸುಗಳು ಸರಿಯಾಗಿ ಸಾಕಾರಗೊಳ್ಳಲಿಲ್ಲವೆಂಬ ತೀವ್ರ ದುಃಖದಲ್ಲಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಆದರೆ ಅವರ ಕೊನೆಯ ಆಸೆಯಾದ 'ನಾನು ಹಿಂದುವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯುವುದಿಲ್ಲವೆಂಬ ನಿರ್ಧಾರದಿಂದ ಮತಾಂತರದ ನಿರ್ಧಾರ ಕೈಗೊಳ್ಳುತ್ತಾರೆ. ಈ ಚಿಂತನೆಯಲ್ಲಿಯೇ ನಾಟಕ ಪ್ರಾರಂಭವಾಗಿ, ಇದೇ ಚಿಂತನೆಯಲ್ಲಿ ಮುಕ್ತಾಯವಾಗುತ್ತದೆ.

ISSN: 2320-9941
ಪ್ರತಿಸ್ಪಂದ । Prathispandha

“ಬುದ್ಧ ನಮ್ಮ ಪೂರ್ವಿಕ. ನನ್ನ ಜನರಿಗೆ ಬುದ್ಧನಲ್ಲಿ ಮಾತ್ರ ವಿಮೋಚನೆ ಅನ್ನಿಸುತ್ತದೆ. ನನ್ನ ಆರೋಗ್ಯ ನನ್ನೊಂದಿಗೆ ಇನ್ನು ಸ್ವಲ್ಪ ದಿನ ಸಹಕರಿಸಿದರೆ, ಇಡೀ ದೇಶವನ್ನು ಬುದ್ಧನಾಡನ್ನಾಗಿ ಮಾಡುತ್ತೇನೆ.”6 ಎಂಬ ತೀರ್ಮಾನವು ವಿಶೇಷವಾಗಿದೆ. ಇದೇ ಅಧ್ಯಾಯದಲ್ಲಿ ತಾವು ಯಾರ ಉದ್ಧಾರಕ್ಕಾಗಿ ಬದುಕನ್ನೇ ಸವೆಸಿದರೋ ಅವರ ಬದುಕುಗಳ ವೈಫಲ್ಯಕ್ಕೆ ಕೆಲವು ಕಿವಿಮಾತುಗಳನ್ನು ನಾಟಕದಲ್ಲಿ ತಂದಿದ್ದಾರೆ. ಇದು ಪ್ರತಿಯೊಬ್ಬ ಮನುಷ್ಯನೂ ತನ್ನೊಳಗನ್ನು ಕಂಡು ಸರಿಮಾಡಿಕೊಳ್ಳಬೇಕಾದ ಹಾದಿಯನ್ನು ಸೂಚಿಸುತ್ತದೆ. ಮಹತ್ತನ್ನು ಗೆಲ್ಲಲು ತಾನು ತಳೆಯಬೇಕಾದ ಸ್ಪಷ್ಟ ನಿರ್ಧಾರಗಳನ್ನು ಕೂಡ ತಿಳಿಸುತ್ತದೆ. ಇಂದಿನ ಎಲ್ಲಾ ಶೋಷಿತರೂ ತಾವು ಪಡೆದ ಹೋರಾಟ ಫಲದಮೃತವನ್ನು ತನ್ನಂತೆ ನೋಯುತ್ತಿರುವವರಿಗೆ ಉಣಬಡಿಸಲೇ ಬೇಕಾದ ಎಚ್ಚರಗಳನ್ನು ಇಲ್ಲಿ ತಿಳಿಸಲಾಗಿದೆ. ತನ್ನ ಹೋರಾಟವನ್ನು ಯಾರೂ ಮುಂದುವರೆಸುವ ಧೀಮಂತ ಕಾರ್ಯಕ್ಕೆ ಬರಲಿಲ್ಲವಲ್ಲ ಎಂಬ ವಾಸ್ತವ ಮತ್ತು ವರ್ತಮಾನಗಳ ಭವಿಷ್ಯವನ್ನು ನೋವಿನಂತೆ ಅಂಬೇಡ್ಕರ್ ಅನುಭವಿಸುತ್ತಾರೆ.

“ನನ್ನ ಜನರಿಗೆ ಏನೂ ಮಾಡಲಾಗಲಿಲ್ಲವಲ್ಲಾ ಎಂಬ ದುಃಖ ನನ್ನನ್ನು ನಿರಂತರವಾಗಿ ಕಾಡುತ್ತಿದೆ. ನಾನು ಈವರೆಗೆ ಹೋರಾಡಿ ಪಡೆದ ಸವಲತ್ತುಗಳನ್ನ ನನ್ನ ವಿದ್ಯಾವಂತ ಜನ ಪಡೆದುಕೊಂಡಿದ್ದಾರೆ. ಆದರೆ ಅವರು, ತಮ್ಮ ಅವಿದ್ಯಾವಂತ ಅಣ್ಣ–ತಮ್ಮಂದಿರನ್ನು ನೋಡದೆ ಸ್ವಲ್ಪವೂ ಕರುಣೆ ಇಲ್ಲದೆ ನಿರ್ದಯಿಗಳಂತೆ ವರ್ತಿಸುತ್ತಿದ್ದಾರೆ. ತಮ್ಮ ವಿನಾಶದ ದಾರಿಯಲ್ಲಿ ಹೆಜ್ಜೆಗಳನ್ನೂ ಇಡುತ್ತಿದ್ದಾರೆ, ಸವಲತ್ತು ಬೇಕು. ಬೆನ್ನ ಹಿಂದೆ ಬಂದೋರ ಯೋಗಕ್ಷೇಮ ಬೇಡ, ಛೇ, ನಾಚಿಕೆಯಾಗಬೇಕು.”7 ಇದು ಅಂಬೇಡ್ಕರ್ ಅವರ ಕೊನೆಯ ದಿನಗಳ ಕೊರಗಿನಲ್ಲಿ ಒಂದಾಯಿತು. ಯಾವ ಜನರಿಗೆ ಜೀವನವನ್ನು ಮುಡಿಪಿಟ್ಟರೋ, ಅದು ಬರೀ ಅಂಬೇಡ್ಕರ್ ಜವಾಬ್ದಾರಿ ಮಾತ್ರ ಆಗಿರಲಿಲ್ಲ. ಅದು ಆ ಜನಾಂಗದಲ್ಲಿ ಶಿಕ್ಷಣ ಕಲಿತ ಎಲ್ಲರ ಹೊಣೆಯೂ ಆಗಿತ್ತು. ಇಂತಹ ಕನಸನ್ನೂ ಕೂಡ ನಾಟಕದಲ್ಲಿ ಮೂಡಿಸಲಾಗಿದೆ.

“ನನ್ನ ಜನರಲ್ಲೇ ಯಾರಾದ್ರೂ ಈ ನನ್ನ ಹೋರಾಟ ಕೈಗೆತ್ತಿಕೊಳ್ಳುತ್ತಾರೆ ಎಂದಿದ್ದೆ. ಆದರೆ ಅವರು ಅಧಿಕಾರಕ್ಕಾಗಿ ಸ್ವಾರ್ಥಿಗಳಾಗಿದ್ದಾರೆ. ಸವರ್ಣಿಯರ ಮೋಸಕ್ಕೆ ಬಲಿಯಾಗಿದ್ದಾರೆ. ಜಾತಿಯ ಕೆಸರಿನಲ್ಲಿ ಬಿದ್ದು ಒದ್ದಾಡ್ತಾ ಇರೋ, ಈ ಮೇಲ್ಜಾತಿಯ ಜನ, ಅಸ್ಪಶ್ಯರನ್ನ ಅಂತಃಕರಣ ತುಂಬಿ ನೋಡಿಕೋತಾರೆ ಅಂತ ನನಗನ್ನಿಸುತ್ತಿಲ್ಲ. ಈ ಧರ್ಮ ಜನರ ಬದುಕಿಗೆ ಒಂದು ದಾರಿಯಾಗಬೇಕಿತ್ತು. ಆದರೆ ಅದು ಮಾರಿಯಾಗಿದೆ. ಇಂತಹ ದೇಶದಲ್ಲಿ ಹುಟ್ಟೋದೇ ಪಾಪ ಅನ್ನಿಸಿದೆ.”8 ರಾಜಕೀಯ ಮೀಸಲಾತಿಗಾಗಿ ಅಂಬೇಡ್ಕರ್ ಅವರ ಏಕಾಂತ ಹೋರಾಟವು ಅವರಿಗೆ ಹಲವು ನೋವುಗಳನ್ನು ಒಟ್ಟಿಗೆ ಮೂಡಿಸಿತು. ತಮ್ಮ ಹೋರಾಟವು ಪ್ರತಿಯೊಬ್ಬನಲ್ಲೂ ಸೃಷ್ಟಿಯಾಗಬೇಕಾದ ಕನಸು ಅಂಬೇಡ್ಕರ್ ಅವರಲ್ಲಿ ಸದಾ ಕಾಡುತ್ತಿತ್ತು. ಅವರ ಬರೆಹಗಳನ್ನು ಅಧ್ಯಯನಮಾಡಿದರೆ ಈ ಚಿಂತನೆಗಳು ತಿಳಿಯುತ್ತವೆ. ಆದರೆ ಇಲ್ಲಿನ ಅಂಶಗಳು ಅಂಬೇಡ್ಕರ್ ಅವರ ಕಾಲದ, ಮನಸ್ಸಿನ ಚಿಂತನೆಗಳು ಎಂದು ಸೀಮಿತಗೊಳಿಸದೆ, ನಾಟಕದ ರಚನಾಕಾರರಾದ ಎಲ್. ಹನುಮಂತಯ್ಯ ಅವರು ತಮ್ಮ ಸಮಕಾಲೀನ ಸಮಸ್ಯೆಗಳನ್ನು ಗ್ರಹಿಸಿ ಅಳವಡಿಸಿಕೊಂಡಿದ್ದಾರೆ. ದಲಿತ ಹೋರಾಟಗಳು, ಸಂಘಟನೆಗಳು ಪರಸ್ಪರ ವಿರೋಧಗಳನ್ನು ತಳೆದು ಇಂದು ತಮ್ಮ ಧೀಶಕ್ತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ಸೋಲುತ್ತಿರುವುದನ್ನು ಕೂಡ ಅಂಬೇಡ್ಕರ್ ಅವರ ದನಿಯಲ್ಲಿ ತಂದಿದ್ದಾರೆ.

ಅಂಬೇಡ್ಕರ್ ನಾಟಕವು ವ್ಯಕ್ತಿತ್ವ ನಿರ್ವಚನದ ಉದ್ದೇಶವಾಗಿ ಉಳಿಯದೆ, ಅಸ್ಪೃಶ್ಯರ ಬದುಕಿಗಾಗಿ ನಡೆದ ಹೋರಾಟ ಮತ್ತು ಕಾನೂನುಗಳ ಹಿಂದಿನ ಕತೆಯನ್ನು ವಿವರಿಸುತ್ತದೆ. ಪೂನಾದಂತಹ ಒಂದು ಘಟನೆಯು ಬಿಟ್ಟುಕೊಡುವ ಎಲ್ಲಾ ವಿಚಾರಗಳು ಇಲ್ಲಿ ಅಭಿವ್ಯಕ್ತಗೊಂಡಿವೆ. ಆದರೆ, ನಾಟಕದಲ್ಲಿ ಯಾವುದೇ ದೋಷಗಳಿಲ್ಲವೆ ಎಂದು ಯೋಚಿಸಿದಾಗ ಅಂತಹ ಸನ್ನಿವೇಶಕ್ಕೆ ನಾಟಕಕಾರರೇ ಪೀಠಿಕೆಯಲ್ಲಿ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಸಿ.ಜಿ.ಕೆಯಂತಹ ನಿರ್ದೇಶಕರ ಸೂಚನೆಯಲ್ಲಿ ಹೊಸದೊಂದು ವ್ಯಕ್ತಿತ್ವವನ್ನು ಕಡಿಮೆ ಅವಧಿಯಲ್ಲಿ ಸೃಜಿಸಿದ ಕಾರ್ಯವಿದು. ಇಲ್ಲಿ ಪಾತ್ರಗಳು ಮಾತನಾಡುವಾಗ ಸಹಜತೆಯನ್ನು ಮರೆಯುತ್ತವೆ. ಒಮ್ಮೊಮ್ಮೆ ನಾಟಕೀಯವಾಗಿ ಧ್ವನಿಸುತ್ತವೆ. ಆದರೆ ಪಠ್ಯ ಓದುವಿನ ಸ್ವರೂಪ, ಪ್ರದರ್ಶನದಲ್ಲಿ ಹಾಗೇ ಮೂಡದ ಕಾರಣ ಈ ಎಲ್ಲವನ್ನೂ ವೇದಿಕೆಯಲ್ಲಿ ಸಮರ್ಥಗೊಳಿಸಿಕೊಳ್ಳಬಹುದು. ಒಟ್ಟಾರೆಯಾಗಿ ಕನ್ನಡಕ್ಕೆ ದೊರಕಿದ ಅರ್ಥಪೂರ್ಣ ನಾಟಕವಿದು. ಒಂದೊಂದು ಹೋರಾಟವು ಜನಗಳ ಮುಂದೆ ಇಷ್ಟೆಲ್ಲಾ ಧ್ವನಿಸುವಾಗ, ಅಂಬೇಡ್ಕರ್ ಚರಿತ್ರೆಯು ಅದೆಷ್ಟು ಸುದೀರ್ಘ ಹಾಗೂ ಮಹತ್ವ ಎನಿಸುತ್ತದೆ. ಹಿಂದಿ ಭಾಷೆಯಲ್ಲಿ ಸೃಷ್ಟಿಯಾಗಿ ಕನ್ನಡಕ್ಕೆ ಭಾಷಾಂತರಗೊಂಡ

ದೂರದರ್ಶನದ ಧಾರವಾಹಿ ಸ್ವರೂಪದ 'ಮಹಾನಾಯಕ' ಕಥೆಯು ಇಂತಹ ಚರಿತ್ರೆಯನ್ನು ನೋಡುಗ ಮನಸ್ಸಿಗೆ ಹಲವು ಅರಿವುಗಳನ್ನು ಮೂಡಿಸಿದ್ದು ಇಂತಹ ಪ್ರಯೋಗಗಳ ಶ್ರಮವೇ ಅನಿಸುತ್ತದೆ. ಹೀಗೆ ರಂಗಭೂಮಿಯಲ್ಲೂ ಅಂಬೇಡ್ಕರ್ ಸಂಚಲನವುಂಟುಮಾಡಿದ ಬಗೆಯನ್ನು ನಾವು ಇನ್ನೂ ಉಳಿದ ಘಟನೆಗಳ ಮೂಲಕ ಹೊಸ ರೂಪಗಳಲ್ಲಿ ಸೃಷ್ಟಿಸಬಹುದು. ಈ ನಾಟಕವು ಹೊಸ ಪ್ರಯೋಗಗಳಿಗೆ ಮಾರ್ಗದರ್ಶನವಾಗಿ ನಿಲ್ಲುತ್ತದೆ.

■■

---

**ಆಕರ ಕೃತಿಗಳು:**

1. ಎದೆಗೆ ಬಿದ್ದ ಅಕ್ಷರ., ದೇವನೂರು ಮಹಾದೇವ., 2012,2013., ಅಭಿನವ, ಬೆಂಗಳೂರು, ಪುಟ ಸಂಖ್ಯೆ 296
2. ಡಾ. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ–1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರಥಮ ಮುದ್ರಣಕ್ಕೆ ಮೊದಲಮಾತು ಪುಟ ಸಂಖ್ಯೆ 319
3. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 335
4. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 347
5. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 2., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 125
6. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 386
7. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 387
8. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ 388

---

**ಟಿಪ್ಪಣಿ : ಪೂನಾ ಒಪ್ಪಂದ (ವಿಕಿಪೀಡಿಯಾ)**

ಸ್ವಾತಂತ್ರ್ಯ ಪೂರ್ವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಾಗು ಮಹಾತ್ಮ ಗಾಂಧಿಯವರ ನಡುವೆ ಬ್ರಿಟಿಷ್ ಸರ್ಕಾರದ ಚುನಾವಣಾ ಕ್ಷೇತ್ರಗಳ ಹಿಂದುಳಿದ ಪಂಗಡಗಳ ಮೀಸಲಾತಿಯ ಕುರಿತು ಉಂಟಾದ ಒಪ್ಪಂದವೇ ಪೂನಾ ಒಪ್ಪಂದ. ಹಿಂದುಳಿದ ಪಂಗಡಗಳಿಗೆ ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಾತಿ ಒದಗಿಸುವಂತೆ ಕೋರಿ ಗಾಂಧೀಜಿ ಪುಣೆಯ ಜೈಲಿನಲ್ಲಿಯೇ ಉಪವಾಸ ನಡೆಸುತ್ತಿದ್ದರು. ಆಗಿನ ಬ್ರಿಟಿಷ್ ಪ್ರಧಾನ ಮಂತ್ರಿ ರಾಮ್ಸಯ್ ಮೆಕ್ಡೊನಾಲ್ಡ್ ಹಿಂದುಳಿದ ಪಂಗಡಗಳಿಗೆಂದೇ ಮೀಸಲಾಗಿರುವ ಚುನಾವಣಾ ಕ್ಷೇತ್ರಗಳ ಕೋರಿಕೆಗೆ ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದರು. ಇದರ ವಿರುದ್ಧ ಗಾಂಧೀಜಿ ಪುಣೆಯ ಯರವಾಡದ ಜೈಲಿನಲ್ಲಿ ಉಪವಾಸ ನಡೆಸಿದ್ದರು. ಉಪವಾಸ ಅಂತ್ಯಗೊಳಿಸಲೋಸುಗ 1932ರ ಸೆಪ್ಟೆಂಬರ್ 24ರಂದು ಡಾ.ಬಿ.ಆರ್.ಅಂಬೇಡ್ಕರ್, ಮದನ ಮೋಹನ ಮಾಳವೀಯ ಹಾಗು ಇನ್ನಿತರ ಆಗಿನ ಪ್ರಭಾವಿ ಭಾರತೀಯ ನಾಯಕರು ಪೂನಾ ಒಪ್ಪಂದಕ್ಕೆ ಸಹಿ ಮಾಡುತ್ತಾರೆ. ಒಪ್ಪಂದದ ಮುಖೇನ ಬ್ರಿಟಿಷ್ ಸರ್ಕಾರ 48 ಚುನಾವಾಣಾ ಕ್ಷೇತ್ರಗಳಿಗೆ ಮೀಸಲಾತಿ ನೀಡಲು ಒಪ್ಪುತ್ತದೆ.

ISSN: 2320-9941
ಪ್ರತಿಸ್ಪಂದ I Prathispandha

**ಒಪ್ಪಂದದ ಕರಾರುಗಳು**

ಹಿಂದುಳಿದ ವರ್ಗಗಳಿಗೆಂದೇ ಮೀಸಲಾದ ಚುನಾವಣಾ ಕ್ಷೇತ್ರಗಳನ್ನು ವಿಂಗಡಿಸಲಾಯಿತು. ಬ್ರಿಟಿಷ್ ಅಧಿಪತ್ಯವಿದ್ದ ಪ್ರತಿಯೊಂದು ಸಂಸ್ಥಾನದಲ್ಲೂ ಒಟ್ಟು148 ಸ್ಥಾನ ಮೀಸಲು ಕ್ಷೇತ್ರಗಳನ್ನು ಕೊಡ ಮಾಡಲಾಗಿತ್ತು.
ಆ ಕ್ಷೇತ್ರಗಳಿಗೆ ಚುನಾವಣೆ ನಡೆಸಲು ಅನುಸರಿಸಿದ ವಿಧಾನ, ಹಿಂದುಳಿದ ವರ್ಗದ ಎಲ್ಲ ಸದಸ್ಯರನ್ನು ಒಳಗೊಂಡ ಚುನಾವಣಾ ಕ್ಷೇತ್ರಕ್ಕೆ ಒಂದು ಎಲೆಕ್ಟೋರಲ್ ಕಾಲೇಜ್ ಅನ್ನು ನಿರ್ಣಯಿಸಲಾಗುತ್ತದೆ. ಆ ಎಲೆಕ್ಟೋರಲ್ ಕಾಲೇಜ್ ಹಿಂದುಳಿದ ವರ್ಗದ ನಾಲ್ಕು ಜನರನ್ನು ಮತಗಳ ಮೂಲಕ ಆರಿಸಲಾಗುತ್ತದೆ(ಪ್ರಾಥಮಿಕ ಚುನಾವಣೆ). ಅತೀ ಹೆಚ್ಚು ಮತಗಳನ್ನು ಪಡೆದ ನಾಲ್ಕು ವ್ಯಕ್ತಿಗಳನ್ನು ಸಾಮಾನ್ಯ ಚುನಾವಣೆಯಲ್ಲಿ ಅಭ್ಯರ್ಥಿಗಳೆಂದು ಘೋಷಿಸಲಾಗುತ್ತದೆ. ಬ್ರಿಟಿಷ್ ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಹಿಂದುಳಿದ ವರ್ಗಗಳಿಗೆಂದೇ 19% ಸ್ಥಾನಗಳನ್ನು ಮೀಸಲು ಕೊಡಲಾಯಿತು.
ಕೇಂದ್ರ ಶಾಸನ ಸಭೆ ಹಾಗು ಸ್ಥಳೀಯ ಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ನಡೆಯುವ ಪ್ರಾಥಮಿಕ ಚುನಾವಣೆಗಳ ವಾಯಿದೆ ಆರಂಭದ ಕೇವಲ ಹತ್ತು ವರ್ಷಗಳು ಮಾತ್ರವಾಗಿತ್ತು. ಅಂದರೆ ಪೂನಾ ಒಪ್ಪಂದದ ಮೊದಲ ಹತ್ತು ವರ್ಷ ಮಾತ್ರ ಈ ನಿಯಮ ಪಾಲಿಸಲು ಒಪ್ಪಿಗೆ ನೀಡಲಾಗಿತ್ತು.
ಕೇಂದ್ರ ಶಾಸನ ಸಭೆ ಹಾಗಿ ಸ್ಥಳೀಯ ಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಬ್ರಿಟಿಷ್ ಸರ್ಕಾರ ಕೊಡಮಾಡಿರುವ ಮೀಸಲಾತಿಯು ಜಾರಿಯಲ್ಲಿರುತ್ತದೆ. ಚುನಾವಣಾ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗದವರೊಂದಿಗೆ ಮಾತುಕತೆಯ ಮುಖಾಂತರ ಆ ನಿಯಮದಲ್ಲಿ ಸ್ವಪ್ರೇರಿತ ಸಡಿಲಿಕೆ ಮಾಡಿಕೊಳ್ಳಲು ಅವಕಾಶ ನೀಡುವುದು.
ಕೇಂದ್ರ ಹಾಗು ಸ್ಥಳೀಯ ಶಾಸನ ಸಭೆಗಳಲ್ಲಿ ಹಿಂದುಳಿದ ವರ್ಗವನ್ನು ಪ್ರತಿನಿಧಿಸುವ ಸದಸ್ಯರ ಪಾಲುದಾರಿಕೆಯು ಲೋಥಿಯನ್ ಸಮಿತಿ ವರದಿಯ ಪ್ರಕಾರವಿರುವಂತಹುದು.
ಹಿಂದುಳಿದ ವರ್ಗಗಳಿಂದ ಆಯ್ಕೆಯಾಗುವ ಸದಸ್ಯರುಗಳಲ್ಲಿ ಯಾವುದೇ ದೃಷ್ಟಿಯಿಂದಲೂ ಕುಂಠಿತ ಅಂಶಗಳು ಇರಬಾರದು. ಸಾರ್ವಜನಿಕ ಸೇವೆಗೆ ಅವರನ್ನು ನಿಯೋಜಿಸುವ ಮೊದಲು ಶೈಕ್ಷಣಿಕ ಅರ್ಹತೆಗಳನ್ನು ಯಥಾವತ್ತಾಗಿ ಪರಿಗಣಿಸುವುದು.
ಬ್ರಿಟಿಷ್ ಆಡಳಿತವಿರುವ ಎಲ್ಲ ಸಂಸ್ಥಾನಗಳಲ್ಲೂ ಹಿಂದುಳಿದ ವರ್ಗಗಳ ಶಿಕ್ಷಣಕ್ಕೆಂದೇ ಸಾಕಷ್ಟು ಹಣವನ್ನು ಮೀಸಲಿಡುವುದು.

**ಪರಾಮಾರ್ಶನ ಗ್ರಂಥಗಳು**

1. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 1., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
2. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ – 2., 2019., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
3. ಪೂನಾ ಒಪ್ಪಂದ (ವಿಕಿಪೀಡಿಯಾ)
4. ಎದೆಗೆ ಬಿದ್ದ ಅಕ್ಷರ., ದೇವನೂರು ಮಹಾದೇವ., 2012,2013., ಅಭಿನವ, ಬೆಂಗಳೂರು

# ಡಾ. ಸುಜಾತ ಅಕ್ಕಿರವರ ಶೈಕ್ಷಣಿಕ ಸಾಧನೆ : ಒಂದು ಸಮೀಕ್ಷೆ

● ಭವ್ಯ ಎಂ. ಎಸ್

ನವೋದಯ ಕಾಲಘಟ್ಟದ ಆರಂಭದಲ್ಲಿ ಮಹಿಳೆಯರ ಸಾಹಿತ್ಯವನ್ನು "ಅಡುಗೆ ಮನೆ ಸಾಹಿತ್ಯ" ಎಂದು ಆಡಿಕೊಳ್ಳುವ (ವ್ಯಂಗ್ಯ ಮಾಡುವ) ಪ್ರವೃತ್ತಿ ಇತ್ತು. 1970 ರಿಂದೀಚೆಗೆ ಕನ್ನಡ ಸಾಹಿತ್ಯದಲ್ಲಿ ಉಂಟಾದ ಹೊಸ ವೈಚಾರಿಕ ಬೆಳವಣಿಗೆಯಿಂದಾಗಿ ಕನ್ನಡದಲ್ಲಿ ಹೊಸ ಅನುಭವ ಲೋಕ ತೆರೆದುಕೊಳ್ಳಲಾರಂಭಿಸಿತು. ದಲಿತ ಬಂಡಾಯ ಚಳುವಳಿ, ಮಹಿಳಾ ಚಳುವಳಿ ಇದರ ಪ್ರತಿಫಲಗಳೇ ಆಗಿವೆ. ಧಮನಿತ ವರ್ಗದ ಪರವಾದ ದನಿ ಎತ್ತಿ ಹೋರಾಡಲು ಉದ್ದೇಶಿಸಿದ ದಲಿತಬಂಡಾಯ ಚಳುವಳಿ ಮಹಿಳಾ ಶೋಷಣೆಯ ವಿರುದ್ಧವೂ ದನಿ ಎತ್ತಿತ್ತು. ಮತ್ತು ಸ್ತ್ರೀ ಶಿಕ್ಷಣ ಸ್ವಾತಂತ್ರ್ಯದ ಪರವಾಗಿಯೂ ಜಾಗೃತಿ ಮೂಡಿಸಲು ಪ್ರಯತ್ನಿಸಿತು. ಈ ವೇಳೆಗೆ ಮಹಿಳಾ ಶಿಕ್ಷಣದಲ್ಲಿ ಸಾಕಷ್ಟು ಸುಧಾರಣೆ ಉಂಟಾಗಿ ಪೂರ್ವದ ಲೇಖಕಿಯರಿಗಿಂತ ವಿಭಿನ್ನವಾದ ಧ್ವನಿ ಮತ್ತು ವಿಭಿನ್ನವಾದ ಧಾಟಿಯಲ್ಲಿ ಮಹಿಳೆಯರು ಈ ಕಾಲದಲ್ಲಿ ಬರೆಯಲಾರಂಭಿಸಿದರು. ಮೊದಲು ಹೆಚ್ಚಾಗಿ ನಮ್ಮ ಮಹಿಳಾ ಲೇಖಕಿಯರ ಒಲವು ಕಥೆ, ಕಾದಂಬರಿಯ ರಚನೆಯ ಕಡೆಗೆ ಇದ್ದಿತು. 70ರ ದಶಕದಿಂದ ಈಚೆಗೆ ನಮ್ಮ ಲೇಖಕಿಯರು ಕಾವ್ಯ, ವಿಮರ್ಶೆ, ಸಂಶೋಧನೆ, ವೈಚಾರಿಕ ಬರಹ, ಆತ್ಮಕಥೆ – ಈ ಪ್ರಕಾರಗಳಲ್ಲಿಯೂ ಬರವಣಿಗೆಯನ್ನು ಆರಂಭಿಸಿ ಒಂದೊಂದಾಗಿ ಭರವಸೆಯ ಹೊಸ ಹೆಜ್ಜೆಗಳನ್ನು ಇಡಲಾರಂಭಿಸಿದರು. ಕನ್ನಡ ಸಾಹಿತ್ಯದ ಮುಖ್ಯ ವಾಹಿನಿಯಲ್ಲಿ ಮಹಿಳೆಯರು ಪುರುಷರ ಸಮಾನವಾಗಿ ಸೇರಿ ಮುನ್ನಡೆಯುತ್ತಾ ಬಂದರು. ಇದನ್ನು ಒಂದು ಚಾರಿತ್ರಿಕ ದಾಖಲೆಯ ಸಂದರ್ಭವೆಂದೇ ಹೇಳಬಹುದು.

ವೈದೇಹಿ, ವಿಜಯದಬ್ಬೆ, ಬಿ.ಟಿ.ಲಲಿತನಾಯಕ್, ಕಮಲ ಹಂಪನಾ, ಮುಕ್ತಾಯಕ್ಕ, ಶೈಲಜಾ ಉಡಚಣ, ಹೆಚ್.ಎಸ್. ಪಾರ್ವತಿ, ಸಾ.ರಾ. ಅಬೂಬಕ್ಕರ್, ಬಾನುಮುಸ್ತಾಕ್, ಲತಾ ರಾಜಶೇಖರ್, ಶ್ರೀಮತಿ

**ವಿಳಾಸ:** ಭವ್ಯ ಎಂ. ಎಸ್
ಸಂಶೋಧಕರು
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು.
Bhavyams645@gmail.com

ISSN: 2320-9941
ಪ್ರತಿಸ್ಪಂದ । Prathispandha

ಪೂರ್ಣಿಮ, ನಾವಡ, ಪ್ರೀತಿ ಸ್ರಿಮಂದರ ಕುಮಾರ್, ಡಾ॥ ಶಾಲಿನಿ, ಮಲ್ಲಿಕಾಗಂಟೆ, ಸಭಿಹಭೂಮಿ ಗೌಡ, ಮುಂತಾದವರು ಒಟ್ಟಾರೆ ಮಹಿಳಾ ಸಾಹಿತ್ಯದ ಎರಡನೇ ತಲೆಮಾರಾಗಿಯೂ, ಬಂಡಾಯ ಚಳುವಳಿ ನಂತರದ ಮೊದಲ ತಲೆಮಾರಾಗಿಯೂ ಕಾಣಿಸಿಕೊಳ್ಳುತ್ತಾರೆ. ಇವರ ಸಾಹಿತ್ಯ ನವೋದಯ ಸಂದರ್ಭದ ಮಹಿಳೆಯರ ಸಾಹಿತ್ಯಕ್ಕಿಂತ ವಿಭಿನ್ನ ಸ್ವರೂಪ ಮತ್ತು ಧೋರಣೆಯಿಂದ ಬೆಳೆದು ಬಂದಿದೆ. ಮತ್ತು ಮಹಿಳೆಯರದು ಅಡುಗೆ ಮನೆ ಸಾಹಿತ್ಯ ಎಂಬ ಪೂರ್ವದ–ಪೂರ್ವಾಗ್ರಹದ ಅಭಿಪ್ರಾಯಕ್ಕೆ ತಕ್ಕ ಉತ್ತರವಾಗಿದೆ. ಈ ತಲೆಮಾರಿನ ನಂತರದ ಲೇಖಕಿಯರು ಶಿಕ್ಷಣ, ಸಂಘಟನೆ, ಹೋರಾಟದಲ್ಲಿ ಮತ್ತು ಸ್ತ್ರೀವಾದಿ ಸಾಹಿತ್ಯ ನಿರ್ಮಾಣದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ನಡೆದರು. ಮಲ್ಲಿಕಾ ಗಂಟಿ, ದು.ಸರಸ್ವತಿ, ಹೇಮಾ ಪಟ್ಟಣ ಶೆಟ್ಟಿ, ಜಯಶ್ರೀ ಸಬರರ್, ಪ್ರತಿಭಾನಂದ ಕುಮಾರ ಮೊದಲಾದವರು ಈ ಗುಂಪಿಗೆ ಸೇರುತ್ತಾರೆ. ಸಂಶೋಧಕಿ, ಕವಯತ್ರಿ, ನಾಟಕಕಾರ್ತಿ, ಜನಪದ ತಜ್ಞೆ, ಡಾ. ಸುಜಾತ ಅಕ್ಕಿರವರು ಇದೇ ಗುಂಪಿಗೆ ಸೇರುತ್ತಾರೆ.

ಸುಜಾತ ಅಕ್ಕಿ ಅವರು ನಮ್ಮ ಗ್ರಾಮ ಭಾರತದ ಮಹಿಳಾ ಪ್ರತಿಭೆ. ಅವರದು ಹೋರಾಟದ ಬದುಕು. ಅಗರಿ ಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಳ್ಳಿ ಎಂಬ ಗ್ರಾಮೀಣ ಪ್ರದೇಶದಿಂದ ಬಂದ ಅವರು ಸ್ವಂತ ಪರಿಶ್ರಮದಿಂದ, ಅಧ್ಯಯನ ಆಸಕ್ತಿಯಿಂದ, ಬರಹದ ಸಾಧನೆಯಿಂದ ಬದುಕನ್ನು ಕಟ್ಟಿಕೊಂಡವರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ, ಮೈಸೂರು ವಿಶ್ವವಿದ್ಯಾನಿಯದಿಂದ ಜಾನಪದದಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ ಪದವಿಯನ್ನು ಹೀಗೆ ಮೂರು ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುದಲ್ಲದೆ "ಬಳ್ಳಾರಿ ಜಿಲ್ಲೆಯ ರಂಗನಟಿಯರು" ಎಂಬ ವಿಷಯ ಕುರಿತು ಸಂಶೋಧನೆ ನಡೆಸಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಪಿ.ಹೆಚ್.ಡಿ ಪದವಿ ಪಡೆದುಕೊಂಡಿದ್ದಾರೆ. ಇದು ಅವರ ಶೈಕ್ಷಣಿಕ ಅಭಿರುಚಿಯನ್ನು ಮತ್ತು ಸಾಧನೆಯನ್ನು ಸೂಚಿಸುತ್ತದೆ.

ಸುಜಾತ ಅಕ್ಕಿ ಅವರು ಬಹುಮುಖ ಪ್ರತಿಭೆಯ ಲೇಖಕಿ. ಕಾವ್ಯ, ನಾಟಕಗಳಂತಹ ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಸಾಧನೆ ಮಾಡಿದಂತೆ ಸಂಶೋಧನೆ, ಗ್ರಂಥ ಸಂಪಾದನೆ(ಜಾನಪದ)ಯಂತಹ ವಿದ್ವತ್ ವಲಯದಲ್ಲೂ ಅವರು ಸಾಕಷ್ಟು ಸಾಧನೆ ಮಾಡಿರುವುದು ಗಮನಾರ್ಹವಾದ ಸಂಗತಿ. ಇದುವರೆಗೆ ಅವರು ಮೂರು ಕವನ ಸಂಕಲನಗಳನ್ನು ಎಂಟು ನಾಟಕಗಳನ್ನು; ಜಾನಪದಕ್ಕೆ ಸಂಬಂಧಿಸಿದಂತೆ ನಾಲ್ಕು ಕೃತಿಗಳನ್ನು, ಸಂಶೋಧನೆಗೆ ಸಂಬಂಧಿಸಿದಂತೆ ಏಳು ಕೃತಿಗಳನ್ನು – ಹೀಗೆ ಇಪ್ಪತ್ತೆರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಐದಾರು ಕೃತಿಗಳು ಪ್ರಕಟಣೆಯ ಅಂತಿಮ ಹಂತದಲ್ಲಿದೆ. ಸುಜಾತ ಅಕ್ಕಿ ಅವರು ಆಧುನಿಕ ಕನ್ನಡ ರಂಗಭೂಮಿಗೆ ನೀಡಿದ ಕೊಡುಗೆ ಗಮನಾರ್ಹವೆಂದೇ ಹೇಳಬೇಕು. ಅವರು ರಚಿಸಿದ ಹತ್ತು ನಾಟಕಗಳು ರಂಗಭೂಮಿಯಲ್ಲಿ ಪ್ರದರ್ಶನ ಕಂಡಿವೆ. ಇವುಗಳಲ್ಲಿ ಚಾಮಚಲುವೆ ನಾಟಕ ವಿಶೇಷ ಕೀರ್ತಿಯನ್ನು, ಜನಪ್ರಿಯತೆಯನ್ನು ನಾಟಕಕಾರ್ತಿಗೆ ತಂದು ಕೊಟ್ಟಿದೆ. ಇವರ ಏಳು ನಾಟಕಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿರುವುದು ಗಮನಾರ್ಹವಾದ ಸಂಗತಿ.

ಸದಾ ಶೈಕ್ಷಣಿಕ, ಸಾಹಿತ್ಯಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಡಾ. ಸುಜಾತ ಅವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಲವು ವಿಚಾರ ಸಂಕೀರ್ಣಗಳಲ್ಲಿ, ಕವಿಗೋಷ್ಠಿಯಲ್ಲಿ ಭಾಗವಹಿಸಿ ಪ್ರಬಂಧ ಮಂಡನೆ, ಕವಿತಾ ವಾಚನ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಆಕಾಶವಾಣಿ, ದೂರದರ್ಶನದ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಗ್ರಾಮೀಣ ಜೀವನದ ಅನುಭವಗಳು, ಸ್ತ್ರೀ ಸಂವೇದನೆ, ಸಾಮಾಜಿಕ ಸಂಘರ್ಷ, ರಾಜಕೀಯ ವಿಡಂಬನೆ, ವೈಚಾರಿಕತೆ, ಸರ್ವ ಸಮಾನತೆ– ಇವು ಸುಜಾತ ಅಕ್ಕಿ ಅವರ ಸಾಹಿತ್ಯದಲ್ಲಿ ಕಂಡು ಬರುವ ಪ್ರಮುಖ ಆಶಯಗಳಾಗಿವೆ. ಬಳ್ಳಾರಿ ಪ್ರಾಂತ್ಯದ ಭಾಷೆಯ ಧ್ವನಿ, ಸೊಗಡು ಅವರ ಎಲ್ಲಾ ಬರವಣಿಗೆಗಳಲ್ಲಿ ಹರಡಿಕೊಂಡಿರುವುದನ್ನು ಕಾಣಬಹುದಾಗಿದೆ. ಜಾನಪದದಲ್ಲಿ ಅವರಿಗೆ ವಿಶೇಷವಾದ ಒಲವು ತಮ್ಮ ಸೃಜನಶೀಲ ಸಾಹಿತ್ಯದಲ್ಲಿ ತಾವು ಅಧ್ಯಯನ ಮಾಡಿದ ದೇಸಿ ಪರಂಪರೆಯನ್ನು ಅವರು ಅತ್ಯಂತ ಸೂಕ್ಷ್ಮವಾಗಿ ಅನ್ವಯಗೊಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಬುಡಕಟ್ಟು ಸಮುದಾಯ, ಗ್ರಾಮ ಸಮಾಜ, ಮಹಿಳಾ ಸಮಾಜ, ಜನಪದ ಮತ್ತು ಶಿಷ್ಟ ಸಾಹಿತ್ಯ, ರಂಗಭೂಮಿ, ಅರ್ಥಶಾಸ್ತ್ರ, ಮಹಿಳಾ ಚಳುವಳಿ ಮತ್ತು ಮಹಿಳಾ ಸಬಲೀಕರಣ, ವ್ಯಕ್ತಿತ್ವ ವಿಕಸನ, ಶಿಕ್ಷಣ–ಈ ಮುಂತಾದ ವಿಷಯಗಳನ್ನು ಕುರಿತು ಅವರು ಮೌಲ್ಯಯುತವಾದ ಸಾಕಷ್ಟು ಲೇಖನಗಳನ್ನು ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಮತ್ತು ವಿಶ್ವವಿದ್ಯಾನಿಲಯ, ರಾಜ್ಯಮಟ್ಟ ಹಾಗೂ ರಾಷ್ಟ್ರಮಟ್ಟದ ವಿಚಾರ ಸಂಕೀರ್ಣಗಳಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸುವ ಮೂಲಕ ನಾಡಿನ ಲೇಖಕರ, ಚಿಂತಕರ ಗಮನ ಸೆಳೆದಿದ್ದಾರೆ. ಮತ್ತು ರಾಜ್ಯ ಮಟ್ಟದ ಹಲವಾರು ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಅವರ ಈ ಸಾಧನೆಗಾಗಿ ಪ್ರಶಸ್ತಿ, ಬಹುಮಾನ ನೀಡಿ ಗೌರವಿಸಿವೆ. ಒಂದು

ಅರ್ಥದಲ್ಲಿ ಸುಜಾತ ಅಕ್ಕಿ ಅವರದು ವಯಸ್ಸಿಗೆ ಮೀರಿದ ಸಾಧನೆ ಎಂದೇ ಹೇಳಬಹುದು. ಅಥವಾ ಅವರು ತಾವು ಪಡೆದ ಶಿಕ್ಷಣವನ್ನು ಮತ್ತು ತಮಗೆ ದೊರೆತ ಸಮಯ–ಅವಕಾಶವನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ ಎಂದು ಹೇಳಬಹುದು.

ಹಾಲಿ ಡಾ.ಸುಜಾತ ಅಕ್ಕಿ ಅವರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಶೈಕ್ಷಣಿಕ ಬದುಕಿನ ಮಾರ್ಗ ಇನ್ನೂ ದೀರ್ಘವಾಗಿದೆ. ಈ ದೀರ್ಘಾವಧಿಯಲ್ಲಿ ಅವರು ಇನ್ನೂ ಹೆಚ್ಚು ಸಾಧನೆ ಧ್ವನಿಸುವಂತಿದೆ ಮತ್ತು ಅವರಿಂದ ಅದನ್ನು ನಿರೀಕ್ಷಿಸಬಹುದಾಗಿದೆ.

■■

ISSN: 2320-9941
ಪ್ರತಿಸ್ಪಂದ । Prathispandha

# ಆಹಾರ ಸಂಸ್ಕೃತಿಯಲ್ಲಿನ ಸ್ಪೃಶ್ಯರು ಮತ್ತು ಅಸ್ಪೃಶ್ಯರು: ವರ್ತಮಾನದ ತಲ್ಲಣಗಳು

● ಅರ್ಪಿತ. ಎಂ

ಭಾರತ ದೇಶದ ಅನನ್ಯತೆಯು ಅದರ ಶ್ರೀಮಂತ ಸಾಂಸ್ಕೃತಿಕ ವೈವಿದ್ಯತೆಯಲ್ಲಿ ಕಂಡುಬರುತ್ತದೆ. ಆಚಾರ–ವಿಚಾರ, ಉಡುಗೆ–ತೊಡುಗೆ, ಹಬ್ಬ–ಹರಿದಿನಗಳು, ಉಟೋಪಚಾರ ಹೀಗೆ ಹಲವು ಸಂಸ್ಕೃತಿಗಳ ಒಟ್ಟು ಗುಚ್ಚವಾಗಿರುವ ಭಾರತವು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದೆ. ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಭಾರತಕ್ಕೆ ಬಹುದೊಡ್ಡ ಸ್ಥಾನವಿದೆ. ಅದರಲ್ಲೂ ಆಹಾರ ಸಂಸ್ಕೃತಿಯಲ್ಲಿ ಭಾರತ ತನ್ನದೇ ಆದ ಭಿನ್ನತೆಯನ್ನು ಕಾಯ್ದುಕೊಂಡಿ–ದೆ. “ಹಸಿವು ಮನುಷ್ಯರ ಮೂಲ ಪ್ರವೃತ್ತಿಯಾಗಿದೆ. ಹಸಿವು ಎಂದು ಮನುಷ್ಯರು ಏನನ್ನು ಸೇವಿಸುತ್ತಾರೋ ಅದೇ ಆಹಾರವಾಗಿದೆ.”1 ಎಂಬ ದು. ಸರಸ್ವತಿ ಅವರ ಮಾತು ದೇಹದ ಇರುವಿಕೆಗೆ, ಬೆಳವಣಿಗೆಗೆ, ಬದುಕಲು ಆಹಾರವೇ ಆಧಾರ ಎಂಬುದನ್ನು ತಿಳಿಸುತ್ತದೆ. ಆಹಾರದ ಚಿಂತನೆ ಎಂದರೆ ಗಡಿಗಳನ್ನು ಮೀರಿದ ಮನುಕುಲದ ಶೋಧವೇ ಆಗುತ್ತದೆ.

“ನಾವು ನಿತ್ಯವೂ ಉಣ್ಣುವ ಆಹಾರದ ಹಿಂದೆ ಇತಿಹಾಸ, ಭೂಗೋಳ, ಸಸ್ಯಶಾಸ್ತ್ರ, ತಳಿಶಾಸ್ತ್ರ ಸಂಸ್ಕರಣಾ ತಂತ್ರ, ರಮ್ಯ ಕಲ್ಪನೆ ಇದೆ. ಜಗತ್ತಿನ ಹಲವಾರು ಮೂಲೆಗಳಿಂದ ಆಹಾರದ ಸಾಮಾಗ್ರಿಗಳು ನಮ್ಮಲ್ಲಿಗೆ ಬಂದಿವೆ. ಅವು ತಮ್ಮ ಪಯಾಣದಲ್ಲಿ.......ಖಂಡಗಳು, ಸಾಗರಗಳನ್ನು ದಾಟಿವೆ. ಹಾಗಾಗಿ ಯಾವ ದೇಶವು ಪ್ರತ್ಯೇಕವಾಗಿ ಒಂಟಿಯಾಗಿ ನಿಲ್ಲಲ್ಲು ಸಾಧ್ಯವೇ ಇಲ್ಲ”2. ಇದನ್ನು ಕನ್ನಡ ನಾಡಿನ ಖ್ಯಾತ ವಿಜ್ಞಾನಿ, ಆಹಾರ ತಜ್ಞ ಡಾ.ಕೆ.ಓ. ಅಚ್ಚಯ್ಯನವರ ‘ಋಜ಼ ಣಂಡಿಥಿ ಠಜಿ ಔಣಾಡಿ ಜಿಂಠಜ’ ಪುಸ್ತಕದ ಮುನ್ನುಡಿಯಲ್ಲಿ ಹೇಳಿದ್ದಾರೆ. ಹಸಿವು ನೀಗಿಸುವ, ಆರೋಗ್ಯ ಕಾಪಾಡುವ, ಬೆಳೆವಣಿಗೆಗೆ ಪೂರಕವಾಗಿರುವ ಆಹಾರವು ಮನುಷ್ಯರ ಸಾಂಸ್ಕೃತಿಕ

**ವಿಳಾಸ:** ಅರ್ಪಿತ. ಎಂ
ಉಪನ್ಯಾಸಕಿ, ಕೊಡಗು ವಿಶ್ವವಿದ್ಯಾಲಯ,
ಜ್ಞಾನಕಾವೇರಿ ಆವರಣ, ಚಿಕ್ಕ ಅಳುವಾರ, ಕೊಡಗು
ದೂರವಾಣಿ ಸಂಖ್ಯೆ : 8553411754

ಬದುಕಿನ ಅವಿಭಾಜ್ಯ ಅಂಗವಾಗಿದೆ. ಒಂದು ನಾಡಿನ ಆಹಾರ ಪದ್ಧತಿಯ ನಡುವೆ ಆ ನಾಡಿನ ಸಂಸ್ಕೃತಿಯು ಅಡಕವಾಗಿದೆ. ಆಹಾರ ಪದ್ಧತಿಯನ್ನು ಅರಿಯುವುದೆಂದರೆ ಒಂದು ನಾಡಿನ ಜನಾಂಗದ ಸಂಸ್ಕೃತಿಯನ್ನು ಅರಿತಂತೆ.

ಮಾನವನ ಜೀವಿಸಲು ಬೇಕಾಗಿರುವ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರ ಅತ್ಯವಶ್ಯಕವಾದದ್ದು. ಮನುಷ್ಯ ತನ್ನ ಜೀವಿತಾವದಿಯಲ್ಲಿ ಮಾಡುವ ಎಲ್ಲಾ ಕೆಲಸಗಳು ಆತನ ಅವಶ್ಯಕತೆಗಳ ಈಡೇರಿಕೆಗಾಗಿ ಇದನ್ನು ಪುರಂದರದಾಸರು "ಎಲ್ಲಾರೂ ಮಾಡೋದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"3 ಎಂದು ಹಾಡಿದ್ದಾರೆ. ಮನುಷ್ಯರೆಲ್ಲರೂ ಬದುಕಲು ಆಹಾರ ಅತ್ಯವಶ್ಯಕ. ಆದರೇ ಎಲ್ಲಾ ಮನುಷ್ಯರು ಒಂದೇ ರೀತಿಯ ಆಹಾರವನ್ನು ಸೇವಿಸುವುದಿಲ್ಲ. ಇದು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಭಿನ್ನತೆಯನ್ನು ಕಾಯ್ದುಕೊಂಡಿ-ದ್ದು. ಆಯಾಯ ಜನಾಂಗದ ಸಂಸ್ಕೃತಿಯ ಪ್ರತೀಕಕಗಳಾಗಿವೆ. ಮನುಷ್ಯ ಜೀವಿಸಲೆಂದು ಉಪಯೋಗಿಸುವ ಆಹಾರದಲ್ಲಿ 'ಸ್ಪೃಶ್ಯರು ಮತ್ತು ಅಸ್ಪೃಶ್ಯರೆ'ಂದು ವಿಭಾಗಿಸಿದ್ದಾರೆ. ಇಡೀ ಸಮಾಜವೇ ಆಹಾರ ಸಂಸ್ಕೃತಿಯಿಂದ ಇಬ್ಬಾಗವಾಗಿರುವುದು ವಿಪರ್ಯಾಸವೇ ಸರಿ. ಆಹಾರದ ಇಬ್ಬಾಗುವಿಕೆಯ ಹಿಂದಿರುವ ಚರಿತ್ರೆ ಹಾಗೂ ಆಹಾರ ಅಸ್ಪೃಶ್ಯವಾಗಿರಲು ಇಂದಿಗೂ ಚರ್ಚಾಸ್ಪದವೇ ಆಗಿವೆ. ಈ ಹಿನ್ನಲೆಯಲ್ಲಿ ಆಹಾರ ಸಂಸ್ಕೃತಿಯಲ್ಲಿನ 'ಸ್ಪೃಶ್ಯರು ಮತ್ತು ಅಸ್ಪೃಶ್ಯರು' ಕುರಿತು ಈ ಲೇಖನ ಸಿದ್ಧಗೊಂಡಿದೆ.

ಕ್ರಿ. ಶ 1910ವರೆಗಿನ ಭಾರತದ ಜನಗಣತಿಯಲ್ಲಿ ದೇಶದಲ್ಲಿನ ಜನರನ್ನು ಪ್ರಮುಖವಾಗಿ ಮೂರು ವಿಭಾಗಗಳಾಗಿಸಿದ್ದಾರೆ. ಹಿಂದೂ, ಮುಸ್ಲೀಂ ಮತ್ತು ಕ್ರೈಸ್ತರು. 1910ರ ನಂತರ ಹಿಂದೂಗಳನ್ನು ಮತ್ತೆ ಮೂರು ವಿಭಾಗಗಳಾಗಿ ವಿಂಗಡಿಸಿತ್ತು. ಹಿಂದೂಗಳು, ಬುಡಕಟ್ಟು ಜನಾಂಗ ಮತ್ತು ಅಸ್ಪೃಶ್ಯರು. ಈ ಅಸ್ಪೃಶ್ಯತೆ ಉಂಟಾಗಲು ಕಾರಣಗಳ ಹುಡುಕಾಟದಲ್ಲಿ ಹಲವಾರು ಪ್ರಶ್ನೆಗಳು ಹುಟ್ಟುತ್ತವೆ. ಗೋಮಾಂಸ ಭಕ್ಷಿಸುವುದರಿಂದ ಅಸ್ಪೃಶ್ಯತೆ ಹುಟ್ಟಿಕೊಂಡಿತೆ?, ಅಸ್ಪೃಶ್ಯರು ಸೇವಿಸುವ ಆಹಾರಗಳು ಅಸ್ಪೃಶ್ಯ ಆಹಾರಗಳಾದವೇ? ಇದಲ್ಲದೆ ಬೇರೆ ಯಾವುದಾದರೂ ಕಾರಣಗಳು ಹಿಂದೂಗಳಿಂದ ಅಸ್ಪೃಶ್ಯರನ್ನು ಪ್ರತ್ಯೇಕಿಸಿದವೇ ಎಂದು?

ಮನುಷ್ಯನು ಜೀವಿಸಲು ಬಳಸುವ ಆಹಾರವನ್ನು ಭಾರತದ ಪ್ರಾಚೀನ ಸೂಪಶಾಸ್ತ್ರ ಗಂಥ್ರಗಳಲ್ಲಿ ಸಾಮಾನ್ಯವಾಗಿ ಐದು ಅಥವಾ ಆರೆಂದು ವಿಭಾಗಿಸಿದ್ದಾರೆ. ಈ ಗುಂಪಿನಲ್ಲಿ ಪೇಯವೂ ಒಂದು. ಅಂದರೆ ಕುಡಿಯುವ ಪದಾರ್ಥ. ಆಧುನಿಕ ಕಾಲದಲ್ಲಿ ಆಹಾರವನ್ನು ಕುರಿತು ಜನಸಾಮಾನ್ಯರಲ್ಲಿ ಮೌಖಿಕವಾಗಿ ರೂಡಿಯಲ್ಲಿರುವ ಆಹಾರದ ವಿಭಾಗವೆಂದರೆ 'ಸಸ್ಯಾಹಾರ ಮತ್ತು ಮಾಂಸಾಹಾರ'ವಾಗಿದೆ. ಸಸ್ಯಹಾರದಲ್ಲಿ ಮಾಂಸಾಹಾರ ಸೇರಿಕೊಳ್ಳುವುದಿಲ್ಲ. ಆದರೆ ಮಾಂಸಹಾರದಲ್ಲಿ ಸಸ್ಯಹಾರದ ಜೊತೆ ಮೀನು, ಮೊಟ್ಟೆ, ಮಾಂಸಗಳು ಸೇರಿಕೊಳ್ಳುತ್ತವೆ. ಇದು ಮಿಶ್ರ ಆಹಾರ ಪದ್ಧತಿಯಾಗಿದೆ. 'ಸಸ್ಯಾಹಾರ' ಸೇವಿಸುವುವವರನ್ನು 'ಶಾಕಹಾರಿಹಾರಿ'ಗಳೆಂದೂ 'ಮಿಶ್ರಾಹಾರ' ಸೇವಿಸುವವರನ್ನು 'ಮಾಂಸಾಹಾರಿ'ಗಳೆಂದು ವಿಭಜಿಸಲಾಗಿದೆ.

ಆಹಾರ ಸೇವನೆಯ ಈ ವ್ಯತ್ಯಾಸವನ್ನು ಅನುಲಕ್ಷಿಸಿ ಭಾರತದಲ್ಲಿ ಮುಖ್ಯವಾಗಿ ಎರಡು ಬಗೆಯ ಜನವರ್ಗ ಸಮಾಜದಲ್ಲಿದ್ದಾರೆ. ಇಲ್ಲಿ ಸಸ್ಯಹಾರಿಗಳು ಮೇಲ್ವರ್ಗದವರೆಂದೂ ಮಾಂಸಹಾರಿಗಳು ಕೆಳವರ್ಗದವರೆಂಬ ಸಾಮಾನ್ಯ ಕಲ್ಪನೆಯಿದೆ. ಆದರೆ ಈ ಕಲ್ಪನೆಯಿಂದಾಗಿ ಒಂದು ಸಮುದಾಯದ ಜನರ ಆಹಾರ ಪದ್ಧತಿಯನ್ನು ಕನಿಷ್ಠವಾಗಿ ನೋಡುವ ಪರಿಪಾಠವನ್ನು ರೂಡಿಸಿಕೊಂಡಿದ್ದಾರೆ ಹಾಗೂ ಅಂತಹ ಆಹಾರ ಸೇವನೆಯನ್ನು ನಿಷಿದ್ಧಗೊಳಿಸಿದ್ದಾರೆ. ಜೊತೆಗೆ ಮೇಲ್ವರ್ಗದವರೂ ಮತ್ತು ತಳವರ್ಗದವರ ನಡುವೆ ಆಹಾರ ಸಂಸ್ಕೃತಿಯಿಂದಾಗಿ ದೊಡ್ಡ ಅಂತವರವೇ ಉಂಟಾಗಿದೆ. ಇದರ ಹಿನ್ನಲೆಯನ್ನು ತಿಳಿಯುವುದಾದರೆ.

**1. ಬ್ರಾಹ್ಮಣರು ಮತ್ತು ಮಾಂಸಭಕ್ಷಣೆ (ಗೋಮಾಂಸ ಭಕ್ಷಣೆ ಮತ್ತು ಸ್ಪೃಶ್ಯರು)**

ಮನುಷ್ಯರು ನರಭಕ್ಷಕರಾಗಿದ್ದ ಕಾಲಘಟ್ಟ ದಾಟಿದರೆ, 'ವಾತಾಪಿ ಜೀರ್ಣೋದ್ಭವ' ಎಂಬ ಸಂದರ್ಭಗಳನ್ನು ಬಿಟ್ಟರೆ, ಮನುಷ್ಯರ ಆಹಾರ ಸಂಸ್ಕೃತಿಯ ಬಹುಮುಖ್ಯ ಭಾಗ ಪ್ರಾಣಿಗಳೇ ಆಗಿದ್ದವು. ಪ್ರಾಣಿಗಳ ಬೇಟೆಯೇ ಮನುಷ್ಯನ ಮೊದಲ ಉದ್ಯೋಗವಾಗಿ ಮನುಕುಲ ಸಾಗಿಬಂತು. ಕೃಷಿ ಚಟುವಟಿಕೆ, ಪಶುಪಾಲನೆಗಳಲ್ಲಿ ಸಾಕಿ ಸಲಹುವುದು ಮುಂದುವರಿತು. ನಾಗರಿಕತೆ ಬೆಳೆದಂತೆ ಪ್ರಾಣಿಗಳಿಗೂ ಮೌಲ್ಯ ಮತ್ತು ಮಹತ್ವ ಪ್ರಾಪ್ತವಾಯಿತು.

ಋಗ್ವೇದದಲ್ಲಿ ಗೋವುಗಳನ್ನು ಕುರಿತು ಉಲ್ಲೇಖ 700ಬಾರಿ ಇದೆ, ಆ ಸಮಾಜದಲ್ಲಿ ಅವುಗಳಿಗಿದ್ದ ಮಹತ್ವವನ್ನು ಎತ್ತಿ ಹೇಳುತ್ತವೆ. ವೇದಗಳಲ್ಲಿ ಇಂದ್ರ, ಅಗ್ನಿ ಮುಂತಾದ ದೇವರಿಗೆ ಗೋಮಾಂಸ ಬಹಳ ಪ್ರಿಯವಾದ ಭಕ್ಷ್ಯ. ಮುಂದೆ ಮನು ಹೇಳುವ 'ಪಂಚ ಮಹಾಪಾತಕ'ಗಳ ಪಟ್ಟಿಯಲ್ಲಿ ಗೋವಧೆ–ಗೋಮಾಂಸ ಸೇವನೆ ಎರಡೂ ಸೇರಿಲ್ಲ.

ISSN: 2320-9941
ಪ್ರತಿಸ್ಪಂದ । Prathispandha

ವಸಿಷ್ಠ ಸೂತ್ರದ ಪ್ರಕಾರ ಯಜ್ಞದ ನಂತರ 'ಗೋಮಾಂಸ ಸೇವನೆ ಮಾಡದಿದ್ದರೆ ನರಕ ಪ್ರಾಪ್ತಿಯಾಗುತ್ತದೆ' ಎಂಬ ನಂಬಿಕೆಯೊಂದಿತ್ತು. ಯಜ್ಞವಲ್ಕ್ಯ, ಕಲ್ಪ, ಗೃಹಸೂತ್ರಗಳಲ್ಲಿ ಬ್ರಾಹ್ಮಣರೂ ಸೇರಿದಂತೆ ಅಂದಿನ ಜನರು ಮಾಂಸಾಹಾರ ಕುರಿತು ಹೇಳಲಾಗಿದೆ. ವೇದ, ರಾಮಾಯಣ ಕಾಲದಲ್ಲಿ ಋಷಿಮುನಿಗಳೂ ಮಾಂಸಹಾರಿಗಳಾಗಿದ್ದರು. ಆಹಾರಕ್ಕಾಗಿ ಜೀವ ಬಲಿ ನಡೆಯುತ್ತಿತ್ತು. ಕರ್ನಾಟಕದಲ್ಲಿ ಬ್ರಾಹ್ಮಣರು ಮಧ್ಯಯುಗದಲ್ಲಿ ಮಾಂಸ ಭಕ್ಷಣೆಯನ್ನು ಮಾಡುತ್ತಿದ್ದರೂ ಎಂಬುದಕ್ಕೆ ಕೆಲವು ಸ್ಪಷ್ಟ ಆಧಾರಗಳಿವೆ. ಬ್ರಾಹ್ಮಣನಾದ ದುರ್ಗಸಿಂಹನ ಪಂಚತಂತ್ರದಲ್ಲಿ ಉಲ್ಲೇಖವಿದೆ.

"ಬ್ರಾಹ್ಮಣರೂ ಕ್ಷತ್ರಿಯರೂ ವೇದೋಕ್ತ ಮಾರ್ಗದಲ್ಲಿ ನಡೆಯುವವರು; ಅವರ ಯಾಗ, ಅತಿಥಿ, ಪಿತೃದೇವತಾ ನಿಮಿತ್ತವಾಗಿ ವಿಧಿ ಪೂರ್ವಕವಾಗಿ ಪ್ರಾಣಿವಧೆ ಮಾಡುವರೇ ಹೊರತು ಅನ್ಯವಲ್ಲ. ವ್ಯರ್ಥವಾಗಿ ಅವರು ವಧೆ ಮಾಡುವುದಿಲ್ಲ. ಪ್ರಾಣಿಬಲಿಯು ಅವರಿಗೆ ಪುಣ್ಯ ಫಲವನ್ನು ಕೊಡುತ್ತದೆ. ಈ ಕ್ರಮವಲ್ಲದೆ ಅನ್ಯರೀತಿಯಲ್ಲಿ ಪ್ರಾಣಿಗಳನ್ನು ಕೊಂದರೆ ಅಥವಾ ತಿಂದರೆ ಮಹಾಪಾತಕ"4ವೆಂದೂ. ಬ್ರಹ್ಮಶಿವ, ಬಸವ ಮತ್ತು ಇತರ ವಚನಕಾರರಲ್ಲೂ ಇದಕ್ಕೆ ಸಮರ್ಥನೆಯಿದೆ.

"ಇಟ್ಟೆಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ,
ಮುಟ್ಟಿಯನಿಟ್ಟ ದ್ವಿಜರ ಮಾತದೇಕೆ?
ಹಲಗಲುಗಾಣದ ಗೂಗೆ ಇರುಳಾಯಿತ್ತೆಂದರೆ
ಜಗಕ್ಕೆ ಇರುಳಪ್ಪುದೆ, ಮರುಳೆ?
ಹೋಮದ ನೆವದಲಿ ಹೋತವ ತಿಂಬ
ಅನಾಮಿಕರೊಡನಾಡಿ ಗೆಲುವುದೇನು–
ಕೂಡಲ ಸಂಗಮದೇವಾ?"5

ಎಂದು ಬವಣ್ಣ ಬ್ರಾಹ್ಮಣರನ್ನು ಕರೆದಿದ್ದಾನೆ.

"ಏನಯ್ಯಾ, ವಿಪ್ರರು ನುಡಿದಂತೆ ನಡೆಯರು: ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಕೂಡಲಸಂಗವದೇವಾ, ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೇ ದೃಷ್ಟ"6. ಎಂದು ಬ್ರಾಹ್ಮಣರ ನಡೆ ನುಡಿಗಳು ಏಕವಾಗಿಲ್ಲವೆಂದು ಹೇಳುವಾಗ ಅವರ ಗೋಮಾಂಸ ಭಕ್ಷಣೆಯನ್ನು ಹೇಳಿದ್ದಾನೆ.

ಬ್ರಹ್ಮಶಿವ ತನ್ನ 'ಸಮಯಪರೀಕ್ಷೆ'ಯಲ್ಲಿ "ಪಶುವನ್ನು ಕೊಂದು ಸುಟ್ಟು ತಿಂದು ಬ್ರಾಹ್ಮಣರು ಸ್ವರ್ಗಕ್ಕೆ ಹೋಗುತ್ತೇವೆಂದು ನಂಬುತ್ತಾರೆ. ಅವರ ಪ್ರಕಾರ 'ಪಶುಕರ್ಮ'ವೇ ವೇದದ ಸಾರ, ಶ್ರೀಮಂತನಿಗೆ ಪಶುಕರ್ಮ ಮಾಡಿಸುವುದೇ ಪರಮ"7ವಾದದ್ದು.

"ಆರಾನುಂ ಕಂಡಪರೆಂ।
ದೂರಿಂ ಪೊರೆಗೊಯ್ದು ವೊಳದಂತಿರೆ ಪಶುವಂ।
ಘೋರಂಬಡಿಸಿಯೆ ಕೊಂದದ।
ನಾರೋಗಿಪ ವಿಪ್ರಸಮಿತಿ ಗೆಯ್ಯುದುದುಂಟೇ॥"8

ಅಲ್ಲದೆ ಊರಲ್ಲಿ ಯಾರಾದರೂ ನೋಡಿಯಾರೆಂದು ಊರ ಹೊರಗೆ ಪಶುವು ಕೂಗದಂತೆ ಎಚ್ಚರ ವಹಿಸಿ ಕೊಂದು ತಿನ್ನುತ್ತಿದ್ದರು. ಯಜ್ಞ ಶಾಲೆಗೂ ಹೊಲೆಯರ ಮನೆಗೂ ಭೇದವಿಲ್ಲ. ಬ್ರಾಹ್ಮಣರು ವೇದವನ್ನು ಓದಲು ಮುಖ್ಯ ಕಾರಣ ಅದು ಮಾಂಸವನ್ನು ತಿನ್ನಲು ಮತ್ತು ಪರವನಿತೆಯನ್ನು ಭೋಗಿಸಲು ಅವಕಾಶ ಕೊಡುತ್ತದೆಂದು ಹೇಳುತ್ತಾನೆ.

ಹಾವಿನ ಹಾಳ ಕಲ್ಲಯ್ಯನ ಪ್ರಕಾರ "ಮಿಕ್ಕ ಹದಿನೇಳು ಜಾತಿ ವಿಪ್ರರ ಕೈಯಲನುಗ್ರಹವ ಪಡೆದು ತಿನ ಕಲಿತರಯ್ಯಾ"9 ಅಂದರೆ "ಗೋಮಾಂಸ ತಿನ್ನುವುದುನ್ನು ಕಲಿತ ಬ್ರಾಹ್ಮಣನಿಂದ ಉಪದೇಶ ಹೊಂದಿ ಉಳಿದ ಹದಿನೇಳು ಜಾತಿಗಳು ಮಾಂಸ ತಿನ್ನುವುದನ್ನು ಕಲಿತವು" ಎಂದಿದ್ದಾನೆ. ಅಲ್ಲದೆ ಜನ್ನನ 'ಯಶೋದರಚರಿತ'ದಲ್ಲೂ ಬ್ರಾಹ್ಮಣರ ಮಾಂಸಹಾರದ ಉಲ್ಲೇಖಗಳಿವೆ. ಜೊತೆಗೆ ತೈತ್ತರೀಯ ಬ್ರಾಹ್ಮಣದಲ್ಲಿ ಯಾವ ಯಾವ ಎತ್ತು, ಹಸುಗಳನ್ನು ಯಾವ ಯಾವ ದೇವರುಗಳಿಗೆ ಆಹುತಿ ನೀಡಬೇಕೆಂಬುದನ್ನು ವಿವರಿಸಲಾಗಿದೆ.

* ವಿಷ್ಣುವಿಗೆ – ಗಿಡ್ಡನೆ ಎತ್ತನ್ನು
* ಇಂದ್ರನಿಗೆ – ಬಾಗಿರುವ ಮತ್ತು ನೆತ್ತಿಯಲ್ಲಿ ಆಕ್ರೋಶವಿರುವ ಎತ್ತನ್ನು
* ರುದ್ರನಿಗೆ – ಕೆಂಪು ಹಸುವನ್ನು ಇತ್ಯಾದಿಯಾಗಿ ಹೇಳಲಾಗಿದೆ.

ಆಪಸ್ತಂಬ ಧರ್ಮಸೂತ್ರದ 15, 14–19ರಂತೆ ಹಸು ಮತ್ತು ಎತ್ತು ಪವಿತ್ರ. ಆದುದರಿಂದ ಅವುಗಳನ್ನು ತಿನ್ನಬೇಕು ಎನ್ನಲಾಗಿದೆ. ಆರ್ಯರಲ್ಲಿ ಅತಿ ಮುಖ್ಯವಾದ ಅಥಿತಿಗಳು ಬಂದಾಗ 'ಮಧುಪರ್ಕ'ವನ್ನು ನೀಡಿ ಸತ್ಕರಿಸುವುದುಂಟು. ಇದಕ್ಕೆ ಆರ್ಹರಾದ ಅತಿಥಿಗಳೆಂದರೆ ಋತ್ವಿಜ ಅಥವಾ ಯಜ್ಞಗಳನ್ನು ನಡೆಸುವ ಬ್ರಾಹ್ಮಣರು, ಆಚಾರ್ಯ ಅಥವಾ ಅಧ್ಯಾಪಕ, ಮದುವೆ ಗಂಡು, ರಾಜ, ಸ್ನಾತಕ ಗುರುಕುಲದಿಂದ ಆಗ ತಾನೇ ವಿದ್ಯೆಯನ್ನು ಮುಗಿಸಿ ಬಂದಿರುವವನು ಮತ್ತು ಆತಿಥ್ಯ ನೀಡುವವರಿಗೆ ಇಷ್ಟವಾಗವನು. 'ಮಧುಪರ್ಕ'ವನ್ನು ಜೇನುತುಪ್ಪ, ಮೊಸರು, ಬೆಣ್ಣೆ, ಹುರಿದ ಬಾರ್ಲಿ, ತುಪ್ಪ, ನೀರು, ನೆಲದಲ್ಲಿ ಬೆಳೆದ ಬೀಜಗಳು, ಪಾಯಸ, ಹಾಲು ಇವೆಲ್ಲದರ ಜೊತೆಗೆ ಗೋಮಾಂಸ, ಟಗರು, ಮೇಕೆ, ಜಿಂಕೆ ಮಾಂಸ ಬೆರೆಸಿ ತಯಾರಿಸುವುದಾಗಿ ಹೇಳಲಾಗಿದೆ. ಅಲ್ಲದೆ ಆರ್ಯರು ಅತಿಥಿಗಳಿಗೆ ಗೋಮಾಂಸವನ್ನು ನೀಡುವುದು ಎಷ್ಟರ ಮಟ್ಟಿಗೆ ಪ್ರಿಯವಾಗಿತ್ತೆಂದರೆ ಗೋಮಾಂಸಕ್ಕಾಗಿ ಬರುತ್ತಿದ್ದ ಅತಿಥಿಗಳನ್ನು 'ಗೋಘ್ನ' ಎಂದೇ ಕರೆಯುತ್ತಿದ್ದರು. ಅದರರ್ಥ 'ಗೋಹಂತಕ'ರೆಂದು

ಹೀಗೆ ಸಮಾಜದಲ್ಲಿ ಮಾಂಸಾಹಾರವು ಒಂದು ರೀತಿಯ ಪಾವಿತ್ರತೆಯನ್ನು ಪಡೆದುಕೊಂಡಿತ್ತು ಆದರೆ ನಂತರದ ದಿನಗಳಲ್ಲಿ ಮಾಂಸಾಹಾರ ಅದರಲ್ಲೂ ಗೋಮಾಂಸ ಭಕ್ಷಿಸುವವರನ್ನು 'ಅಸ್ಪೃಶ್ಯ'ರೆಂದು ಪರಿಗಣಿಸಿ ಅವರನ್ನು ಸಮಾಜದಲ್ಲಿ ಕನಿಷ್ಟವಾಗಿ ಕಂಡು, ಅವರನ್ನು ಕೇರಿಗಳಲ್ಲಿಟ್ಟರು. ಗೋಮಾಂಸ ತಿನ್ನದ ಹಿಂದೂಗಳು ಮತ್ತು ಗೋಮಾಂಸ ತಿನ್ನುವ ಹಿಂದೂಗಳ ನಡುವೆ ಅಂತರವು ಉಂಟಾಯಿತು. ಈ ಅಂತರವು ಪ್ರಸ್ತುತ ದಿನಗಳಲ್ಲಿ ಹಲವಾರು ತಲ್ಲಣ/ಸಂಘರ್ಷಗಳಿಗೆ ಕಾರಣವಾಗಿದೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆಯನ್ನು ತ್ಯಜಿಸಿದ್ದೇಕೆ? ಎಂಬ ಮತ್ತೊಂದು ಪ್ರಶ್ನೆ ಹುಟ್ಟುಕೊಳ್ಳುತ್ತದೆ. ಇದಕ್ಕೆ ಖಚಿತವಾದ ಉತ್ತರ ಸಿಗದಿದ್ದರೂ ವಿದ್ವಾಂಸರು ಸಂಶೋದನೆಗಳಿಂದ ಕೆಲವು ವಿಚಾರಗಳು ತಿಳಿದು ಬಂದಿದೆ.

ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆಯನ್ನು ತ್ಯಜಿಸಿದ್ದೇಕೆ?

ಪ್ರೊ. ವಿನ್ಸಂಟ್ ಸ್ಮಿತ್ ಪ್ರಕಾರ ಅಶೋಕನ '*ಶಿಲಾಶಾನಸಗಳು ಮತ್ತು ಮನುಸ್ಮೃತಿ*' ಅಧ್ಯಯನದಿಂದ ಅಶೋಕನು ಗೋಹತ್ಯೆಯನ್ನು ನಿಷೇದಿಸಿರಲಿಲ್ಲ. ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದ ಮೇಲೆ ಯಾವುದೇ ಪ್ರಾಣಿಗಳನ್ನಾಗಲಿ, ಮನುಷ್ಯನ್ನಾಗಲಿ ಸಾಯಿಸುವುದು ಅನಗತ್ಯವೆಂದು ತಿಳಿದುಕೊಂಡಿದ್ದ. ಹಾಗೆ ಅದನ್ನು ರಾಜನ ಆಜ್ಞೆಯಂತೆ ಶಿಲಾಶಾಸನಗಳ ಮೂಲಕ ಬರೆಸಲಾಯಿತು. ಇನ್ನು ಮನು ಕೂಡ ಗೋಹತ್ಯೆಯನ್ನು ಪೂರ್ಣವಾಗಿ ನಿಷೇದಿಸಿರಲಿಲ್ಲ. ಆದರೆ ಕೆಲವು ಪರಿಸ್ಥಿತಿಗಳಲ್ಲಿ ಗೋಮಾಂಸದ ಭಕ್ಷಣೆಯ ಬಗ್ಗೆ ನಿರ್ಬಂಧ ವಿಧಿಸಿದ್ದನಷ್ಟೆ.

ಬ್ರಾಹ್ಮಣೇತರು ಗೋಮಾಂಸ ಭಕ್ಷಿಸುವುದು ತ್ಯಜಿಸುವುದಕ್ಕೆ ಮುಖ್ಯ ಕಾರಣೆಂದರೆ ಬ್ರಾಹ್ಮಣೇತರರು ಬ್ರಾಹ್ಮಣರನ್ನು ಅನುಸರಿಸಿದ್ದು. "ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮೇಲ್‌ಸರ್ತದಲ್ಲಿರುವವರನ್ನು ಕೆಳಸ್ತರದಲ್ಲಿರುವ ಜನರು ಅನುಸರಿಸುವುದು ಸಮಾಜದ ಒಂದು ಸಾಮೂಹಿಕ ಸನ್ನಿ"10 ಎಂದು ಫ್ರೆಂಚ್ ದೇಶದ ಸಮಾಜಶಾಸ್ತ್ರಜ್ಞ ಗಾಬ್ರಿಯಲ್ ಗಾರ್ದೆ ಹೇಳುತ್ತಾರೆ. ಇದನ್ನು ನಾವು ಪ್ರಸ್ತುತ ಸಮಾಜದಲ್ಲಿಯೂ ನೋಡಬಹುದಾಗಿದೆ. 'ಚಿರತೆಯನ್ನು ಕಂಡು ನರಿ ವಾತಗಳನ್ನು ಇಟ್ಟುಕೊಂಡಂತೆ' ಮಧ್ಯಮ ವರ್ಗದ ಎಷ್ಟೋ ಕುಟುಂಬಗಳು ಮೇಲ್ವರ್ಗದವರನ್ನು ಅನುಸರಿಸಲು ಹೋಗಿ ಸಾಲದ ಬಾದೆಗೆ ಸಿಕ್ಕ ನರಳಾಡುತಿರುವುದನ್ನು ನಾವಿಂದು ಕಾಣುಬಹುದು. ಗೋಮಾಂಸ ತಿನ್ನುವುದನ್ನು ಬಿಟ್ಟ ಬ್ರಾಹ್ಮಣರು ಪೂರ್ಣ ಶಾಕಾಹಾರಿಗಳಾಗಿ, ಗೋಪೂಜೆ ಮಾಡಲು ಪ್ರಾರಂಭಿಸಿದರು. ಬ್ರಾಹ್ಮಣೇತರರು ಒಂದು ಕಾಲಕ್ಕೆ ಗೋವಿನ ಬೆಲೆ ಹೆಚ್ಚಾದ ಕಾರಣದಿಂದ ಎಲ್ಲಾ ರೀತಿಯ ಮಾಂಸವನ್ನು ಭಕ್ಷಿಸುತ್ತ ಗೋಮಾಂಸವನ್ನು ಮಾತ್ರ ತ್ಯಜಿಸಿ ಗೋಪೂಜೆ ಮಾಡಲು ಪ್ರಾರಂಭಿದರು. ಆದರೆ ಇನ್ನುಳಿದ ಹಿಂದೂಗಳು ಗೋಮಾಂಸದ ಸೇವನೆಯನ್ನು ಮುಂದುವರಿಸಿ ಸಮಾಜದಿಂದ ದೂರ ಉಳಿದು ಅಸ್ಪೃಶ್ಯರಾದರು.

**2. ಗೋಮಾಂಸ ಭಕ್ಷಣೆ ಮತ್ತು ಅಸ್ಪೃಶ್ಯರು:**

ಒಂದು ಕಾಲದಲ್ಲಿ ಎಲ್ಲಾ ಹಿಂದೂಗಳು ಗೋಮಾಂಸ ಭಕ್ಷಣೆ ಮಾಡುತ್ತಿದ್ದವರಾದರೂ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಅದನ್ನು ತ್ಯಜಿಸಿದರು. ಆದರೆ ಹಿಂದೂಗಳ ಕೆಲವು ಛಿದ್ರವಾದ ಬುಡಕಟ್ಟು ಸಮಾಜಗಳು ಮಾತ್ರ ಗೋಮಾಂಸ ಭಕ್ಷಣೆಯನ್ನು ಮುಂದುವರಿಸಿದಾಗ ಸಮಾಜದಲ್ಲಿ ಎರಡು ರೀತಿಯ ಗುಂಪುಗಳು ಹುಟ್ಟಿಕೊಂಡವು.

ISSN: 2320-9941
ಪ್ರತಿಸ್ಪಂದ | Prathispandha

ಹಿಂದೂ ಸಮಾಜದಲ್ಲಿ ಇದು ಹಿಂದಿಗಿಂತ ಎದ್ದು ಕಾಣಿಸುವಂತಹ ಬಿರುಕಾಗಿ ಕಾಣಿಸಿಕೊಂಡಿತು. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಗೋಪೂಜೆ ಮಾಡುತ್ತಾ ಗೋಹತ್ಯೆಯನ್ನು ಸಮಾಜದ ಒಂದು ಅನಿಷ್ಟವೆಂಬಂತೆ ನೋಡತೊಡಗಿದರು. ಅಂಬೇಡ್ಕರ್ ಹೇಳುವಂತೆ 'ಗೋಮಾಂಸ ಅದರಲ್ಲೂ ಮೃತ ಗೋಮಾಂಸ ಸೇವನೆಯಿಂದಲೇ ಅಸ್ಪೃಶ್ಯತೆ ಆರಂಭವಾಯಿತೆಂದು' ನಿರ್ಧರಿಸಲು ಏಕ ಮುಖರಾಗಿದ್ದಾರೆ. ಇಂತಹ ಅನಿಷ್ಟ ಆಚರಣೆಯನ್ನ ಕೆಲವು ವಚನಕಾರರು ಖಂಡಿಸಿದ್ದಾರೆ.

**"ಕುರಿ ಕೋಳಿ ಕಿರು ಮೀನ ತಿಂಬವರ ಊರೊಳಗೆ ಇರು ಎಂಬರು**

**ಅಮೃತಾನ್ನವ ಕರೆವ ಗೋವ ತಿಂಬವರ ಊರನಿಂದ ಹೊರಗಿರು ಎಂಬರು"11** ಎಂದು ಅಂಬಿಗರ ಚೌಡಯ್ಯ ಪ್ರತಿಭಟಿಸಿದ್ದಾನೆ.

**"ಕುರಿ ಕೋಳಿ ಕಿರು ಮೀನು ತಿಂಬವರಿಗೆಲ್ಲ ಕುಲಜರೆಂಬರು.**

**ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು"12** ಎಂದು ಉರಿಲಿಂಗಿ ಪೆದ್ದಿಯ ಪುಣ್ಯಶ್ರೀ ಕಾಳವ್ವೆ ಸಮಾಜದಲ್ಲಿನ ತರತಮತೆಯನ್ನು ಕಟುವಾಗಿ ಟೀಕಿಸಿದ್ದಾಳೆ.

ಪ್ರಪಂಚದ ಎಷ್ಟೋ ದೇಶಗಳಲ್ಲಿ ಹಲವು ಗುಂಪುಗಳ ನಡುವೆ ಹಲವು ರೀತಿಯ ಆಹಾರ ಪದ್ಧತಿಗಳಿದ್ದರೂ ಅವು ಯಾವುವೂ ಜನರ ಮಧ್ಯೆ ಈ ರೀತಿಯ ಒಡಕನ್ನು ಮೂಡಿಸಿಲ್ಲ. ಆದರೆ ಭಾರತದ ಹಿಂದೂ ಸಮಾಜದಲ್ಲಿ ಮಾತ್ರ ಇದು ಅಜಗಜಾಂತರವಾದ ಸಾಮಾಜಿಕ ವ್ಯತ್ಯಾಸವನ್ನು ಸೃಷ್ಟಿಮಾಡಿದೆ.

ಈ ಮೇಲೆ ಚರ್ಚಿಸಲಾದ ವಿಷಯಗಳಿಂದಲೇ ನಡೆದ ವ್ಯವಸ್ಥೆಯ ಪಳೆಯುಳಿಕೆಗಳು ಇಂದಿಗೂ ನಮಗೆ ಸಮಾಜದಲ್ಲಿ ಕಾಣಸಿಗುತ್ತದೆ. ಈಗಲೂ ನೇಪಾಳದ ಬ್ರಾಹ್ಮಣರು ವಿಶೇಷ ಸಂದರ್ಭದಲ್ಲಿ ಅಂ–ದರೆ 'ಶಿವರಾತ್ರಿ'ಯಲ್ಲಿ ಮಾಂಸಾಹಾರ ಸೇವಿಸುತ್ತಾರೆ. 'ಕಾಶ್ಮೀರದ ಬ್ರಾಹ್ಮಣರು, ಕೊಂಕಣಿ ಬ್ರಾಹ್ಮಣರು, ಗೌಡ ಬ್ರಾಹ್ಮಣರು ಮಾಂಸಾಹಾರಿ'ಗಳಾಗಿದ್ದಾರೆ. ಅಲ್ಲದೆ ಇತ್ತೀಚಿಗೆ ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ಬ್ರಾಹ್ಮಣರು ಯಾಗ ಮಾಡಿ ಮಾಂಸ ತಿಂದಿರುವುದು ರಾಜ್ಯಾದಂತ ಸುದ್ಧಿ ಮಾಡಿದೆ. ಇದೆಲ್ಲವನ್ನು ಅಮೂರ್ತ 'ದೇವರ' ತಲೆಗೆ ಕಟ್ಟಿ ಸ್ಪೃಶ್ಯರಾಗುತ್ತಾರೆ, ಆದರೆ ತಳಸಮುದಾಯದವರು 'ಹಸಿವಿಗಾಗಿ' ಗೋಮಾಂಸ ತಿಂದರೆ ಮಾತ್ರ ಅಸ್ಪೃಶ್ಯರೆಂದು ಊರ ಹೊರಗಿಡುತ್ತಾರೆ. ಇಂತಹ ಹಸಿವಿನ ಎಷ್ಟೋ ಸಂಗತಿಗಳನ್ನು ದಲಿತ ಆತ್ಮಕಥೆಗಳಲ್ಲಿ ಲೇಖಕರು ದಾಖಲೀಕರಿಸಿದ್ದಾರೆ. ಉದಾಹರಣೆಗೆ ಶಾಂತಬಾಯಿ ಕಾಂವಳೆಯ ಅವರ 'ನನ್ನ ಜನುಮದ ದುರಂತ ಕಥೆ' ಯಲ್ಲಿ ಸತ್ತ ಎಮ್ಮೆಯನ್ನು ಹಂಚಿ ತನ್ನುವ ಪರಿ ನಿಜಕ್ಕೂ ಅಸಹಜವಾಗಿದೆ.

ದೇವನೂರು ಮಹಾದೇವ ಅವರು 'ಎದೆಗೆ ಬಿದ್ದ ಅಕ್ಷರ' ಕೃತಿಯಲ್ಲಿ ಹೇಳುವಂತೆ "ದುರಂತವೆಂದರೆ–ಹೆಂಡ, ದನದ ಬಾಡು ನಮ್ಮ ಪಾಲಿಗೆ ಕೇವಲ ಆಹಾರ ಮಾತ್ರವಾಗಿಲ್ಲ. ಈ ಸಮಾಜದಲ್ಲಿ ಹೆಂಡ, ದನದ ಬಾಡಿನಲ್ಲಿ ಅವಮಾನ ಜೋಡಿಸಲ್ಪಟ್ಟಿವೆ. ಹೆಂಡ, ದನದ ಬಾಡು ಭಾರತದಲ್ಲಿ ಪ್ರತಿಷ್ಠತ ಹೋಟೆಲ್, ತಿಥಿ ಊಟ ಆಗುವವರೆಗೂ ಈ ಆಹಾರಕ್ಕೆ ಅಂಟಿರುವ ಅವಮಾನದಿಂದ ತಪ್ಪಿಸಿಕೊಳ್ಳುವುದು ಕಷ್ಟ. ಹಾಗಾದರೆ ಏನು ಮಾಡೋಣ? ಹೆಂಡ ತಪ್ಪೇ? ದನದ ಬಾಡು ತಪ್ಪೇ? ದನದ ಬಾಡಿನಲ್ಲಿ ಅಡಕವಾಗಿರು ಅವಮಾನದ ಅಂಶವನ್ನು ತೆಗೆದರೆ ಮಾತ್ರ ಇವೂ ಸಹಜ 'ಆಹಾರ' ಆಗುತ್ತವೆ" ಎಂದಿದ್ದಾರೆ. ಸಮಾಜದ ಬಹು ಪ್ರತಿಷ್ಠಿತರು ಮಾತ್ರ ಈ ಬಗೆಯ ಪೌಷ್ಠಿಕಾಂಶ ದೊರೆಯುವ ಆಹಾರವನ್ನು ಸೇವಿಬೇಕು. ಅದರೆ ದಲಿತ ಸಮುದಾಯದವರು ಗೋಮಾಂಸ ತಿಂದರೆ ಅವಮಾನವನ್ನು ಜೊತೆಯಲ್ಲಿ ತಂದಂತೆ ಆಗುತ್ತದೆಯೇ? ಎಂದು ಪ್ರಶ್ನೆ ಮಾಡಿರುವುದನ್ನು ಗಮನಿಸಬಹುದು. ಹೀಗೆ ಅಹಾರ ಸಂಸ್ಕೃತಿಯಲ್ಲಿರು 'ಸ್ಪೃಶ್ಯತೆ ಮತ್ತು ಅಸ್ಪೃಶ್ಯತೆ'ಯ ಸಂಗತಿಗಳು ಇವತ್ತಿಗೂ ಬಗೆಹರಿಯದ ಸಮಸ್ಯೆಯಾಗಿವೆ.

ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಹೃದಸಂಬಂಧಿ ರೋಗಗಳಿಗೆ ವೈದ್ಯಾಧಿಕಾರಿಗಳು ಗೋಮಾಂಸ ಸೇವನೆಯ ಸಲಹೆ ನೀಡುತ್ತಾರೆ. ಅಷ್ಟೇ ಅಲ್ಲದೆ ಚರಕ, ಸುಶ್ರುತ, ವಾಗ್ಭಟರೆಲ್ಲ ಆರೋಗ್ಯದ ರಕ್ಷಣೆಗೆ ದನದ ಮಾಂಸದ ಅಗತ್ಯವಿದೆ ಎಂದಿದ್ದಾರೆ. ಇಷ್ಟಾದರು ಕಾರಣಾಂತರಗಳಿಂದ ಗೋಮಾಂಸ ಸೇವನೆಯನ್ನು ತ್ಯಜಿಸಿದ ವರ್ಗ, ಸೇವಿಸುವ ಸಮುದಾಯವನ್ನು ಮಾತ್ರ 'ಗೋಮಾಂಸ ಸೇವನೆ'ಯಿಂದಾಗಿ ದೂರ ಇಟ್ಟಿರುವುದು ಶೋಚನೀಯ ಸ್ಥಿತಿಯೇ ಸರಿ.

■■

**ಕೊನೆ ಟಿಪ್ಪಣಿಗಳು:**

1. ಆಹಾರ: ಮಹಿಳಾ ಸಂಸ್ಕೃತಿಕ ಕೋಶ: ಪ್ರ. ಸಂ: ಡಾ.ಆರ್. ಸುನಂದಮ್ಮ, ಸಂ: ದು. ಸರಸ್ವತಿ(ಲೇಖನ)ಪು,ಸಂ:05
2. ಅದೇ, ಪು. ಸಂ:06
3. ಹರಿದಾಸರ ಸಾವಿರ ಕೀರ್ತನೆಗಳು: ಸಂ. ವಿದ್ಯಾವಾಚಸ್ಪತಿ ಡಾ.ಅರಳು ಮಲ್ಲಿಗೆ ಪಾರ್ಥಸಾರಥಿ(ಶ್ರೀ ಹರಿದಾಸ ಸಂಘ,2013)ಪು.ಸಂ:327
4. ದುರ್ಗಸಿಂಹನ ಪಂಚತಂತ್ರ: ಸಂ: ಡಾ.ಸಿ. ಪಿ. ಕೃಷ್ಣಕುಮಾರ್ (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,1994) ಪು. ಸಂ:50–1
5. ಬಸವಣ್ಣನವರ ಷಟ್ಸ್ಥಲದ ವಚನಗಳು: ಪ್ರೊ.ಬಸವನಾಳ ಶಿವಲಿಂಗಪ್ಪ(ಕನ್ನಡ ಮತ್ತು ಸಂಸ್ಕೃತಿ ಇಲಾಖೆ.2011) ವಚನ 579.ಪು,ಸಂ:149
6. ಅದೇ ವಚನ 577
7. ಸಮಯಪರೀಕ್ಷೆ: ಬ್ರಹ್ಮಶಿವ 11, 104
8. ಅದೇ.11 105
9. ಸಕಲ ಪುರಾತನದ ವಚನಗಳು–2. ಪು.731
10. ಜಾತಿ ಅಸ್ಪೃಶ್ಯತೆಯ ಸಂಘರ್ಷ:ಡಾ. ಎಂ. ವೆಂಕಟಸ್ವಾಮಿ(ನವಕರ್ನಾಟಕ ಪ್ರಕಾಶನ,2018). ಪು.ಸಂ:161
11. ಅಂಬಿಗರ ಚೌಡಯ್ಯನ ವಚನಗಳು. ಸಂ: ಸಿ.ಪಿ.ಸಿದ್ಧಾಶ್ರಮ ಮತ್ತು ಎಸ್. ವಿದ್ಯಾಶಂಕರ. ಬೆಂಗಳೂರು, ವಚನ 7
12. ಶಿವಶರಣೆಯರ ವಚನಗಳು ಪು.391
13. ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ: ಸಂ: 3, ಜಾನಪದ, ಶಾಸನ–ಕೈಪಿಯತ್ತು. ಸಂ: ಪ್ರೊ. ಎನ್.ಎಂ. ತಳವಾರ(ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಂಗ,2014)
14. ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ: ಅರವಿಂದ ಮಾಲಗತ್ತಿ(ಕನ್ನಡ ಸಾಹಿತ್ಯ ಪರಿಷತ್,2014)
15. ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ: ಡಾ. ಎಂ. ಚಿದಾನಂದಮೂರ್ತಿ(ಕನ್ನಡ ಸಾಹಿತ್ಯ ಪರಿಷತ್,2014)
16. ಮಹಿಳಾ ದಲಿತ ಆತ್ಮಕಥೆ: ಶೃತಿ ಮತ್ತು ಡಾ. ಹೊಂಬಯ್ಯ ಹೊನ್ನಲಗೆರೆ

ISSN: 2320-9941


# ಅಧಿಕಾರಶಾಹಿ ವ್ಯವಸ್ಥೆಗೆ ಸಂಕಮ್ಮಳ ಪ್ರತಿರೋಧದ ಧ್ವನಿ

● ಡಾ. ಅಶ್ವಿನಿ ನಾಯಕ

ಜನಪದವು ಜನಜೀವನದ ಪ್ರತಿರೂಪ. ಮಾನವ ಸಂಸ್ಕೃತಿಯ ಮೂಲವನ್ನು ಶೋಧಿಸುವಲ್ಲಿ ಜನಪದ ಸಾಹಿತ್ಯವು ಬಹುಮುಖ್ಯ ಆಕರವಾಗಿದೆ. ಜನಸಾಮಾನ್ಯರ ಬದುಕಿನ ಜೀವನಾನುಭವದ ಗ್ರಹಿಕೆಯು ಸಮುದಾಯದೊಳಗಣ ಆಕೃತಿಯ ರೂಪವಾಗಿ ಹಾಡು, ಕತೆ, ಗಾದೆ, ಒಗಟುಗಳ ಮೂಲಕ ಅಭಿವ್ಯಕ್ತಿಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಜನಪದ ಸಂಸ್ಕೃತಿಯು ರೂಪಿಸುವ ಈ ಬದುಕು ಅನೌಪಚಾರಿಕವಾದುದು ಹಾಗೂ ಆದರ್ಶಮಯವಾದುದು. ಜನಪದರ ನೈಜ ಪ್ರತಿಭೆ, ಸ್ಮರಣ ಶಕ್ತಿ, ದೇಹ ಮನಸ್ಸುಗಳ ಆರೋಗ್ಯ, ಲೋಕಜ್ಞಾನ, ಶ್ರಮ ಸಂಸ್ಕೃತಿಯ ಅರಿವು ಮಹಾಕಾವ್ಯಗಳ ಹಿಂದಿರುವ ಮೂಲ ಶಕ್ತಿಯಾಗಿವೆ. ಹೀಗೆ ಅನುಭವದ ಮೇಲೆ ಆಧಾರಿತವಾದ ಈ ಕಂಠಸ್ಥ ಮಾಧ್ಯಮ ತನ್ನಲ್ಲಿನ ಸತ್ವದಿಂದ ಪರಿವರ್ತನಶೀಲ ಸಮಾಜದ ಸವಾಲುಗಳಿಗೆ ಮುಖಾಮುಖಿಯಾಗಿ ಗೆಲ್ಲುತ್ತಾ ಸದಾ ನಿರಂತರತೆಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತದೆ ಹಾಗೂ ಪರಿವರ್ತನೆಯ ತತ್ವವನ್ನು ತನ್ನದೇ ಆದ ರೀತಿಯಲ್ಲಿ ಪ್ರಕಟಿಸುತ್ತಿರುತ್ತದೆ. ಇದು ಜಾನಪದದ ನವೀಕರಣ ಪ್ರಕ್ರಿಯೆಯಾಗಿರುವಂತೆ ಸಂಸ್ಕೃತಿಯ ಸ್ವರೂಪದ ಬಗೆಗೆ ನಮ್ಮ ಅರಿವನ್ನು ವಿಸ್ತರಿಸುವ ಸಂಗತಿಯೂ ಆಗಿದೆ. ಬದಲಾವಣೆಯ ಈ ನಿರಂತರ ಪ್ರಕ್ರಿಯೆಯಲ್ಲಿ ಕೆಲವು ಅಂಶವನ್ನು ಸ್ಥಿರರೂಪದಲ್ಲಿ ಉಳಿಸಿಕೊಳ್ಳುತ್ತಾ, ಸ್ವಯಂಶೋಧಿಸಿಕೊಳ್ಳುವ ಕ್ರಿಯೆ ಜಾನಪದವನ್ನು ಪುನರ್ ಪರಿಶೀಲನೆಯ ಕೆಲಸಕ್ಕೆ ಒತ್ತಾಯಿಸುತ್ತದೆ. ಈ ಅರ್ಥದಲ್ಲಿ ಸಂಸ್ಕೃತಿಯ ಕ್ರಿಯಾತ್ಮಕ ಉತ್ಪನ್ನಗಳು ಬದಲಾವಣೆಗೆ ಒಳಗಾಗುತ್ತವೆ. ಈ ಕ್ರಿಯೆಯಲ್ಲಿ ಮೂಲತತ್ವಗಳನ್ನು ಸಂಪೂರ್ಣವಾಗಿ ನಾಶಗೊಳಿಸಿಕೊಳ್ಳದೆ ಹೊಸ ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳುತ್ತಾ ಹೋಗುವ ಪ್ರಕ್ರಿಯೆಯಲ್ಲಿ

**ವಿಳಾಸ:** ಡಾ.ಅಶ್ವಿನಿ ನಾಯಕ
ಸಹಾಯಕ ಪ್ರಾಧ್ಯಾಪಕರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು
Email - nayakashu24@gmail.com

ಸಾಹಿತ್ಯದಂತೆ ಅಶಾಬ್ದಿಕ ಪ್ರಕಾರಗಳು ಆಧುನೀಕರಣಗೊಳ್ಳುತ್ತವೆ. ಈ ಕಾರಣಕ್ಕಾಗಿಯೇ ಜನಪದ ಸಾಹಿತ್ಯವು ಇಂದಿಗೂ ಪ್ರಸ್ತುತವಾದ ಸಾಹಿತ್ಯವಾಗಿದೆ. ವಿಭಿನ್ನ ಜನಾಂಗದ ಸಂಸ್ಕೃತಿ, ಸಾಮಾಜಿಕ ರೀತಿ–ನೀತಿ, ಜೀವನ ಶೈಲಿ ಹಾಗೂ ಬದುಕಿನ ಒಳನೋಟಗಳನ್ನು ಕಟ್ಟಿಕೊಡುವಲ್ಲಿ ಜನಪದ ಸಾಹಿತ್ಯವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದರಲ್ಲಿ ಜನಪದರ ಜೀವನ ಮೌಲ್ಯಗಳು ತಾನೇ ತಾನಾಗಿ ತೆರೆದುಕೊಳ್ಳುತ್ತವೆ. ಜನಸಂಸ್ಕೃತಿಯ ಪ್ರತೀಕವಾಗಿ ಕಾಲಗರ್ಭದಲ್ಲಿ ಸೇರಿಹೋದ ಅನೇಕ ಅಗೋಚರ ಅಂಶಗಳನ್ನು ದಾಖಲಿಸುವಲ್ಲಿ ಇವು ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ. ಇಲ್ಲಿ ಮಹಿಳೆಯರ ಪಾತ್ರ ಹೆಚ್ಚಿನದಾಗಿದ್ದು, ಹೆಣ್ಣಿನ ಜೀವನಕ್ಕೆ ಸಂಬಂಧಿಸಿದ ಅನೇಕ ಅಂಶಗಳು ಅನಾವರಣಗೊಳ್ಳುತ್ತವೆ. ಜನಪದ ಹಾಡಿನಿಂದ ಮೊದಲಾಗಿ ಜನಪದ ಮಹಾಕಾವ್ಯಗಳವರೆಗೆ ಮಹಿಳೆಯರ ಕುರಿತಾದ ವಿಚಾರಗಳು ವಿಸ್ತರಿಸಲ್ಪಟ್ಟಿವೆ. ಜನಪದವು ಸಮಷ್ಟಿಯ ಪ್ರತೀಕವಾಗಿದ್ದು ಜನಪದ ಮಹಿಳೆಯರ ಬದುಕಿನಲ್ಲಿ ವ್ಯಕ್ತಿ ಹಿತವು ಗೌಣವಾಗಿ ಸಮಷ್ಟಿ ಹಿತವು ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಜನಪದ ಸಾಹಿತ್ಯವು ಸ್ತ್ರೀ ಬದುಕಿಗೆ ಸಂಬಂಧಿಸಿದ ಹಲವಾರು ಅಂಶಗಳನ್ನು ತೋರ್ಪಡಿಸಲು ಅನುವು ಮಾಡಿಕೊಟ್ಟಿದೆ. ಮಹಿಳೆಯರು ಅನುಭವಿಸುವ ನೋವು, ಕೌರ್ಯಗಳನ್ನು ತಿಳಿಸುವುದರ ಜೊತೆಗೆ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಆದಾಗ, ವಿಶ್ವಾಸ, ನಂಬಿಕೆಯ ಹೆಸರಿನಲ್ಲಿ ಜೀವನವೇ ನಶಿಸಿ ಹೋಗುವ ಪರಿಸ್ಥಿತಿ ಎದುರಾದಾಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹೋರಾಟ ಮಾಡಿರುವುದನ್ನು ತಿಳಿಸುತ್ತದೆ. ಇವು ವಿಭಿನ್ನ ಸ್ವರೂಪದಲ್ಲಿ ಗೋಚರಿಸಿದರೂ ಮಹಿಳೆಯರ ಬಂಡಾಯದ ಮನೋಧರ್ಮ ಅಲ್ಲಲ್ಲಿ ಎದ್ದು ತೋರುತ್ತದೆ. ಹೀಗೆ ಅನೇಕ ಸಂದರ್ಭಗಳಲ್ಲಿ ವಿನಯ, ತ್ಯಾಗ, ವಿಧೇಯತೆ ಮುಂತಾದ ಸ್ಥಾಪಿತ ಮಾದರಿತ್ವದ ಬಲೆಯಲ್ಲಿ ಸಿಲುಕಿ ನರಳಿ, ಎಲ್ಲ ರೀತಿಯ ನೋವನ್ನು ಸಹಿಸಿ ಹೊಂದಾಣಿಕೆ ಮಾಡಿಕೊಂಡು ಒಪ್ಪಿಕೊಳ್ಳುವ ಸ್ತ್ರೀ ಸಮುದಾಯ ಒಂದೆಡೆಯಾದರೆ, ಈ ಎಲ್ಲ ಒತ್ತಡಗಳನ್ನು ಮೀರಿ ತನ್ನ ಅಸ್ತಿತ್ವಕ್ಕಾಗಿ ಹೋರಾಡಿದ, ವ್ಯವಸ್ಥೆ ನಿರ್ದೇಶಿಸಿದ ಮೌಲ್ಯದ ಮೇರೆಯನ್ನು ಮೀರಿದ ಸ್ತ್ರೀ ಸಮುದಾಯ ಇನ್ನೊಂದೆಡೆ ಮುಖಾಮುಖಿಯಾಗುತ್ತದೆ. ಇವೆರಡೂ ದೃಷ್ಟಿಕೋನಗಳು ಮೌಖಿಕ ಪರಂಪರೆಯಲ್ಲಿ ಯಥೇಚ್ಛವಾಗಿ ನೆಲೆಸಿವೆ.

ಪಾವಿತ್ರ್ಯ ಎನ್ನುವುದು ದೇಹ ಮತ್ತು ಮನಸ್ಸಿಗೆ ಸಂಬಂಧಪಟ್ಟ ಸಂಗತಿ. ಹೆಣ್ಣಿನ ಸಂದರ್ಭದಲ್ಲಿ ಹೆಚ್ಚಾಗಿ ಅದು ದೇಹಕ್ಕೆ ಸಂಬಂಧಿಸಿದ್ದು. ಪಾತಿವ್ರತ್ಯವನ್ನು ಸಾರುವ ಹೆಣ್ಣು ಸತ್ತ ಗಂಡನನ್ನು ಬದುಕಿಸಬಲ್ಲಳು. ಹಾವನ್ನು ಸಿಂಬಿಯನ್ನಾಗಿಸಿ ಮರಳಿನಲ್ಲಿ ಮಡಿಕೆಯನ್ನು ಮಾಡಬಲ್ಲಳು ಎಂಬಂತಹ ಆದರ್ಶದ ಮಾತುಗಳ ಮೂಲಕ ಅದೇ ದೃಷ್ಟಿಯಿಂದ ಯೋಚಿಸುವಂತೆ ಮಾಡಿದೆ. ಆದರೆ ಈ ಆದರ್ಶದ ಮಾತು ಪುರುಷರಿಗೆ ಹೊರತಾಗಿರುವುದು ವಿಪರ್ಯಾಸವಾಗಿದೆ. ಪುರುಷರ ಪಾವಿತ್ರ್ಯವನ್ನು ಯಾರೂ ಸೂಕ್ಷ್ಮವಾಗಿ ಪರಿಗಣಿಸುವುದಿಲ್ಲ. ಅದು ಅವರ ಸಹಜ ಸ್ವಭಾವವೆಂತಲೂ ಅಥವಾ ಕ್ಷಮೆಗೆ ಅರ್ಹವಾದ ಅಪರಾಧವೆಂತಲೂ ಭಾವಿಸುವುದೇ ಹೆಚ್ಚು. ಪುರುಷ ದೃಷ್ಟಿಕೋನವೇ ಹೆಣ್ಣಿಗೆ ಪಾವಿತ್ರ್ಯದ ಮೌಲ್ಯವನ್ನು ರೂಪಿಸಿದೆ ಹಾಗೂ ತನಗೆ ಅನುಕೂಲವಾಗುವಂತೆ ಮಾರ್ಪಡಿಸಿಕೊಂಡಿದೆ. ಪಾವಿತ್ರ್ಯತೆಯು ನೈತಿಕವಾಗಿ ಇರಬೇಕಾದ ಸಂಗತಿಯೆನ್ನುವುದನ್ನು ಅಲ್ಲಗಳೆಯಲಾಗದು. ಆದರೆ ಅದನ್ನು ಏಮ್ಮುಖವಾಗಿ ಹೇರುವ ಪ್ರಯತ್ನವನ್ನು ಪುರುಷಪ್ರಧಾನ ಸಮಾಜವು ಮಾಡುತ್ತಿದೆ. ವಿಧೇಯತೆ, ಪತಿನಿಷ್ಠೆ, ಪರಾವಲಂಬನೆ ಮುಂತಾದವನ್ನು ಒಳಗೊಂಡ ಸೀಮಿತ ದೃಷ್ಟಿಕೋನವು ಹೆಣ್ಣಿನ ವ್ಯಕ್ತಿತ್ವವನ್ನು ವಿಶಾಲವಾದ ಸಾಮಾಜಿಕ ಪರಿಸರದಲ್ಲಿ ಬೆಳೆಯಲು ಅವಕಾಶ ಮಾಡಿಕೊಡುವುದಿಲ್ಲ. ಅವಳನ್ನು ಸಮಾನಳಾಗಿ ಕಾಣದ ಮನೋಭಾವವೇ ಇಂತಹ ಮೌಲ್ಯಗಳನ್ನು ಸೃಷ್ಟಿಸಿರುವುದು. ಈ ಕಾರಣದಿಂದಾಗಿಯೇ ಹೆಣ್ಣು ಪುರುಷ ರಚಿತ ಹಿಂಜರಿಕೆ ಕಟ್ಟುಪಾಡುಗಳಿಗೆ ಬದ್ಧಳಾಗಿ ನಡೆಯುವಂತಾಗಿದೆ. ಇಂತಹ ವಿಚಾರಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಕಾಣಸಿಗುತ್ತವೆ.

ಅದರಲ್ಲೂ ಜನಪದ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಮಾದರಿಗಳು ಮೂರು ರೀತಿಯಲ್ಲಿ ಕಾಣಸಿಗುತ್ತವೆ. ಮೊದಲನೆಯದು ಗಂಡಿನ ಅಧಿಕಾರವನ್ನು ಯಾವುದೇ ವಿರೋಧವಿಲ್ಲದೆ ಯಥಾವತ್ತಾಗಿ ಸ್ವೀಕರಿಸುವುದು. ಎರಡನೆಯದು ಗಂಡಿನ ಅಧಿಕಾರವನ್ನು ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಮಾದರಿ, ಮೂರನೆಯದು ಗಂಡಿನ ಅಧಿಕಾರದ ವ್ಯಾಪ್ತಿಯನ್ನು ಮೀರಿ ಸ್ವಾಭಿಮಾನಿಯಾಗಿ ನಿಲ್ಲುವುದು. ಹೀಗೆ ಹೆಣ್ಣಿನ ವಿಭಿನ್ನ ಮಾದರಿಗಳನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಜನಪದ ಸಾಹಿತ್ಯದಲ್ಲಿಯೇ ಆಗಲಿ, ಕನ್ನಡ ಸಾಹಿತ್ಯದಲ್ಲಿಯೇ ಆಗಲಿ ಮಹಿಳಾ ಧ್ವನಿ ಇಲ್ಲದ ಸಾಹಿತ್ಯ ಅಪೂರ್ಣವಾದುದು. ಹಾಗಾಗಿ ಹೆಣ್ಣು ಯಾವುದೇ ಕ್ಷೇತ್ರದಲ್ಲಿಯೂ ಪುರುಷನಿಗೆ ಹಿಂದೆ ಬಿದ್ದಿಲ್ಲ ಎಂದು ಹೇಳಬಹುದಾಗಿದೆ. ನಿರಂತರವಾಗಿ ಶ್ರಮಜೀವಿಯಾಗಿ ಗುರುತಿಸಿಕೊಂಡ ಹೆಣ್ಣು ದಿನವಿಡೀ ತನ್ನ ಸಂಸಾರಕ್ಕೆ ತನ್ನ ಸುಖವನ್ನೂ ಮರೆತು ದುಡಿಯುತ್ತಿರುತ್ತಾಳೆ.

ಪಿತೃಪ್ರಧಾನ ವ್ಯವಸ್ಥೆಯ ನಡೆಗಳು ತನ್ನ ಅಸ್ತಿತ್ವವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿವೆ ಎಂಬುದು ಅರಿವಾದಾಗ ಅದನ್ನು ವಿರೋಧಿಸುವ ಹಲವು ಸ್ತ್ರೀ ಮಾದರಿಗಳನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಇಂತಹ ಸ್ತ್ರೀ ಮಾದರಿಗಳು ಸಮಾಜ, ಸಂಸ್ಕೃತಿ, ಪರಂಪರೆಗಳೊಂದಿಗೆ ಹಾಸುಹೊಕ್ಕಾಗಿ ಬೆರೆತುಹೋಗಿರುವ ಲಿಂಗ ಪೂರ್ವಗ್ರಹವನ್ನು ಒಡೆದು ಹೊಸ ಬದುಕನ್ನು ಕಟ್ಟುವ ನೆಲೆಯಲ್ಲಿ ತನ್ನ ಅಂತಃಸತ್ವ ಹಾಗೂ ಅಸ್ಮಿತೆಯನ್ನು ಕಂಡುಕೊಳ್ಳುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಜನಪದ ಮಹಾಕಾವ್ಯಗಳಲ್ಲಿ ಹೆಣ್ಣಿನ ಶೀಲ ಹಾಗೂ ಪಾವಿತ್ರ್ಯಕ್ಕೆ ಹೆಚ್ಚಿನ ಮಾನ್ಯತೆ ಕೊಟ್ಟಿದ್ದರೂ ಕೆಲವು ಕಡೆಗಳಲ್ಲಿ ಹೆಣ್ಣಿನ ಶೋಷಣೆಯ ವಿರುದ್ಧದ ಪ್ರತಿಭಟನೆಯನ್ನು ಹಾಗೂ ಸಮಾನತೆಗೆ ಪ್ರಾಶಸ್ತ್ಯ ಕೊಟ್ಟಿರುವುದನ್ನು ಕಾಣಬಹುದು. ಹೆಣ್ಣು ಕ್ರಿಯಾಶೀಲ ಶಕ್ತಿಯಾಗಿ ತನ್ನ ಬದುಕಿನ ನಿರ್ಧಾರವನ್ನು ತೆಗೆದುಕೊಳ್ಳುವ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವ ಶಕ್ತಿಯನ್ನು ಹೊಂದಿದ್ದಾಳೆ. ತನ್ನ ಕೌಟುಂಬಿಕ ವಲಯದಲ್ಲಿ ಹೆಣ್ಣು ಸಾಕಷ್ಟು ಸಹನಶೀಲಳಾಗಿರುವಂತೆ ಸಮಯ ಸಂದರ್ಭದಲ್ಲಿ ಒದಗಿಬರುವ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸುವ ಕುಶಲಳೂ ಆಗಿದ್ದಾಳೆ. ತನ್ನ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ಸಂದರ್ಭದಲ್ಲಿ ಪ್ರತಿಭಟಿಸುವ ಪ್ರತಿರೋಧ ವ್ಯಕ್ತಪಡಿಸುವ ಪಾತ್ರಗಳು ಜನಪದ ಕಾವ್ಯ, ಕಥನ ಕವನಗಳಲ್ಲಿ ಕಾಣಸಿಗುತ್ತವೆ. ಈರೋಬಿಯಿಂದ ಹಿಡಿದು ಉತ್ತರದೇವಿ, ಭಾಗೀರತಿ, ಕೆಂಚಮ್ಮ ಹೀಗೆ ಅನೇಕ ಸ್ತ್ರೀಪಾತ್ರಗಳು ಸಿಗುತ್ತವೆ. ಆದರೆ ಈ ಎಲ್ಲ ಪಾತ್ರಗಳಿಗಿಂತ ವಿಭಿನ್ನವಾಗಿ ಸ್ವಾಯತ್ತ ಅಭಿವ್ಯಕ್ತಿಯನ್ನು ಮೆರೆವ ಧೀಮಂತ ಮಹಿಳೆ ಎಂದರೆ ಮಲೆಮಾದೇಶ್ವರ ಮಹಾಕಾವ್ಯದ ಶರಣೆ ಸಂಕಮ್ಮ. ಸಾಮಾನ್ಯವಾಗಿ ಜನಪದ ಸ್ತ್ರೀಯರು ಸರಳ ಸ್ವಭಾವದ ಪತಿಭಕ್ತೆಯರಾಗಿದ್ದು ಗಂಡನ ಅನುಮಾನಗಳಿಗೆ ಶರಣಾದವರು, ಪಲಾಯನವಾದವರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಆದರೆ ಸಂಕಮ್ಮ ಗಂಡನಿಂದ ಎದುರಾದ ವಿನಾಶಕಾರಿ ಸವಾಲಿನ ವಿರುದ್ಧ ಸಡ್ಡು ಹೊಡೆದು ನಿಂತ ದಿಟ್ಟ ಮಹಿಳೆಯಾಗಿದ್ದಾಳೆ. ಗಂಡಿನ ಅಹಮಿಕೆಯ ವಿರುದ್ಧ ಹೆಣ್ಣಿನ ಪ್ರತಿಭಟನೆಯ ಸ್ವರೂಪವನ್ನು ಸಂಕಮ್ಮಳಲ್ಲಿ ಕಾಣಬಹುದು. ಹೆಂಡತಿಯ ಭಾಷೆಗಾಗಿ ಆಗ್ರಹಿಸುವ ಗಂಡ ಹಾಗೂ ಅವನು ಕೊಡುವ ಯಾವುದೇ ರೀತಿಯ ಚಿತ್ರಹಿಂಸೆಗೂ ತಗ್ಗದೆ, ತನ್ನ ಶೀಲ ಹಾಗೂ ವ್ಯಕ್ತಿತ್ವದ ಬಗ್ಗೆ ಪ್ರಶ್ನೆ ಎದುರಾದಾಗ ತನ್ನ ನಿರ್ಧಾರಕ್ಕೆ ಬದ್ಧಳಾಗಿ ವಿನಾಶಕಾರಿ ಸವಾಲುಗಳನ್ನು ಎದುರಿಸಿ ನಿಂತು ತನ್ನ ಅಚಲವಾದ ಸ್ವಾಭಿಮಾನವನ್ನು ಪ್ರಕಟಿಸುವ ಒಬ್ಬ ಸ್ತ್ರೀಯಾಗಿ, ನಾಯಕಿಯಾಗಿ ಸಂಕಮ್ಮ ಕಂಡುಬರುತ್ತಾಳೆ.

ಮಲೆಮಾದೇಶ್ವರ ಮಹಾಕಾವ್ಯದಲ್ಲಿ ಸಂಕಮ್ಮಳ ಸಾಲು ಭಾಗದಲ್ಲಿ ಮುಖ್ಯವಾಗಿ ಸ್ತ್ರೀ ಸಂವೇದನೆಯ ಹೊಳಹು ಕಾಣಸಿಗುತ್ತದೆ. ಸಂಕಮ್ಮ ಪುರುಷ ಸ್ಥಾಪಿತ ಸಮಾಜದಲ್ಲಿ ಮೌನ ಮುರಿಯುವ ದಿಟ್ಟ ಮಹಿಳೆಯಾಗಿ ಕಂಡುಬರುತ್ತಾಳೆ. ಕಾಡುಕುರುಬ ಸೋಲಿಗ ಜನಾಂಗದ ನೀಲೇಗೌಡ ಹಾಗೂ ಸಂಕಮ್ಮರಿಗೆ ಮದುವೆಯಾಗಿ ಹಲವಾರು ವರ್ಷಗಳಾದರೂ ಮಕ್ಕಳಾಗದ್ದರಿಂದ ಮನೆಯಲ್ಲಿ ಎಲ್ಲರೂ 'ಬಂಜೆ' ಎಂದು ಹಂಗಿಸುತ್ತಾರೆ. ಪುರುಷ ಪ್ರಧಾನ ಸಮಾಜವು ತನ್ನ ಜೀವಂತಿಕೆಯನ್ನು ಕಾಯ್ದಿಟ್ಟುಕೊಳ್ಳಲು ಮಹಿಳೆಯ ಜನನ ಕ್ಷಮತೆಯ ಬಗ್ಗೆ ಆಸ್ಥೆಯನ್ನು ಹೊಂದಿರುತ್ತದೆ. ಇಂಥ ನಿಸರ್ಗ ಸಹಜವಾದ ಬಯಕೆಯನ್ನು ಪುರುಷ ತನ್ನ ವೈಯಕ್ತಿಕ ಆಸೆಯನ್ನಾಗಿ ಮಾಡಿಕೊಂಡಿರುವನು. ಸಮಾಜ ಮುಂದುವರಿಕೆಗಿಂತ, ಮಹಿಳೆಯ ಬಯಕೆಗಿಂತ ತನ್ನ ವಾರಸುದಾರನನ್ನು ಹೊಂದುವ ಆತನ ಬಯಕೆಯೇ ಪ್ರಧಾನವಾಗಿ ನಿಲ್ಲುತ್ತದೆ. ಬಂಜೆತನಕ್ಕೆ ತಾನೂ ಕಾರಣನಿರಬಹುದು ಎನ್ನುವ ಆಂತರ್ಯದ ದನಿ ಬಲವಾಗಿ ಕೇಳಿಸಿದ್ದರಿಂದಲೇ ಇರಬಹುದು ನೀಲಯ್ಯ ಹೆಂಡತಿಯೊಂದಿಗೆ ಪ್ರತ್ಯೇಕವಾದ ಮನೆಯನ್ನು ಮಾಡಿ ವಾಸಿಸತೊಡಗುತ್ತಾನೆ. ಒಂದು ನೋವಿನಿಂದ ಬಿಡುಗಡೆ ಬಯಸಿ ಬೇರೆಯಾದ ಸಂಕಮ್ಮಳ ಜೀವನ ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಭಾಸವಾಗುತ್ತದೆ. ಸೋಲಿಗರ ಪದ್ಧತಿಯಲ್ಲಿ ಏಳೂರ ಗಡಿಕಾರರು ಒಂದೆಡೆ ಸೇರಿ ಹೆಜ್ಜೇನು ಮಲೆಗೆ ಹೋಗಬೇಕೆಂದೂ, ಮನೆಗೊಬ್ಬರು ಬರಬೇಕೆಂದು ತೀರ್ಮಾನಿಸುತ್ತಾರೆ. ಅದರಂತೆ ಪ್ರತ್ಯೇಕ ಮನೆ ಮಾಡಿದ್ದರಿಂದ ನೀಲೇಗೌಡ ಕುಲದ ಹಿರಿಯರ ಆದೇಶದಂತೆ ಒಂಬತ್ತು ತಿಂಗಳ ಬೇ–ಟೆಗೆ ಹೊರಡಬೇಕಾಗುತ್ತದೆ. ಹಾಗೆ ಹೊರಡಬೇಕಾದ ಸಂದರ್ಭ ಬಂದಾಗ ನೀಲೇಗೌಡ ಮಡದಿ ಒಬ್ಬಳನ್ನೇ ಬಿಟ್ಟು ಹೋಗಲಾರದೆ ಕುಲದವರ ಒಟ್ಟಿಗೆ ಹೋಗದೆಯೂ ಇರಲಾರದೆ ಸುಂದರಿಯಾದ ಹೆಂಡತಿಯ ಪಾತಿವ್ರತ್ಯ ಉಳಿಯುವ ಬಗ್ಗೆ ಆತಂಕ ಪಡುತ್ತಾನೆ. ಫಲಾಪೇಕ್ಷೆಯ ತೀವ್ರ ಹಂಬಲದಲ್ಲಿರುವ ಸಂಕಮ್ಮ ಸಹಜವಾಗಿ ಯಾರಿಗಾದರೂ ತನ್ನ ಅನುಪಸ್ಥಿತಿಯಲ್ಲಿ ಒಲಿದುಬಿಟ್ಟರೆ ಎಂಬ ಕೆಟ್ಟ ಅನುಮಾನ ಅವನಲ್ಲಿ ಮೂಡುತ್ತದೆ. ಅದಕ್ಕಾಗಿ ಅವನು ಸಂಕಮ್ಮನಲ್ಲಿ ಭಾಷೆ ಕೊಡುವಂತೆ ಕೇಳುತ್ತಾನೆ. ಆದರೆ ಆಕೆಯು 'ವನಾ ಮೀರಿದ ಪಕ್ಷಿ, ಕುಲಾ ಮೀರಿದ ಮನಸು ಎರಡೂ ಒಂದಲ್ವ ಸ್ವಾಮಿ. ನನ್ನ ನೀವು ಬುಟ್ಟರು ನಿಮ್ಮ ಕುಲವನ್ನು ನೀವು ಬುಡಬ್ಯಾಡಿ' ಎಂದು ಉತ್ತರಿಸುತ್ತಾಳೆ. ಆ ಮಾತಿನಿಂದ ಕೋಪಗೊಂಡ ನೀಲೇಗೌಡ ಪತ್ನಿಯ ಶೀಲದ ಬಗ್ಗೆ ಸಂಶಯವನ್ನು ತಾಳುತ್ತಾನೆ. ಹೆಣ್ಣನ್ನು ಸೀಮಿತ ಅವಕಾಶದಲ್ಲಿರಿಸಿ ಪುರುಷರು ಯಜಮಾನಿಕೆಯಿಂದ ಅಧಿಕಾರವನ್ನು ಚಲಾಯಿಸುವ ವಿಕೃತ ಮನಸ್ಥಿತಿಯನ್ನು

ನೀಲೇಗೌಡನ ಮೂಲಕ ಕಾಣಬಹುದಾಗಿದೆ. ಅದಕ್ಕಾಗಿ ಸಂಕಮ್ಮನಲ್ಲಿ ಭಾಷೆ ಕೊಡುವಂತೆ ಕೇಳುತ್ತಾನೆ. ಇಲ್ಲಿಂದ ಕಥೆ ಬೇರೊಂದು ತಿರುವನ್ನು ಪಡೆದುಕೊಂಡು ಅವಳ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗಿ ನಿಲ್ಲುತ್ತದೆ. ಆದರೆ ಅವಳು ಒಪ್ಪುವುದಿಲ್ಲ. 'ಬಂಜೆ' ಎಂಬ ಪದಕ್ಕಿಂತಲೂ ಶೀಲವನ್ನು ಶಂಕಿಸುವ ಮಾತು ಅವಳಿಗೆ ಹೆಚ್ಚು ಆಘಾತವನ್ನುಂಟುಮಾಡುತ್ತದೆ. ಯಾವುದೇ ದೋಷವಿಲ್ಲದ ತನ್ನನ್ನು ಅವಮಾನಿಸುವ ಗಂಡನಿಗೆ ಭಾಷೆಕೊಡಲು ನಿರಾಕರಿಸುತ್ತಾಳೆ. ಅನುಮಾನ ಸರಿಯಲ್ಲ ಎನ್ನುತ್ತಾ ವಾದದಲ್ಲಿ ಗಂಡನನ್ನು ಕಟ್ಟಿಹಾಕುತ್ತಾಳೆ. 'ನಾನೆಂದಿಗೂ ಬಲಗೈ ಭಾಷೆ ಕೊಡುವಂಥ ಮಗಳಲ್ಲ ಹೋಗೋ ಯಜಮಾನ' ಎಂದು ಏರುದನಿಯಲ್ಲಿ ಮಾತನಾಡುತ್ತಾಳೆ. ಪುರುಷಪ್ರಧಾನ ಸಮಾಜದ ಕಟ್ಟುಪಾಡಿನ ಮೌಲ್ಯಗಳನ್ನು ಸಂಕಮ್ಮ ತೀವ್ರವಾಗಿ ವಿರೋಧಿಸುತ್ತಾಳೆ. ಗಂಡನಿಗೆ ತಿಳುವಳಿಕೆ ಮೂಡಿಸಲು ಯತ್ನಿಸುವ ಸಂಕಮ್ಮಳ ಧ್ವನಿಯಲ್ಲಿ ಪ್ರತಿರೋಧದ ಅಭಿವ್ಯಕ್ತಿಯು ಬಹು ಮಾರ್ಮಿಕವಾಗಿದೆ.

**'ಕಳನಿಲ್ಲ ಕಳವರಿಗೆ ಒಳಗಾಗನಿಲ್ಲ**
**ಪರಪುರುಷರ ಕಣ್ಣೆತ್ತು ನೋಡ್ನಿಲ್ಲ**
**ಯಜಮಾನರೆ ನಾನು ಭಾಷೆ ಕೊಡಬೇಕಾ ನಿಮಗೆ**
**ಅಯ್ಯಾ ನನ್ನಲ್ಲಿ ತಪ್ಪ ತೋರಯ್ಯ ನೀನು ಆಮೇಲೆ ಭಾಷೆ ಕೇಳಯ್ಯ'**

ಎಂದು ನುಡಿಯುತ್ತಾಳೆ. ಇಲ್ಲಿ ಸತಿಪತಿಯರ ನಡುವೆ ಪರಸ್ಪರ ನಂಬಿಕೆಯೇ ಪ್ರಮಾಣ ಎಂಬುದು ವಿದಿತವಾಗುತ್ತದೆ. ಇದರಿಂದ ಕೋಪಗೊಂಡ ನೀಲಯ್ಯನು ನಿನ್ನನ್ನು ಒಂಟಿಯಾಗಿ ಬಿಟ್ಟು ಹೋಗಲಾರೆ ಏಕೆಂದರೆ ನೀನು ಒಬ್ಬಳೆ ಇರುವಾಗ ಪರಪುರುಷರು ನಿನ್ನ ಮೇಲೆ ಕಣ್ಣಿಡುತ್ತಾರೆ. ಅದಕ್ಕಾಗಿ ಬಲಗೈ ಭಾಷೆಯನ್ನು ಕೊಡು ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಸಂಕಮ್ಮಳು ದಿಟ್ಟತನದಿಂದ ಹೀಗೆ ಉತ್ತರಿಸುತ್ತಾಳೆ.

**'ಕೇಳಿ ಯಜಮಾನರೆ**
**ಭೂಮಿತಾಯಿ ಆಕಾಸವೇಣಿ ಸಾಕ್ಷಿಯಾಗಿ**
**ಪತಿಗೆ ಭಾಷೆ ಕೊಡುವುದಿಲ್ಲ**
**ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ'**

ಎಂದು ಹೇಳುತ್ತಾಳೆ. ಹೆಂಡತಿಯ ಪಾತಿವ್ರತ್ಯದ ಬಗೆಗೆ ಸಂಶಯ ಪಡುವ ನೀಲೇಗೌಡನಿಗೆ ಹೆಂಡತಿ ನೀಡುವ ಭಾಷೆಯ ಮೇಲೆ ಅಪಾರ ನಂಬಿಕೆಯಿದೆ. ಆಕೆಯು ಭಾಷೆಯನ್ನು ನೀಡಿಯೂ ತಾನಿಲ್ಲದಾಗ ಪರಪುರುಷರಿಗೆ ಒಲಿದರೆ? ಎಂಬ ಸಂಶಯಕ್ಕಿಂತ ಮಾತಿಗೆ ತಪ್ಪಿ ನಡೆಯಳು ಎಂಬ ನಂಬಿಕೆಯಿದೆ. ದೋಷವಿಲ್ಲದ ತನ್ನನ್ನು ಶಂಕಿಸುವ ನೀಲಯ್ಯನನ್ನು ತೊರೆಯಲು ಸಿದ್ಧಳಾಗುತ್ತಳಾದರೂ ಭಾಷೆ ನೀಡುವ ಮೂಲಕ ಕಟ್ಟುಪಾಡುಗಳಿಗೆ ಒಳಗಾಗಲು ಬಯಸುವುದಿಲ್ಲ. ಅನ್ಯಾಯ, ಹಿಂಸೆಯಿಂದ ರೋಸಿಹೋದ ಆಕೆ ಗಂಡನ ವಿರುದ್ಧ ಪ್ರತಿಭಟಿಸುವುದನ್ನು ಕಂಡರೆ ಅಂದು ಸ್ತ್ರೀಯರಲ್ಲಿ ವ್ಯವಸ್ಥೆಯ ವಿರುದ್ಧ ಮೌನಮುರಿಯುವ ಮನೋಭಾವನೆಗಳು ರೂಪುಗೊಳ್ಳುತ್ತಿತ್ತು ಎಂಬುದನ್ನು ಗುರುತಿಸಬಹುದಾಗಿದೆ. ಮದುವೆಯ ಬಾಂಧವ್ಯವು ಪರಸ್ಪರ ವಿಶ್ವಾಸಪೂರ್ವಕವಾಗಿ ಕೂಡಿ ಬಾಳುವ ಸಂಕೇತವೇ ಹೊರತು ಬಂಧನವಲ್ಲ ಎಂಬುದು ಸಂಕಮ್ಮಳ ಮಾತಿನಲ್ಲಿ ತಿಳಿಯುತ್ತದೆ.

ಪತ್ನಿಯಾದವಳು ತನ್ನ ಇಷ್ಟದಂತೆ ನಡೆದುಕೊಳ್ಳಬೇಕು; ತನ್ನ ಮಾತು ಕೇಳಬೇಕು. ತಪ್ಪು ಸರಿ ಪ್ರಶ್ನಿಸದೆ ತನ್ನ ಅಣತಿಯನ್ನು ಮೂಕವಾಗಿ ಪಾಲಿಸಬೇಕು. ಪ್ರಶ್ನಿಸಿದರೆ ಅಥವಾ ಪ್ರತಿಭಟಿಸಿದರೆ ಆಕೆಗೆ ನೀಡುವ ಶಿಕ್ಷೆ ಮನಕಲುಕುವಂಥದ್ದು. ಪತ್ನಿಯ ವಿರೋಧದ ಮಾತಿನಿಂದ ಕುಪಿತಗೊಂಡ ನೀಲೇಗೌಡ ವಿವೇಕವನ್ನು ಮರೆತು ಅತಿರೇಕದ ಕ್ರೌರ್ಯವನ್ನು ಮೆರೆಯುತ್ತಾನೆ. ಒಂದಕ್ಕಿಂತ ಇನ್ನೊಂದು ಕಠೋರ ಪರೀಕ್ಷೆಗಳನ್ನು ಒಡ್ಡುತ್ತಾನೆ. ಈ ರೀತಿಯ ಹಿಂಸೆ ಬೇರಾವ ಕಾವ್ಯದಲ್ಲೂ ಕಾಣಸಿಗದು. ಸಂಕಮ್ಮ ತನ್ನ ಮಾತನ್ನು ಮೀರಿ ದಿಟ್ಟವಾಗಿ ಉತ್ತರಿಸುವುದು ನೀಲಯ್ಯನ ಅಹಂಮಿಕೆಗೆ ಪೆಟ್ಟು ಬೀಳುತ್ತದೆ. ಇವಳನ್ನು ಹೀಗೆಯೇ ಬಿಟ್ಟು ಹೋದರೆ ಯಾರಾದರೂ ಅಪಹರಿಸಿಕೊಂಡು ಹೋಗಬಹುದೆಂದು ಮಾಟ ವಿದ್ಯೆಯಿಂದ ಬಂಧಿಸಿಟ್ಟು ತಾನು ಬರುವವರೆಗೆ ಅಲುಗಾಡದ ಹಾಗೆ ಮಲಗಿರುವಂತೆ ಅವಳಿಗೆ ದಿಗ್ಬಂಧನ ಹಾಕಿ ತನ್ನ ಪೈಶಾಚಿಕ ಕೃತ್ಯ ಮೆರೆಯುತ್ತಾನೆ. ಈ ಚಿತ್ರಹಿಂಸೆಗೆ ಮುಖ್ಯ ಕಾರಣವಾಗಿದ್ದು ಸಂಕಮ್ಮಳ ಚೆಲುವು. ತಾನಿರದ ಸಂದರ್ಭದಲ್ಲಿ ಪರಪುರುಷರಿಗೆ ಒಲಿಯಬಹುದೆಂಬ ಭ್ರಮೆಗೆ ಒಳಗಾಗಿದ್ದಾನೆ. ಅದು ಅಂದಿನ ಕಾಲಘಟ್ಟದ ಅನಕ್ಷರಸ್ಥ ಮಹಿಳೆಯರ ಶೋಚನೀಯ ಸ್ಥಿತಿ ಎನಿಸಿದರೂ ಇಂದಿಗೂ ಸಹ ಹೆಣ್ಣಿನ ಪರಿಸ್ಥಿತಿಯು ಇದಕ್ಕೆ ಹೊರತಾಗಿಲ್ಲ ಅನಿಸುತ್ತದೆ. ಕೆಲವು ದುಷ್ಟ ಪುರುಷರ ದುಷ್ಕೃತ್ಯಗಳು ಹೆಣ್ಣನ್ನು ಸಮಾಜದಲ್ಲಿ ನೆಮ್ಮದಿಯಿಂದ ಬದುಕದಂತೆ ಮಾಡಿಬಿಟ್ಟಿವೆ. ಕಾಮುಕ ಪುರುಷರ ಭೀತಿಯೂ ನೀಲೇಗೌಡನಲ್ಲಿ ಬಲಗೊಂಡಿ–

ISSN: 2320-9941


ದೆ. ಕೊನೆಗೂ ಭಾಷೆಯನ್ನು ಪಡೆಯಲಾರದ ನೀಲಯ್ಯ ಮಾಟದ ಕ್ರಿಯೆಗಳಿಂದ ಅವಳನ್ನು ಬಂಧಿಸಿ ಕುಲದ ಬೇಟೆಗೆ ತೆರಳುತ್ತಾನೆ. ಕುಲದ ಬೇಟೆ ಹಾಗೂ ಸೋಲಿಗರ ಆಹಾರ ಸಂಗ್ರಹಣೆಯ ರೀತಿನೀತಿಗಳು ಬುಡಕಟ್ಟು ಸಮಾಜವೊಂದರ ಜೀವನ ವಿಧಾನದ ಮೇಲೆ ಬೆಳಕು ಚೆಲ್ಲುತ್ತವೆ.

ತದನಂತರದಲ್ಲಿ ಸಂಕಮ್ಮ ಮಾದೇಶ್ವರನ ಅನುಗ್ರಹದಿಂದ ನೀಲೇಗೌಡನ ಮಾಟ ವಿದ್ಯೆಯನ್ನು ಭೇದಿಸುವಲ್ಲಿ ಯಶಸ್ವಿಯಾಗುತ್ತಾಳೆ. ಹೊರ ಜಗತ್ತಿನ ಸಂಪರ್ಕದಿಂದ ಆಕೆಯನ್ನು ಪ್ರತ್ಯೇಕವಾಗಿಸಿ ನಿರ್ಬಂಧಗಳನ್ನು ಹೇರಿದ್ದರೂ ಅದೆಲ್ಲದರ ಆಚೆ ಅವಳು ಪವಾಡ ಸದೃಶ ರೀತಿಯಲ್ಲಿ ಮಕ್ಕಳಿಲ್ಲದ ಕೊರತೆಯನ್ನು ನೀಗಿಸಿಕೊಳ್ಳುತ್ತಾಳೆ. ಈ ಜನಪದ ಮಹಾಕಾವ್ಯದಲ್ಲಿ ಪುರುಷಾಧಿಕಾರವನ್ನು ನಿರಾಕರಿಸುವ ಸಂಕಮ್ಮ ಮಾದೇಶ್ವರನ ಕೃಪೆಯಿಂದ ಮಗುವನ್ನು ಪಡೆಯುವ ಕ್ರಿಯೆ ಸಾಂಕೇತಿಕವಾಗಿದೆ. ಹೀಗೆ ಈ ಮಹಾಕಾವ್ಯವು ಜನಪದ ಹೆಣ್ಣುಮಗಳ ಮನದಾಳದ ಇಂಗಿತ ಹಾಗೂ ಪ್ರತಿರೋಧದ ಹಿಂದಿನ ತತ್ವವನ್ನು ಎತ್ತಿಹಿಡಿದಿದೆ. ಈ ಮೂಲಕ ತನ್ನ ಸಂಸಾರವನ್ನು ಒಲಿಸಿಕೊಂಡು ತನ್ನ ಅಸ್ಮಿತೆಯನ್ನು ಸಂಕಮ್ಮ ಸ್ಥಾಪಿಸುತ್ತಾಳೆ. ಬಂಜೆತನವನ್ನು ನೀಗಿಕೊಂಡು ಮಕ್ಕಳನ್ನು ಹಡೆಯುತ್ತಾಳೆ. ಜೇನುಮಲೆಯಿಂದ ಮರಳಿ ಬಂದ ನೀಲಯ್ಯ 'ಯಾವೋನೊ ಸಾವ್ಯಾತಿ ಮಡಿಕೊಂಡು ಅರ್ಮನೆ ಕಟ್ಟುಸ್ಕೊಂಡಿದ್ದಿಯೇ?' ಎಂದು ಸಂಕಮ್ಮಳನ್ನು ಆಕ್ಷೇಪಿಸುತ್ತಾನೆ. ಸಂಕಮ್ಮಳ ಪಾತಿವ್ರತ್ಯದ ಪರೀಕ್ಷೆಗಾಗಿ ಅನೇಕ ದಂಡನೆ ದಿವ್ಯಗಳನ್ನು ನಡೆಸುತ್ತಾನೆ. ಎಲ್ಲ ಸಂದರ್ಭದಲ್ಲಿಯೂ ಸಂಕಮ್ಮ ಗೆಲ್ಲುತ್ತಾಳೆ. ಸಂಕಮ್ಮಳ ಭಕ್ತಿ ತಾಳ್ಮೆಯ ಪ್ರಭಾವದಿಂದ ನೀಲೇಗೌಡನ ಮನಃಪರಿವರ್ತನೆಯಾಗುತ್ತದೆ. ಇಲ್ಲಿ ಸಂಕಮ್ಮಳು ಸ್ಥಾಪಿತ ವ್ಯವಸ್ಥೆಯನ್ನು ಪ್ರಶ್ನಿಸುವ ಹಂತವನ್ನು ತಲುಪಿರುವುದನ್ನು ಗಮನಿಸಬಹುದಾಗಿದೆ. ಅನ್ಯಾಯವನ್ನು ಪ್ರತಿಭಟಿಸುವ ಸ್ವಾಭಿಮಾನವನ್ನು ರಕ್ಷಿಸಿಕೊಳ್ಳುವ ಹೆಣ್ಣುಕುಲದ ಪ್ರತೀಕವಾಗಿ ಸಂಕಮ್ಮ ಕಂಡುಬರುತ್ತಾಳೆ. ಪಾತಿವ್ರತ್ಯದ ಪರಿಕಲ್ಪನೆಯೆಂಬ ಚೌಕಟ್ಟನ್ನು ಮೀರಿ ಮಕ್ಕಳನ್ನು ಪಡೆಯುವ ಸಂಕಮ್ಮನ ನಿಲುವು ಸಮಾಜ ನಿರ್ಮಿತ ವ್ಯವಸ್ಥೆಯಿಂದ ಮುಕ್ತಳಾಗುವ ಹಾತೊರಿಕೆಯ ಜೊತೆಯಲ್ಲಿ ನೀಲಯ್ಯನ ಸಣ್ಣ ಮನಸ್ಥಿತಿಗೆ ಅವಳು ನೀಡುವ ಪ್ರತಿಭಟನೆಯ ಧೋರಣೆಯೂ ಹೌದು.

**ಮಹಾಕಾವ್ಯ ಪ್ರಸ್ತುತಪಡಿಸುವ ಪ್ರಗತಿಪರ ದೃಷ್ಟಿಕೋನ**

ಜನಪದ ಮಹಾಕಾವ್ಯಗಳು ಬದುಕಿಗೆ ಸಂಬಂಧಿಸಿದ ಹಲವಾರು ಸತ್ವಶಾಲಿ ಅಂಶಗಳನ್ನು ತನ್ನೊಳಗೆ ಹಿಡಿದಿಟ್ಟುಕೊಂಡಿರುತ್ತವೆ. ಮನುಷ್ಯನ ದಿನನಿತ್ಯದ ಬದುಕಿನ ಕ್ರಮ, ಆಚಾರ–ವಿಚಾರ, ಸಂಪ್ರದಾಯ, ನಂಬಿಕೆಗಳು ಇಲ್ಲಿ ದಟ್ಟವಾಗಿ ಹರಡಿಕೊಂಡಿರುತ್ತವೆ. ಹಾಗೆಯೇ ಅವುಗಳಲ್ಲಿನ ವಿಶಿಷ್ಟತೆಯನ್ನು ಶೋಧಿಸುವುದೂ ಸಹ ಮುಖ್ಯವಾಗುತ್ತದೆ. ಜನಪದ ಮಹಾಕಾವ್ಯಗಳು ಸಾಂಸ್ಕೃತಿಕ ನಾಯಕರನ್ನು, ಜನಾಂಗಗಳ ಸಾಹಸಗಾಥೆಗಳನ್ನು ಒಳಗೊಂಡಿದ್ದು ಆಯಾ ಪ್ರಾದೇಶಿಕ ವಿಚಾರಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಜನಪದ ಮಹಾಕಾವ್ಯಗಳಲ್ಲಿ ಅಭಿವ್ಯಕ್ತಗೊಳ್ಳುವ ವಿಭಿನ್ನ ಪಾತ್ರಗಳು ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತವೆ. ಜನಪದ ಬದುಕಿನ ಭಾಗವಾಗಿರುವ ಈ ಪಾತ್ರಗಳನ್ನು, ಸಂಗತಿಗಳನ್ನು, ಸಂದರ್ಭಗಳನ್ನು ವಿವೇಚಿಸಿದಾಗ ಅವುಗಳ ವಿಭಿನ್ನ ಆಯಾಮಗಳ ಪರಿಚಯವಾಗುತ್ತದೆ. ಮಹಾಕಾವ್ಯವನ್ನು ಹಾಡುತ್ತಿರುವ ಸಮುದಾಯಗಳು ತಮ್ಮ ಇತಿಹಾಸದ ಬೇರುಗಳನ್ನು ಗುರುತಿಸಿಕೊಳ್ಳುವ ಕ್ರಮವಾಗಿಯೂ ಇರಬಹುದು. ಅವುಗಳ ರಚನೆಯೂ ಸಹ ಈ ನೆಲೆಯಲ್ಲಿ ಆಗಿರುವುದು ಗಮನಾರ್ಹ. ನಮಗೂ ಚರಿತ್ರೆಯಿದೆ. ಸಾಂಸ್ಕೃತಿಕ ವೀರರಿದ್ದಾ–ರೆ. ಮನುಕುಲದ ನಿರ್ಮಾಣದಲ್ಲಿ ತಮ್ಮ ಸಮುದಾಯದವರದ್ದೂ ಒಂದು ಪಾಲಿದೆ ಎಂಬುದಾಗಿರಬಹುದು. ಹಾಗಾಗಿಯೇ ಪ್ರತಿಯೊಂದು ಜನಪದ ಮಹಾಕಾವ್ಯವೂ ತನ್ನ ಅಸ್ತಿತ್ವಕ್ಕೆ ಕಾರಣವಾದ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಪ್ರಸ್ತುತ ಲೇಖನವು ಮಲೆಮಾದೇಶ್ವರ ಮಹಾಕಾವ್ಯಕ್ಕೆ ಸಂಬಂಧಿಸಿದ್ದು. ದಾಯದವರ ವಿವಿಧ ಬಗೆಯ ಆಚರಣೆಗಳು, ಸಾಹಸಗಾಥೆಗಳು, ಅತಿಮಾನುಷವಾದ ಪವಾಡಗಳು, ಮಾಟ–ಮಂತ್ರ ಹಾಗೂ ಅಂದಿನ ಕಾಲದ ಜನರ ನಂಬಿಕೆ, ಆಚರಣೆ, ಪದ್ಧತಿಗಳು ಮುಂತಾದ ಅಂಶಗಳನ್ನು ಒಳಗೊಂಡಿದೆ. ಈ ಕಾವ್ಯವನ್ನು ಹಾಡುವವರನ್ನು ದೇವರಗುಡ್ಡರು ಅಥವಾ ಕಂಸಾಳೆಯವರು ಎಂದು ಕರೆಯುತ್ತಾರೆ. ಇದೊಂದು ಕೌಶಲ ಪೂರ್ಣವಾದ ಜನಪದ ಕಲೆ. ದೇವರಗುಡ್ಡರ ಮಾದೇಶ್ವರ ಮಹಾಕಾವ್ಯವು ಮಾದಯ್ಯನ ಹುಟ್ಟು, ಬೆಳವಣಿಗೆ, ಪವಾಡ, ಒಕ್ಕಲನ್ನು ಪಡೆಯುವ ಸಾಹಸವನ್ನೊಳಗೊಂಡ ಸುದೀರ್ಘಕಾವ್ಯ. ಈ ಗುಡ್ಡರು ಮಾದೇಶ್ವರನ ಒಕ್ಕಲಿನವರು. ತಮ್ಮ ಕಷ್ಟ ಪರಿಹಾರಕ್ಕಾಗಿ ಮಾದೇಶ್ವರನಿಗೆ ಹರಕೆ ಕಟ್ಟಿಕೊಳ್ಳುವ ಮೂಲಕ ಮನೆಗೊಬ್ಬ ಗುಡ್ಡನನ್ನು ಬಿಡುವ ಪರಿಪಾಠ ಇವರಲ್ಲಿದೆ. ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಮುಂತಾದ ಭಾಗದಲ್ಲಿ ದೇವರಗುಡ್ಡರು ಹೆಚ್ಚಾಗಿ ಕಂಡುಬರುತ್ತಾರೆ.

ಸೋಲಿಗ ಸಮುದಾಯದ ನೀಲಯ್ಯ ತನ್ನ ಮಾಟವಿದ್ಯೆಯಿಂದ ಎಲ್ಲವನ್ನು ಒಲಿಸಿಕೊಳ್ಳುವ ಮನುಷ್ಯನ

ಮಹಾತ್ವಾಕಾಂಕ್ಷೆಯ ಫಲವಾದ ಮಹಾನ್ ಮೋಡಿಕಾರನಾಗಿ ಚಿತ್ರಿತಗೊಂಡಿದ್ದಾನೆ. ಗಂಡನ ಯಜಮಾನಿಕೆ ಒಪ್ಪದ ಸಂಕಮ್ಮಳನ್ನು ಮಂತ್ರಬಂಧನ ಮಾಡುತ್ತಾನೆ. ಅದಕ್ಕೆ ಪ್ರತಿಯಾಗಿ ಮಾದೇಶ್ವರ ನೀಲಯ್ಯನ ಎಲ್ಲ ಮಂಡಲಗಳನ್ನು ಹಾಗೂ ಕಟ್ಟುಗಳನ್ನು ನಿರರ್ಥಕಗೊಳಿಸಿ ಅನ್ಯಾಯವನ್ನು ತಡೆದು ಸಂಕಮ್ಮಳನ್ನು ರಕ್ಷಿಸುತ್ತಾನೆ. ಸಂಕಮ್ಮನ ಪಾತ್ರ ಜನಪದ ಬದುಕಿನ ಸಾಮಾನ್ಯ ಮಹಿಳಾ ಪಾತ್ರದಂತೆ ತೋರಿದರೂ, ಆ ಪಾತ್ರವು ನಿರ್ವಹಿಸುವ ಜವಾಬ್ದಾರಿಯು ಪುರಾಣದ ಶಿಷ್ಟ ಮಹಾಕಾವ್ಯಗಳ ಸ್ತ್ರೀಯರಿಗಿಂತ ಭಿನ್ನವಾಗಿ, ಸ್ವಾಭಿಮಾನಿಯಾಗಿ ಸವಾಲುಗಳನ್ನು ಎದುರಿಸಿ ನಿಲ್ಲುವ ಕ್ರಮ ವಿಶಿಷ್ಟ ಹಾಗೂ ವಿಶೇಷವಾಗಿದೆ. ಈ ಸಂಕಮ್ಮನ ಸಾಲು ಕಾವ್ಯಭಾಗವು ಹೆಣ್ಣು ಮನಸ್ಸು ಮಾಡಿದರೆ ಕಟ್ಟುಪಾಡುಗಳಿಂದ ಬಂಧಿಸುವ ಎಲ್ಲ ಪ್ರಯತ್ನವನ್ನು ಮೀರಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬಲ್ಲ ಸಾಮರ್ಥ್ಯವುಳ್ಳವಳು ಎಂಬುದನ್ನು ಸ್ಪಷ್ಟೀಕರಿಸಿದೆ. ಹೀಗೆ ಸಂಕಮ್ಮಳ ಸ್ವಾಭಿಮಾನ, ದಿಟ್ಟತನ, ಪ್ರಗತಿಪರ ಆಲೋಚನಾ ಕ್ರಮಗಳು ಪ್ರಸ್ತುತ ಸಂದರ್ಭಕ್ಕೂ ಅನ್ವಯಿಸುತ್ತವೆ. ಜನಪದರು ಮಹಾಕಾವ್ಯಗಳ ಮೂಲಕ ಮಾನವ ಸಮಾಜವನ್ನು ಪ್ರಗತಿಪಥದತ್ತ ಸಾಗಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಅಧಿಕಾರಶಾಹಿ ವ್ಯವಸ್ಥೆ ಬಲಯುತವಾಗಿ ಬೇರುಬಿಟ್ಟಿದ್ದ ವಿವಿಧ ಕಾಲಘಟ್ಟದ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಿತಿಗತಿಯನ್ನು ಹೀಗೆ ಸ್ಪಷ್ಟಪಡಿಸಬಹುದಾಗಿದೆ.

ವೇದಗಳ ಕಾಲದಲ್ಲಿ : ಈ ಕಾಲದ ಮಹಿಳೆಯರು ಬೌದ್ಧಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ಹೊಂದಿದ್ದರು. ಮಹಿಳೆಯರು ಗುರುಕುಲಗಳಲ್ಲಿ ವೇದಾಧ್ಯಯನದ ಅವಕಾಶವನ್ನು ಹೊಂದಿದ್ದರು. ನಂತರದ ಕಾಲಘಟ್ಟಗಳಿಗೆ ಹೋಲಿಸಿದಾಗ ವೇದಕಾಲದ ಸ್ತ್ರೀಯರು ತಕ್ಕಮಟ್ಟಿಗೆ ಒಳ್ಳೆಯ ರೀತಿಯಲ್ಲಿ ಜೀವನವನ್ನು ನಡೆಸಿದ್ದರು ಎನ್ನಬಹುದಾಗಿದೆ.

ಸ್ಮೃತಿಗಳ ಕಾಲದಲ್ಲಿ: ಹೆಣ್ಣುಮಕ್ಕಳಿಗೆ ಯಾವುದೇ ಸ್ವಾತಂತ್ರ್ಯವಿರಲಿಲ್ಲ. ಸಾಮಾಜಿಕ ಪರಿಸರ ಬಿಗುವಿನಿಂದ ಕೂಡಿತ್ತು. ಸ್ತ್ರೀ ಶಿಕ್ಷಣದ ಕುರಿತಾಗಿ ಯಾವ ಪ್ರಸ್ತಾಪಗಳೂ ಕಂಡುಬರುವುದಿಲ್ಲ. ಹೆಣ್ಣುಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿ ಗಂಡನ ಆಶ್ರಯವೇ ಮುಖ್ಯ ಎಂಬ ಭಾವನೆಯನ್ನು ಹೇರುತ್ತಿದ್ದರು.

ಮಹಾಕಾವ್ಯಗಳ ಕಾಲದಲ್ಲಿ: ಹೆಣ್ಣುಮಕ್ಕಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಹೊಂದಿದ್ದರೆ ಇನ್ನೊಂದೆಡೆ ಅಲಕ್ಷಿತರಾಗಿ ತುಳಿಯಲ್ಪಟ್ಟಿದ್ದ ಸ್ಥಿತಿಯನ್ನು ಕಾಣಬಹುದಾಗಿದೆ. ಹೆಣ್ಣು ಒಂದು ಭೋಗದ ವಸ್ತು ಎಂದು ಭಾವಿಸಿದ ರಾಜಪ್ರಭುತ್ವ ವ್ಯವಸ್ಥೆಯೂ ಒಂದು ಕಾರಣವಿರಬಹುದು.

ಹೀಗೆ ಕಾಲಘಟ್ಟ ಬೇರೆಯಾದರೂ ಹೆಣ್ಣಿನ ಶೋಷಣೆ ಎಲ್ಲ ಕಾಲಕ್ಕೂ ಜೀವಂತವಾಗಿದೆ. 'ಮಾತೃ ದೇವೋಭವ', 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿಗರೀಯಸಿ' ಎಂಬ ಮಾತುಗಳು ಮೌಲ್ಯದಂತೆ ಭಾರತೀಯ ಸಂಸ್ಕೃತಿಯಲ್ಲಿ ಸಾವಿರಾರು ವರ್ಷಗಳಿಂದ ಚಾಲ್ತಿಯಲ್ಲಿವೆ. ಒಂದೆಡೆ 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂದು ಹೆಣ್ಣುಮಕ್ಕಳನ್ನು ದೇವತೆಗಳ ಎತ್ತರಕ್ಕೇರಿಸಿ ಉನ್ನತ ಸ್ಥಾನದಲ್ಲಿಟ್ಟು ಪೂಜಿಸುವ ಸಂಪ್ರದಾಯವಿದ್ದರೆ ಇನ್ನೊಂದೆಡೆ ತೀರಾ ಕಡೆಗಣಿಸಲ್ಪಟ್ಟು ದೌರ್ಜನ್ಯಕ್ಕೆ ಒಳಗಾದ ಸ್ಥಿತಿ ಕಂಡುಬರುತ್ತದೆ. ಅದರಲ್ಲೂ ಶಿಷ್ಟ ಸಾಹಿತ್ಯವು ಕಂಡರಿಸಿದ ಮಹಿಳೆಯ ಸ್ಥಿತಿಗತಿಗಳಿಗೆ ಹೋಲಿಸಿದಾಗ ಜನಪದ ಮಹಿಳೆಯ ವ್ಯಕ್ತಿತ್ವವು ತೀರ ಕೌತುಕವನ್ನು ಹುಟ್ಟಿಸುತ್ತದೆ. ಸಮುದಾಯದ, ಊರಿನ, ನಾಡಿನ ಒಳಿತಿಗಾಗಿ ಕೆರೆ-ಕೋಟೆಗಳಿಗೆ ಬಲಿಯಾದ ಮಹಿಳೆಯ ತ್ಯಾಗವನ್ನು ಹಾಡಿ ಹೊಗಳಿ ಅವಳನ್ನು ದೈವತ್ವದ ಸ್ಥಾನಕ್ಕೇರಿಸಲಾಯಿತು. ಆದರೆ ಅದು ಅವಳ ಸ್ವಇಚ್ಛೆಗಿಂತ ಹೆಚ್ಚಾಗಿ ಪೂರ್ವನಿಯೋಜಿತ ಹಾಗೂ ಒತ್ತಾಯಪೂರ್ವಕವಾಗಿ ನಡೆದ ಬಲಿಗಳು. ಅನ್ಯಾಯವಾದಾಗ ಎಲ್ಲವನ್ನು ಸಹಿಸಿದ ಮಹಿಳೆಯರಿರುವಂತೆಯೇ ಅದನ್ನು ಪ್ರತಿಭಟಿಸಿದ ಮಹಿಳೆಯರು ಕಥನಕವನ ಹಾಗೂ ಜನಪದ ಮಹಾಕಾವ್ಯಗಳ ಮೂಲಕ ಸಂಕಮ್ಮನಂತಹ ಪಾತ್ರಗಳು ಸಿಗುತ್ತವೆ.

ಇಂದು ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರೂ ಮಾನವನ ಆಲೋಚನೆಗಳಲ್ಲಿ, ಸಂಬಂಧಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಬೇಕಾದದ್ದು ಅವಶ್ಯಕವಾಗಿದೆ. ಅಂದಿನ ಕಾಲದಿಂದ ಹಿಡಿದು ಇಂದಿನವರೆಗೂ ಮಹಿಳೆ ಬೌದ್ಧಿಕ ದಾಸ್ಯ, ದೌರ್ಜನ್ಯ, ದಬ್ಬಾಳಿಕೆ, ಶೋಷಣೆ ಹೀಗೆ ಅನೇಕ ರೀತಿಯಲ್ಲಿ ನೋವನ್ನು ಅನುಭವಿಸುತ್ತ ಬಂದಿದ್ದಾಳೆ. ಅನಕ್ಷರಸ್ಥ ಕಾಲಘಟ್ಟದಲ್ಲಿ ಯಾವ ನೋವನ್ನು ಅನುಭವಿಸುತ್ತಿದ್ದಳೋ ಅದೇ ಪರಿಸ್ಥಿತಿ ಇಂದಿಗೂ ಮುಂದುವರೆದಿದೆ. ಹಿಂದೆ ನಾಲ್ಕು ಗೋಡೆಗಳ ಮಧ್ಯೆಯಿದ್ದು ಅನುಭವಿಸುತ್ತಿದ್ದ ನೋವನ್ನು ಇಂದು ಕುಟುಂಬ ಹಾಗೂ ಅದರಾಚೆಗೂ ಅನುಭವಿಸುತ್ತಿದ್ದಾಳೆ. ಸ್ತ್ರೀಯರ ಬಗ್ಗೆ ತಾತ್ಸಾರ, ಶೋಷಣೆ, ದೌರ್ಜನ್ಯ ನಡೆಸುವ ಮನಸ್ಸು ಮಾತ್ರ ಕಾಲ ಉರುಳಿದರೂ ಹಾಗೆಯೇ ಮುಂದುವರೆಯುತ್ತಿದೆ. ದಿನದಿಂದ ದಿನಕ್ಕೆ ಜೀವಪರ ಮೌಲ್ಯಗಳು ಕುಸಿಯುತ್ತಿವೆ. ಇದಕ್ಕೆ ಪ್ರತಿಯಾಗಿ ಜನಪದ ಮಹಾಕಾವ್ಯದ ಸಂಕಮ್ಮನ

ಸಾಲು ಕಾವ್ಯಭಾಗವು ಪುರುಷ ಪ್ರಧಾನ ವ್ಯವಸ್ಥೆ ಹೊರಿಸಿರುವ ಮೌಲ್ಯಗಳಿಂದ ಜರ್ಜರಿತಕ್ಕೆ ಒಳಗಾಗಿರುವ ಮಹಿಳೆಯು ವ್ಯವಸ್ಥೆಯ ಒಳಗಿದ್ದುಕೊಂಡೇ ಪ್ರತಿರೋಧವನ್ನು ಒಡ್ಡುವ ಶಕ್ತಿಯನ್ನು ಮೈಗೂಡಿಸಿಕೊಂಡಿರುವುದನ್ನು ಸೂಚಿಸುತ್ತದೆ. ಅಧಿಕಾರಶಾಹಿ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ ಮಾತೃಪ್ರಧಾನ ವ್ಯವಸ್ಥೆಯ ಪ್ರತಿರೂಪವಾಗಿ ಸಂಕಮ್ಮ ಕಂಡುಬರುತ್ತಾಳೆ. ಅಂತೆಯೇ ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಜನಪದ ಸಾಹಿತ್ಯವು ತನ್ಮೂಲಕ ಪರಿಹಾರ ಹಾಗೂ ಪರ್ಯಾಯ ಮಾದರಿಗಳನ್ನು ನೀಡಬಲ್ಲದು.

■■

**ಪರಮಾರ್ಶನ ಗ್ರಂಥಗಳು:**

1. ಡಾ.ರಾಜಶೇಖರ ಪಿ.ಕೆ.(ಸಂ) – ಮಲೆಯ ಮಾದೇಶ್ವರ. ಸಂಪುಟ 1 ಮತ್ತು 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2006
2. ಎ.ವಿ.ನಾವಡ – ಜಾನಪದ ಶೋಧ, ಅಸ್ಮಿತೆ ಪ್ರಕಾಶನ, ಮಂಗಳೂರು, 2015
3. ಮೊಗಳ್ಳಿ ಗಣೇಶ – ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2006
4. ಹಿ.ಚಿ.ಬೋರಲಿಂಗಯ್ಯ – ಕರ್ನಾಟಕ ಜನಪದ ಮಹಾಕಾವ್ಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2018
5. ಪ್ರೊ.ಶಿ.ರಾಮಚಂದ್ರೇಗೌಡ – ಜಾನಪದ ಗ್ರಹಿಕೆ ಪರಿಕಲ್ಪನೆ. ಪ್ರಕಾಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, 2004

ISSN: 2320-9941
Prathispandha । ಪ್ರತಿಸ್ಪಂದ


# ಸ್ವಾಯತ್ತತೆಯ ನೆಲೆಯಲ್ಲಿ ಮಹಿಳಾ ಆತ್ಮಕಥೆಗಳು

● ಶ್ಯಾಮಣ್ಣ ಮಡ್ಡೇರ್

ಮಹಿಳೆಯು ತನ್ನ ದೇಹದ ಘನತೆಯ ಮೇಲೆ, ಭಾವನೆಯ ಘನತೆಯ ಮೇಲೆ ತನ್ನ ಹಕ್ಕನ್ನು ವಹಿಸಿಕೊಂಡು ಸದಾ ಎಚ್ಚರದಿಂದಿದ್ದು, ಅದಕ್ಕೆ ಚ್ಯುತಿ ತರುವ ಪ್ರತಿಯೊಂದು ಸಮಸ್ಯೆಗಳನ್ನು ಎದುರುಗೊಂಡು ಸಾಗುವ ಪ್ರಕ್ರಿಯೆಯನ್ನು ಸ್ತ್ರೀ ಸ್ವಾಯತ್ತತೆ ಎಂದು ಕರೆಯಲಾಗುತ್ತದೆ. ಸ್ವಾಯತ್ತತೆ ಎಂಬುದು ಸ್ವ ಅಧಿಕಾರದೊಂದಿಗೆ ಅಥವಾ ಸ್ವಾವಲಂಬನೆಯೊಂದಿಗೆ ಇರುವಂತಹದ್ದು. ಬೇರೆಯವರಿಂದ ನಿಯಂತ್ರಿಸಲ್ಪಡದೆ ತಮ್ಮ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಾಗಿದೆ. ಸ್ವಾಯತ್ತತೆ ಎಂಬ ಈ ಚೌಕಟ್ಟಿನಲ್ಲಿ ಮಹಿಳೆ ಎಂದರೆ ಶೋಷಿತಳು, ಅನ್ಯಾಯಕ್ಕೊಳಗಾದವಳು ಎಂಬ ಚಿಂತನೆ ಬರುವುದಿಲ್ಲ. ಸಮಾಜವು ಮಹಿಳೆಗೆ ಹೇಗೆ ಶೋಷಣೆ ಮಾಡುತ್ತದೆ? ಯಾಕೆ ಶೋಷಣೆ ಮಾಡುತ್ತದೆ? ಅದರ ಹಿಂದಿನ ನೈತಿಕತೆ ಏನು? ಈ ಎಲ್ಲಾ ಅಂಶಗಳಿಂದ ಹೆಣ್ಣಿಗಾಗುವ ತೊಂದರೆಗಳೇನು? ಆಕೆ ಅದನ್ನೆಲ್ಲಾ ಹೇಗೆ ಮೀರುತ್ತಾ ಬಂದಳು ಎಂಬುದು ಮುಖ್ಯವಾಗುತ್ತದೆ. ವ್ಯಕ್ತಿತ್ವದ ಬೆಳವಣಿಗೆಗೆ ಪ್ರಚೋದಿಸುವ ಘಟನೆಗಳನ್ನಾಗಿ ಕೆಲವು ಆತ್ಮಕಥೆಗಳನ್ನು ಈ ಲೇಖನದಲ್ಲಿ ಪ್ರಾತಿನಿಧಿಕವಾಗಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ. ಮಹಿಳೆಯರು ತಮ್ಮ ಆತ್ಮಕಥೆಗಳಲ್ಲಿ ಸ್ವಾಯತ್ತತೆಯ ಬದುಕನ್ನು ರೂಪಿಸಿಕೊಂಡಿದ್ದು ಹೇಗೆ ಎಂಬುದನ್ನು ಕೆಳಗಿನ ಆತ್ಮಕಥನಗಳಲ್ಲಿ ಸಂಕ್ಷಿಪ್ತವಾಗಿ ನೋಡಬಹುದು.

**ನೆನಪು ಸಿಹಿ–ಕಹಿ**

ಜಾತಿಯ ಕಾರಣದಿಂದ ಮನೆಯವರ ವಿರೋಧದ ಮಧ್ಯೆ ಅನುಪಮಾರವರು ನಿರಂಜನರನ್ನು ವಿವಾಹವಾದರು. ಈ ಕಾರಣಕ್ಕಾಗಿ ಮನೆಯವರ ಸಂಪರ್ಕವನ್ನು ಕಳೆದುಕೊಳ್ಳಬೇಕಾಯಿತು. "ನನ್ನ ತಾಯಿಯ ಕಡೆಯಿಂದ ಕಷ್ಟ ಸಹಿಷ್ಣುತೆಯನ್ನು,

**ವಿಳಾಸ:** ಶ್ಯಾಮಣ್ಣ ಮಡ್ಡೇರ್
ಪಿಎಚ್.ಡಿ. ಸಂಶೋಧನಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583276

ಒರಟುತನವನ್ನೂ, ತಂದೆಯ ಕಡೆಯಿಂದ ವಿದ್ಯಾಭಿಲಾಷೆಯನ್ನು, ಶಿಸ್ತು ಪ್ರಾಮಾಣಿಕತೆಗಳನ್ನು ನಾನು ಬಳುವಳಿಯಾಗಿ ಪಡೆದೆ" ಎನ್ನುವ(ಪು–22, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 2019) ಇವರು 'ಜೀವನದಲ್ಲಿ ಎಂದಿಗೂ ಸೋಲನ್ನೊಪ್ಪಿಕೊಳ್ಳಬಾರದು' ಎಂಬ ನಿರಂಜನರ ಮಾತಿನಂತೆ ಅನುಪಮಾ ಜೀವನದುದ್ದಕ್ಕೂ ನಡೆದರು. ನಿರಂಜನರಿಗೆ ಪಾರ್ಶ್ವವಾಯು ಹೊಡದು ಅವರಿನ್ನೂ ಚೇತರಿಸಿಕೊಳ್ಳುತ್ತಿದ್ದಾಗಲೇ ಅನುಪಮಾರಿಗೆ ಕ್ಯಾನ್ಸರ್ ಶುರುವಾಯಿತು. ನಾಲ್ಕುಬಾರಿ ಶಸ್ತ್ರಚಿಕಿತ್ಸೆಗಳಿಗೆ ಒಳಗಾದರೂ ಎಂದೂ ಜೀವನಪ್ರೀತಿಯನ್ನು ಕಳೆದುಕೊಳ್ಳಲಿಲ್ಲ. ಬದಲಾಗಿ ಬಂದ ಸಂಕಷ್ಟಗಳನ್ನು ಎದುರಿಸಿ ಮುನ್ನುಗ್ಗಿದವರು. ವೃತ್ತಿಯಿಂದ ವೈದ್ಯರಾಗಿ, ಪ್ರವೃತ್ತಿಯಿಂದ ಸಾಹಿತಿಯಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಕಥೆ, ಕಾದಂಬರಿ, ನಾಟಕ, ಪ್ರವಾಸಕಥನ, ಮಕ್ಕಳ ಸಾಹಿತ್ಯ, ಮಹಿಳಾ ಸಾಹಿತ್ಯ, ವೈದ್ಯಕೀಯ ಸಾಹಿತ್ಯ ಇತ್ಯಾದಿ ಹೊಸಗನ್ನಡ ಸಾಹಿತ್ಯದ ಕ್ಷೇತ್ರಗಳಿಗೆ ಇವರು ಸಲ್ಲಿಸಿದ ಕೊಡುಗೆ ಅಮೂಲ್ಯವಾದುದು. ಇವರ ಸಾಧನೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಸೇರಿ ಹಲವಾರು ಪ್ರಶಸ್ತಿಗಳು ಸಂದಿವೆ. ಸಾಹಿತ್ಯಿಕವಾಗಿ, ವೃತ್ತಿಪೂರ್ವಕವಾಗಿ ಮತ್ತು ಸಾಮಾಜಿಕವಾಗಿ ಮಹತ್ವದ ಸಾಧನೆಗಳನ್ನು ಮಾಡಿದ ಡಾ. ಅನುಪಮಾ ನಿರಂಜನರವರು ತಮ್ಮ ಸಾವು ಕಣ್ಮುಂದೆ ಇದ್ದರೂ ಧೃತಿಗೆಡದೆ ಸ್ವಾಯತ್ತತೆಯ ಜೀವನ ಸಾಗಿಸಿದ ರೀತಿ ಅನನ್ಯ, ಅನುಕರಣೀಯ ಮತ್ತು ಅವಿಸ್ಮರಣೀಯವಾದುದು.

**ಕುದಿ ಎಸರು**

ಇದು ಡಾ.ವಿಜಯಾರವರ ಆತ್ಮಚರಿತ್ರೆಯಾಗಿದೆ. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ಬಡತನದ ದಟ್ಟ ಅನುಭವವನ್ನು ಉಂಡು, ಎಳೆವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು, ಹದಿನಾರನೇ ವಯಸ್ಸಿಗೆ ಬಾಲ್ಯವಿವಾಹವಾದರು. ಗರ್ಭಕ್ಕೇ ಕೈಹಾಕಿ ಭ್ರೂಣವನ್ನು ಕಿತ್ತುಹಾಕುವ, ಹಿಂಸಾರತಿಯಲ್ಲದೆ ಬೇರೇನೂ ಗೊತ್ತಿಲ್ಲದ ಪತಿಯೊಂದಿಗೆ ನರಕದ ಜೀವನ ಸಾಗಿಸಿದರು. ಈ ಎಲ್ಲವೂಗಳ ಮಧ್ಯೆ ಸಂಜೆ ಕಾಲೇಜ್‌ಗೆ ಸೇರಿ ಎಂ.ಎ ಹಾಗೂ ಪಿಎಚ್.ಡಿ ಪದವಿಯನ್ನು ಪಡೆದರು. ಗಂಡನ ಹಿಂಸೆಯನ್ನು ಸಹಿಸಲಾರದೆ ಕೊನೆಗೆ ಗಂಡನಿಂದ ವಿಘಟಿತರಾದರು. ತನ್ನಿಬ್ಬರು ಗಂಡು ಮಕ್ಕಳನ್ನು ಸಾಕಿ ಸಲಹುತ್ತಾ, ಪತ್ರಿಕಾ ವರದಿಗಾರರಾಗಿ, ಸಂಪಾದಕರಾಗಿ, ಪ್ರಕಾಶಕಿಯಾಗಿ, ಕನ್ನಡದ ಖ್ಯಾತ ಲೇಖಕಿಯಾಗಿ, ರಂಗಕಲಾವಿದೆಯಾಗಿ ತಮ್ಮನ್ನು ತಾವು ಕಂಡುಕೊಂಡು 'ಬದುಕು ಬಂದಂತೆ ಸ್ವೀಕರಿಸುವುದಲ್ಲ; ಅದನ್ನು ನಾವು ರೂಪಿಸಿಕೊಳ್ಳಬೇಕು' ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಿದ್ದಾರೆ. ಪತ್ರಕರ್ತೆಯಾಗಿ, ಸಾಹಿತಿಯಾಗಿ, ರಂಗಕಲಾವಿದೆಯಾಗಿ, ಚಲನಚಿತ್ರ ನಿರ್ಮಾಪಕಿಯಾಗಿ, ಪ್ರಕಾಶಕಿಯಾಗಿ ಇವರು ಮಾಡಿದ ವೃತ್ತಿಸೇವೆ ವಿಶಾಲವಾಗಿರುವಂತಹದ್ದು.

ನಾಲ್ಕು ಬಾರಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ತೀರ್ಪುಗಾರರಾಗಿ, ಕೇಂದ್ರ ಚಲನಚಿತ್ರ ಸೆನ್ಸಾರ್ ಮಂಡಳಿಯ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ. 'ಪಪೆಟ್‌ಲ್ಯಾಂಡ್' ಸಂಘಟನೆಯ ಸ್ಥಾಪಕರಾಗಿ ಚಂದ್ರಶೇಖರ ಕಂಬಾರರ 'ಕಿಟ್ಟಿಕತೆ', ಗಿರೀಶ್ ಕಾರ್ನಾಡರ 'ಮಾನಿಷಾದ', ಚಂದ್ರಶೇಖರ ಪಾಟೀಲರ 'ಟಿಂಗರ ಬುಡ್ಡಣ್ಣ' ಮತ್ತು ಗಿರಡ್ಡಿ ಗೋವಿಂದ ರಾಜರ 'ಕನಸು'ಗಳನ್ನು ಬೊಂಬೆಯಾಟಕ್ಕೆ ಅಳವಡಿಸಿದ ಕೀರ್ತಿ ವಿಜಯಾ ಅವರಿಗೆ ಸಲ್ಲುತ್ತದೆ. ಹೀಗೆ ಚಲನಚಿತ್ರ, ನಾಟಕ, ಸಾಹಿತ್ಯಗಳಲ್ಲಿ ತೊಡಗಿಸಿಕೊಂಡಿರುವ ಡಾ. ವಿಜಯಾ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಮಾತ್ರವಲ್ಲದೆ ಅನೇಕ ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಹಲವಾರು ಸಂಘ ಸಂಸ್ಥೆಗಳೊಡನೆ ಸಕ್ರಿಯ ಒಡನಾಟ ಹೊಂದಿರುವ ವಿಜಯಾರವರು ಹಲವಾರು ಸಂಘ ಸಂಸ್ಥೆಗಳಲ್ಲಿ, ಸಮಿತಿಗಳಲ್ಲಿ ಅಧ್ಯಕ್ಷ, ಸದಸ್ಯ ಮತ್ತು ಕಾರ್ಯದರ್ಶಿಗಳಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಾ ಸ್ವಾಯತ್ತತೆಯ ಬದುಕನ್ನು ಕಂಡುಕೊಂಡಿದ್ದಾರೆ.

**ಅನುದಿನದ ಅಂತರಗಂಗೆ**

ಪ್ರತಿಭಾನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಕೃತಿಯು ಕನ್ನಡ ಮಹಿಳಾ ಆತ್ಮಕಥನಗಳಿಗೆ ಲವಲವಿಕೆಯ, ದಿಟ್ಟತನದ ಹೊರಳನ್ನು ಒಂದು ಚೈತನ್ಯದ ಜಿಗಿತವನ್ನು ತಂದುಕೊಟ್ಟಿತು. ಕನ್ನಡದ ಮಹತ್ವದ ಕವಯತ್ರಿ, ಅಂಕಣ ಬರಹಗಾರ್ತಿ ಮತ್ತು ಸ್ತ್ರೀವಾದಿ ಬರಹಗಾರ್ತಿಯಾದ ಇವರ ಸಂಪೂರ್ಣ ಬದುಕು ಪ್ರೀತಿಯ ಹುಡುಕಾಟದ ಒಂದು ಪಯಣದಂತಿದೆ.

ಪರಸ್ಪರ ವಿರುದ್ಧ ಗುಣಗಳನ್ನು ಹೊಂದಿರುವ ಪ್ರತಿಭಾ ಹಾಗೂ ನಂದಕುಮಾರ್ ಜಾತಿಯನ್ನು ಮರೆತು ಪ್ರೀತಿ ಮಾಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಅವರ ವೈವಾಹಿಕ ಜೀವನ ಸುಖವಾಗಿರಲಿಲ್ಲ. ಮನೆಯಲ್ಲಿ ಸದಾ ಜಗಳ, ಮಾನಸಿಕ ಹಿಂಸೆ, ದೈಹಿಕ ಹಿಂಸೆಯಿಂದ ನೊಂದಿದ್ದರು. ಆದರೆ ತನ್ನ ವ್ಯಕ್ತಿತ್ವದ ಅಸ್ಮಿತೆಗೆ ಧಕ್ಕೆ ಒದಗುವ ಸಂದರ್ಭ ಎದುರಾದರೆ ಆಕೆ ಬಿಡುಗಡೆಯನ್ನು ಪಡೆಯುವ ಪ್ರಯತ್ನ ಮಾಡುತ್ತಾಳೆ. ಪ್ರತಿಭಾರವರ ಪತಿಯು ಆಕೆಯ ಮೇಲೆ

ತನ್ನ ಅಧಿಕಾರ ಸ್ಥಾಪಿಸಲು ಸದಾ ಯತ್ನಿಸುತ್ತಿದ್ದರೂ ಆಕೆ ಮಾತ್ರ ಎಂದೂ ಆತನ ಹಿಡಿತಕ್ಕೆ ಸಿಗಲಿಲ್ಲ. ಗಂಡನ ಮನೆಯಿಂದ ಹೊರಬಂದು ತಮ್ಮದೇ ಪ್ರತ್ಯೇಕ ಬಾಡಿಗೆ ಮನೆ ಮಾಡಿಕೊಂಡು ಭಾಷಾಂತರ, ಜಾಹೀರಾತು, ಹಾಡು, ಸೀರಿಯಲ್‌ಗಳಿಗೆ ಸಂಭಾಷಣೆ, ಸಾಕ್ಷ್ಯ ಚಿತ್ರಗಳಿಗೆ ನಿರೂಪಣೆ ಬರೆಯುವುದು, ಧ್ವನಿ ನೀಡುವುದು, ಇಂಗ್ಲೀಷ್ ಸಬ್ ಟೈಟಲ್ ಮಾಡುವುದು ಹೀಗೆ ಹಲವಾರು ಕೆಲಸಗಳನ್ನು ಮಾಡುತ್ತಾ ತಮ್ಮದೇ ರೀತಿಯ ಸ್ವಾಯತ್ತತೆಯ ಬದುಕನ್ನು ಕಟ್ಟಿಕೊಂಡವರಾಗಿದ್ದಾರೆ. ಇವರ ಸಾಹಿತ್ಯಕ್ಷೇತ್ರದ ಕೃಷಿಗಾಗಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಮುದ್ದಣ್ಣ ಕಾವ್ಯ ಪ್ರಶಸ್ತಿ' ಹೀಗೆ ಹಲವಾರು ಪ್ರಶಸ್ತಿಗಳು ಸಂದಿವೆ.

**ಕಣ್ಣಾ ಮುಚ್ಚೇ ಕಾಡೇ ಗೂಡೇ**

ರಂಗಭೂಮಿ ಮತ್ತು ಚಲನಚಿತ್ರದಲ್ಲಿ ಪ್ರಸಿದ್ಧರಾದ ಬಿ. ಜಯಶ್ರೀರವರ ಆತ್ಮಕಥೆಯನ್ನು ಪ್ರೀತಿ ನಾಗರಾಜ್ ಅವರು ನಿರೂಪಿಸಿದ್ದಾರೆ. ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಇವರು ಬಾಲ್ಯದಿಂದಲೇ ನೋವಿನ ಜೊತೆಜೊತೆಗೆ ಸಾಗಿದವರು. ತಂದೆ–ತಾಯಿಗಳ ಅಗಲಿಕೆಯ ನಂತರ ಏಕಾಂಗಿಯಾಗಿ ಹಲವಾರು ಅಪಮಾನ–ಅವಮಾನಗಳನ್ನು ಎದುರಿಸಿದವರು. ಮದ್ಯವ್ಯಸನಿ ಹಾಗೂ ಅಪ್ರಯೋಜಕ ಪತಿಯೊಂದಿಗೆ ಬದುಕು ನಡೆಸಲು ಸಾಧ್ಯವಾಗದಿದ್ದಾಗ ಆತನೊಂದಿಗೆ ವಿಚ್ಛೇದನ ನೀಡಿ, ರಂಗಭೂಮಿಯಲ್ಲಿ ಗಟ್ಟಿಯಾಗಿ ನಿಂತು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಾರೆ. ನಾಟಕಗಳ ನಿರ್ದೇಶನದಲ್ಲಿ ಅನೇಕಾನೇಕ ಪ್ರಯೋಗಗಳನ್ನು ನಡೆಸಿ ನಾಟಕ ಕಲೆಯ ಪರಿಧಿಗಳನ್ನು ವಿಸ್ತರಿಸುತ್ತಾರೆ.

ಕನ್ನಡದ ರಂಗಭೂಮಿಯಲ್ಲಿ ಜಯಶ್ರೀರವರು ತಮ್ಮ ಕಂಚಿನ ಕಂಠದಿಂದ ಕರ್ನಾಟಕದ ಮನೆಮಾತಾಗಿದ್ದಾರೆ. ತಮ್ಮ ಅನನ್ಯ ಸಂಭಾಷಣ ಕೌಶಲ್ಯದಿಂದ ಅನೇಕ ಚಿತ್ರ ತಾರೆಯರಿಗೆ ಡಬ್ಬಿಂಗ್ ಕಲಾವಿದೆಯಾಗಿ, ಧ್ವನಿಯನ್ನು ನೀಡಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದಾರೆ. ಅಷ್ಟೇ ಅಲ್ಲ, ಇವರ ಸಾಧನೆಗೆ ಭಾರತದ ನಾಲ್ಕನೆಯ ಶ್ರೇಷ್ಠ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿಯೂ 2013ರಲ್ಲಿ ಲಭಿಸಿದೆ. ಆರು ವರ್ಷಗಳ ಅವಧಿಗೆ ರಾಜ್ಯಸಭೆಗೆ ನಾಮನಿರ್ದೇಶನಗೊಂಡದ್ದು ಅವರ ಜೀವನದ ಮತ್ತೊಂದು ಮಜಲು. ನಿಜಕ್ಕೂ ಒಬ್ಬ ವ್ಯಕ್ತಿ ಬದುಕಲ್ಲಿ ಎಷ್ಟೆಲ್ಲಾ ಕೆಲಸ ಮಾಡಬಹುದು. ಹೇಗೆಲ್ಲಾ ಹೋಯ್ದಾಡುವ ಬಾಳದೋಣಿಯನ್ನು ತಹಬದಿಗೆ ತಂದು ಗಟ್ಟಿಯಾಗಿ ನಿಂತು, ಸಮಾಜದಲ್ಲಿ ದಾಖಲಾಗುವಂತೆ ಸ್ವಾಯತ್ತ ಬದುಕು ನಡೆಸಬಹುದು ಎನ್ನುವುದಕ್ಕೆ ಇವರ ಪಯಣ ಜ್ವಲಂತ ನಿದರ್ಶನವಾಗಿದೆ.

**ಬೆಂಕಿ ಬೆಡಗು**

ಉಮಾಶ್ರೀಯವರ ಈ ಆತ್ಮಕಥೆಯನ್ನು ಬಿ. ಗಣಪತಿಯವರು ನಿರೂಪಿಸಿದ್ದಾರೆ. ಒಂದು ಹೆಣ್ಣಿಗೆ ಸಾಧನೆ ಮಾಡಬೇಕೆನ್ನುವ ಛಲ ಇದ್ದರೆ ಏನೆಲ್ಲಾ ಸಾಧಿಸಬಹುದು ಎನ್ನುವುದಕ್ಕೆ ಕೊಡಬಹುದಾದ ಒಂದು ಉತ್ತಮ ಉದಾಹರಣೆ ಉಮಾಶ್ರೀಯವರು. ಇವರು ಜೀವನದ ಅನಿವಾರ್ಯತೆಗೆಂದು ನಟನೆಗಿಳಿದು ಅದರಲ್ಲಿ ಅತ್ಯುನ್ನತವಾದ ಸ್ಥಾನ ತಲುಪಿದವರಾಗಿದ್ದಾರೆ.

ತಂದೆ ತಾಯಿಯಿಲ್ಲದ ತಬ್ಬಲಿ, ಸಾಕು ತಾಯಿಯೂ ಶತ್ರುವಿನಂತಾದಾಗ ದಿಗ್ಭ್ರಮೆಯಲ್ಲಿ ಸ್ತಬ್ಧಳಾಗುತ್ತಾಳೆ. ದುಡಿಯದ ಮದ್ಯವ್ಯಸನಿ ಗಂಡ, ಆರ್ದತೆಯೇ ಇಲ್ಲದ ಶುಷ್ಕ ಸಂಬಂಧ, ಬಸಿರು ಬಾಣಂತನಗಳ ದಿಕ್ಕೇಡಿತನ, ಕಾಡುವ ಅಪಾರ ಹಸಿವು ಮಕ್ಕಳ ಭವಿಷ್ಯ ಇದಕ್ಕೆಲ್ಲ ಒಂಟಿಯಾಗಿ ಎದೆಕೊಟ್ಟು ನಿಲ್ಲಲ್ಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಮುಗ್ಧೆ ಗಯ್ಯಾಳಿಯಾಗಿ ಬದಲಾಗುತ್ತಾಳೆ. ಪ್ರಾರಂಭದಲ್ಲಿ ಇಡ್ಲಿಯ ವ್ಯಾಪಾರ ಮಾಡಿ ಜೀವನ ಸಾಗಿಸಿದರು. ತಾಯಿಯೊಂದಿಗೆ ಜಗಳವಾಡಿ ಮನೆಯಿಂದ ಹೊರನಡೆದರು. ಆಸರೆ–ನೆಮ್ಮದಿ ಬಯಸಿ ಸ್ಥಳದಿಂದ ಸ್ಥಳಕ್ಕೆ ಅಲೆದಾಡಿದರು. ಉಳಿವಿನ ಪ್ರಶ್ನೆ ಎದುರಾದಾಗ ಇವರಿಗೆ ತನ್ನೊಳಗೇ ಅರಿವಿಗೆ ಬಾರದಂತೆ ಗುಪ್ತವಾಗಿದ್ದ ದೈತ್ಯಶಕ್ತಿ ನಟನಾ ಕಲೆಯ ಮೂಲಕ ಹೊರ ಬರುತ್ತದೆ. ಚಿತ್ರರಂಗ ಹಾಗೂ ರಂಗಭೂಮಿಯ ಒಂದೊಂದು ಹಂತದಲ್ಲಿಯೂ ಒಮ್ಮೊಮ್ಮೆ ನಾಯಕಿಯಾಗಿ, ಖಳನಾಯಕಿಯಾಗಿ, ಪೋಷಕ ನಟಿಯಾಗಿ ಯಶಸ್ಸು ಅರಸುತ್ತಾ ಉಮಾಶ್ರೀ ಕಂಡುಂಡ ಬದುಕು ಒಬ್ಬ ನಿಜವಾದ ಹೋರಾಟಗಾರ್ತಿಯ ಎಲ್ಲಾ ಜೀವನ ಸ್ತರಗಳನ್ನು ಒಳಗೊಂಡಿದೆ.

ರಂಗಭೂಮಿಯಿಂದ ಹಿಡಿದು, ನಟಿಯಾಗಿ ಮತ್ತು ಸಚಿವೆಯಾಗಿ ಇದುವರೆಗೆ ಆರು ರಾಜ್ಯ ಪ್ರಶಸ್ತಿ ಮತ್ತು ಗುಲಾಬಿ ಟಾಕೀಸ್ ಚಿತ್ರಕ್ಕೆ 'ರಜತ ಕಮಲ' ಪ್ರಶಸ್ತಿ ಪಡೆದು ಕನ್ನಡ ನಾಡಿನ ಹೆಮ್ಮೆಯ ಕಲಾವಿದೆಯಾಗಿ ತಮ್ಮ ಸ್ವಾಯತ್ತತೆಯನ್ನು ಕಂಡುಕೊಂಡ ಮೇರು ಪ್ರತಿಭಾನ್ವಿತ ಮಹಿಳೆಯಾಗಿದ್ದಾರೆ.

**ಕಾಡುತಾವ ನೆನಪುಗಳು**

ಡಾ. ಎಚ್. ಗಿರಿಜಮ್ಮ ಅವರ ಈ ಆತ್ಮಕಥೆಯು 'ತಮ್ಮ ಮಾನಸಪುತ್ರಿಗೆ ಬರೆದ ಪತ್ರ ಮಾದರಿಯ ರೀತಿಯಲ್ಲಿ ಇಲ್ಲಿಯ ನೆನಪುಗಳು ಬಿಚ್ಚಿಕೊಳ್ಳತೊಡಗುತ್ತವೆ. ಇವರು ಸೂಕ್ಷ್ಮಸಂವೇದನೆಯ ಸಾಹಿತಿಗಳು ಹಾಗೂ

ISSN: 2320-9941


ವೈದ್ಯೆಯಾಗಿದ್ದವರು. ಬಹುಮುಖ ಪ್ರತಿಭೆಯವರಾಗಿದ್ದ ಇವರು ವೃತ್ತಿಯಿಂದ ವೈದ್ಯರಾದರೂ ಪ್ರವೃತ್ತಿಯಿಂದ ಸಾಹಿತ್ಯ, ಚಲನಚಿತ್ರ, ಸಾಕ್ಷ್ಯಚಿತ್ರ ಮುಂತಾದ ಹಲವು ಕ್ಷೇತ್ರಗಳಲ್ಲಿ ಚಿರಪರಿಚಿತರಾದವರು. ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು, ತಾಯಿಯ ಹಾರೈಕೆಯಲ್ಲಿ ಬೆಳೆದ ಇವರು ತಾಯಿಯ ಆಸೆಯಂತೆ ಎಂ.ಬಿ.ಬಿ.ಎಸ್ ಪದವಿ ಮುಗಿಸಿ ವೈದ್ಯೆಯಾಗಿ ವೃತ್ತಿಜೀವನವನ್ನು ನಡೆಸುತ್ತಾರೆ. ಕ್ಲಿನಿಕ್ ಕೆಲಸಕ್ಕೆ ಸೇರಿದ ವ್ಯಕ್ತಿಯನ್ನು ಪ್ರೀತಿಸಿ ವಿವಾಹವಾಗುವ ಗಿರಿಜಮ್ಮನವರು ಇವನಿಂದಾಗಿ ಅನೇಕ ರೀತಿಯ ವಂಚನೆಗೊಳಗಾಗಿ ವಿಚ್ಛೇಧನವನ್ನು ನೀಡುತ್ತಾರೆ. ತಾಯಿ, ತಂಗಿಯಾದಿಯಾಗಿ ಕುಟುಂಬದವರ ಪ್ರೀತಿಯಿಂದ ವಂಚಿತಳಾದರೂ ಜೀವನಪ್ರೀತಿಯನ್ನು ಕಳೆದುಕೊಳ್ಳಲಿಲ್ಲ. ವೈಯಕ್ತಿಕ ಬದುಕಿನ ಸಂಕಟಗಳನ್ನು ಸಾಮಾಜಿಕ ಬದುಕಿನ ಸಾಧನೆಗಳಲ್ಲಿ ಮರೆಯುವ ಪ್ರಯತ್ನ ಮಾಡುತ್ತಾರೆ.

ಭ್ರಷ್ಟಾಚಾರದಲ್ಲಿ ತೊಡಗಿದ ಹಿರಿಯ ವೈದ್ಯಾಧಿಕಾರಿಗಳು, ರಾಜಕಾರಣಿಗಳು, ಪುಂಡರು ಹೀಗೆ ಪುರುಷಪ್ರಧಾನ ವ್ಯವಸ್ಥೆಯ ಕ್ರೂರತೆಯನ್ನು ಎದುರಿಸುತ್ತಾ ಗಿರಿಜಮ್ಮನವರು ಬೆಳೆದು ನಿಂತ ಬಗೆ ಮಾದರಿಯಾದುದು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡಾ. ಬಿ. ಸಿ. ರಾಯ್ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಇವರನ್ನು ಹರಸುತ್ತಾ ಬಂದಿವೆ. ಬಡವರು, ನಿರ್ಗತಿಕರು ಹಾಗೂ ಅಸಹಾಯಕರಿಗೆ ಉಚಿತ ಚಿಕಿತ್ಸೆ ನೀಡುವ ಮೂಲಕ ಜನಪ್ರಿಯ ವೈದ್ಯರಾದ ಗಿರಿಜಮ್ಮ 'ಮಾನವೀಯ ಮೌಲ್ಯಗಳ ಪ್ರತೀಕವಾಗಿ' ಕಾಣುತ್ತಾರೆ.

**ಹುಳಿಮಾವು ಮತ್ತು ನಾನು**

ಇಂದಿರಾ ಲಂಕೇಶ್ ಅವರ ಈ ಆತ್ಮಕಥೆಯು ಮಹಿಳೆಯೊರ್ವಳ ಸ್ವಾಭಿಮಾನದ, ಸ್ವಾವಲಂಬನೆಯ, ಧೈರ್ಯದ, ಜೀವನ ಪ್ರೀತಿಯ ಕಥನವಾಗಿಯೂ ಪ್ರಸಿದ್ಧವಾಗುತ್ತದೆ. ತಮ್ಮ ತಂದೆಯ ವಿರೋಧವಿದ್ದರೂ ಲಂಕೇಶರನ್ನು ಮದುವೆಯಾದ ಇಂದಿರಾ ತಂದೆ ಹೇಳಿದ್ದಂತೆ ಅತ್ಯಂತ ಕಷ್ಟದ ಗಳಿಗೆಗಳಲ್ಲಿ ಕೂಡ ಅವರ ಬಳಿ ಸಹಾಯ ಕೇಳುವುದಿಲ್ಲ. ತಮ್ಮ ಸ್ವಸಾಮರ್ಥ್ಯದ ಆಧಾರದಿಂದಲೇ ಆರ್ಥಿಕ ಸ್ವಾವಲಂಬನೆ ಗಳಿಸಿ ಸಂಸಾರವನ್ನು ಪೋಷಿಸುತ್ತಾರೆ. ವೈವಾಹಿಕ ಜೀವನದಲ್ಲಿ ಬಂದ ಸಂದಿಗ್ಧಗಳನ್ನು ಗೌರವಯುತವಾಗಿಯೇ ಎದುರಿಸಿದವರು. ಸಂಕಷ್ಟಗಳು ಎದುರಾದಾಗ, ಯಾರ ಸಹಾಯವನ್ನು ಆಶಿಸದೆ ದುಡಿಮೆಯಂತಹ ಮೌಲ್ಯವಿರುವ ಬದುಕನ್ನು ಅಪ್ಪಿದವರು. ಮಕ್ಕಳ ಭವಿಷ್ಯವನ್ನು ರೂಪಿಸುತ್ತಾ, ಅದರೊಂದಿಗೆ ತಮ್ಮ ಬದುಕಿನ ಸಣ್ಣ ಸಣ್ಣ ಸಂತೋಷಗಳನ್ನು ಅನುಭವಿಸುವುದನ್ನು ಕಲಿಯುತ್ತಾ ಮಾಗುತ್ತಾರೆ. ಸೀರೆ ವ್ಯಾಪಾರ ಮಾಡುವ ಮೂಲಕ ತಮ್ಮ ಸ್ವಾವಲಂಬನೆಯ ಬದುಕಿಗೊಂದು ದಾರಿ ಕಂಡುಕೊಂಡು ಯಶಸ್ವಿಯಾಗುತ್ತಾರೆ. ಅದರ ಏಳು–ಬೀಳುಗಳನ್ನು ಒಬ್ಬರೇ ನಿಭಾಯಿಸುತ್ತಾರೆ. ಸಾಗರದಂತಹ ದೈತ್ಯನೊಂದಿಗಿದ್ದು, ತನ್ನತನವನ್ನು ಅದರಲ್ಲಿ ಕರಗಿಸದೆ, ಬೇರೆಯಾಗಿಯೇ ತನ್ನ ಅಸ್ಮಿತೆಯನ್ನು ರೂಪಿಸಿಕೊಂಡ ಇವರ ಬದುಕು ಆದರ್ಶಪ್ರಾಯವಾಗುವಂತಹದ್ದು.

ಲಂಕೇಶರಂತಹ ಪ್ರಖರ ವ್ಯಕ್ತಿತ್ವದ ಮನುಷ್ಯನ ಮಡದಿಯಾಗಿಯೂ ತನ್ನ ವೈಯಕ್ತಿಕತೆಯನ್ನು ಸ್ವಲ್ಪವೂ ಬಿಟ್ಟು–ಕೊಡದೆ ತಾನು ವ್ಯವಹಾರ ನಡೆಸಿ, ತೋಟವನ್ನು ಮಾಡಿ ತಮ್ಮ ಆತ್ಮಗೌರವವನ್ನು ಕಾಯ್ದುಕೊಳ್ಳುವುದು ನಿಜಕ್ಕೂ ಅಮೋಘವಾದುದಾಗಿದೆ.

**ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ**

ಮಹಿಳೆಯೊಬ್ಬರು ಲೈಂಗಿಕ ಕಾರ್ಯಕರ್ತೆಯಾಗಿ ಅನುಭವಿಸಿದ ನೋವನ್ನು, ಕಣ್ಣೋಟದಿಂದ ಕಂಡ ಜಗತ್ತನ್ನು ಅನಾವರಣಗೊಳಿಸಿದ ಆತ್ಮಕಥನ ಕನ್ನಡದಲ್ಲಿ ಬಂದಿರುವುದು ವಿಶೇಷ. ಮೂಲತ: ಮಲೆಯಾಳಂ ಭಾಷೆಯ ಜ್ಞಾನ್ ಲೈಂಗಿಕ ತೊಳಿಲಾಳಿ ಎಂಬ ನಳಿನಿ ಜಮೀಲಾರ ಆತ್ಮಕಥನವನ್ನು "ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ" ಎಂದು ಕನ್ನಡಕ್ಕೆ ಅನುವಾದಿಸಿದವರು ಕೆ. ನಾರಾಯಣಸ್ವಾಮಿಯವರು.

ಮೂರನೇ ತರಗತಿಗೆ ಶಾಲೆ ಬಿಟ್ಟಿದ್ದ ಜಮೀಲಾ ಅವರ ಗಂಡ ಕ್ಯಾನ್ಸರ್‌ನಿಂದ ಸಾವಿಗೀಡಾದರು. ಗಂಡನ ಸಾವಿನ ನಂತರ ಎರಡು ಮಕ್ಕಳು ಸೇರಿದಂತೆ ಕುಟುಂಬದ ನಿರ್ವಹಣೆ ಮಾಡಲು ಬೇರೆ ದಾರಿಯಿಲ್ಲದೇ ಅವರು ಲೈಂಗಿಕ ಕಾರ್ಯಕರ್ತೆಯಾಗಿ ವೃತ್ತಿ ಆರಂಭಿಸಿದರು. ಬಾಲ್ಯದಿಂದಲೂ ಪ್ರತಿ ಹೆಜ್ಜೆಗೂ ಕಷ್ಟ, ಅವಮಾನ, ಕುತೂಹಲ, ದೌರ್ಜನ್ಯಗಳಿಗೊಳಗಾಗುತ್ತಲೇ, ಸಮಾಜವನ್ನು ಎದುರಿಸುವ ನಿರ್ಭಯವನ್ನು ಬೆಳೆಸಿಕೊಳ್ಳುತ್ತಲೇ ಬರುತ್ತಾರೆ. ರೌಡಿಗಳ, ಪೊಲೀಸರ, ರಾಜಕೀಯ ಧುರೀಣರ, ಶ್ರೀಮಂತರ ಲೈಂಗಿಕ ತೃಷೆಗೆ ಒಳಗಾಗುತ್ತಲೇ ಸಮಾಜವನ್ನು ಎದುರಿಸುವ ದಿಟ್ಟತನವನ್ನೂ ನಳಿನಿ ತೋರುತ್ತಾರೆ. ನಳಿನಿ ಎಂದೂ ಬದುಕಿಗೆ ವಿಮುಖರಾಗಿ ಜೀವನೋತ್ಸಾಹ ಕಳೆದುಕೊಳ್ಳುವುದಿಲ್ಲ. ಒಂದೆಡೆ ಲೈಂಗಿಕ ಕಾರ್ಯಕರ್ತೆಯರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಲೇ, ದೇಶದ ವಿವಿಧ ಸ್ಥಳಗಳಲ್ಲಿ ಭಾಷಣಗಳನ್ನು ಮಾಡುತ್ತಲೇ, ಅದೇ ವೃತ್ತಿಯಲ್ಲಿ ಮುಂದುವರಿಯುವುದು ಅವರ ಸ್ವಾಯತ್ತ ಬದುಕಿನ ಭಾಗವಾಗಿದೆ. ನಳಿನಿ ಲೈಂಗಿಕ ಕಾರ್ಯಕರ್ತೆಯಾಗಿ ತಮ್ಮ ವೃತ್ತಿಯನ್ನು ಎಲ್ಲೂ ಕೀಳಾಗಿ ಕಂಡಿಲ್ಲ.

ಪುರುಷಪ್ರಧಾನ ವ್ಯವಸ್ಥೆಯೊಳಗೆ ಇದ್ದುಕೊಂಡು ನಮ್ಮ ಸ್ವಾಯತ್ತತೆಯನ್ನು ಪ್ರತಿಭಟನೆ ಹಾಗೂ ಹಕ್ಕಿನಿಂದ ಪಡೆದು–ಕೊಂಡು ಬದುಕಬೇಕಾದದ್ದು ಅನಿವಾರ್ಯ ಸಂಗತಿ ಎಂಬ ಮಾತನ್ನು ವ್ಯಕ್ತಪಡಿಸುತ್ತಾರೆ.

ಈ ಎಲ್ಲಾ ಆತ್ಮಕಥನಗಳು ಪ್ರತಿಯೊಬ್ಬ ಮಹಿಳೆಯು ದಾಟಿ ಬಂದಂತಹ ಕಲ್ಲು–ಮುಳ್ಳುಗಳ ಹಾದಿಯನ್ನು ಸ್ಪಷ್ಟವಾಗಿಯೇ ತೆರೆದು ತೋರಿಸುತ್ತವೆ. ವೈಯಕ್ತಿಕ ನೆಲೆಯಲ್ಲಿ ಏಕಾಂಗಿಯಾಗಿ ಜೀವನವನ್ನು ಎದುರಿಸಬೇಕಾಗಿ ಬಂದರೂ, ಕ್ರೌರ್ಯ ಸುತ್ತಲೂ ಕುಣಿಯುತ್ತಿದ್ದರೂ, ಯಾರು ಅಸಹಾಯಕತೆಯಿಂದ ಕುಗ್ಗಲಿಲ್ಲ ಎನ್ನುವುದೇ ವಿಶಿಷ್ಟವಾಗಿದೆ. ಇಷ್ಟೆಲ್ಲಾ ಅಪಮಾನಗಳನ್ನು, ಕಿರುಕುಳಗಳನ್ನು, ಅಸಹಕಾರವನ್ನು ಸಹಿಸಿಯೂ ಸಾಧನಾ ಪಥದಲ್ಲಿ, ತಮ್ಮ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರುವ, ಧೈರ್ಯ–ಛಲ, ಸಾಧನೆಯಂತಹ ಮೌಲ್ಯಗಳು ತುಂಬು ಗೌರವಕ್ಕೆ ಅರ್ಹವಾಗಿರುವಂತಹದ್ದು. ಎಲ್ಲಾ ಆತ್ಮಕಥೆಗಳಲ್ಲೂ ದಾಖಲಾಗಿರುವುದು ಬದುಕಿನ ಹೋರಾಟದಲ್ಲಿ, ಅಲ್ಲಿನ ತಾಕಲಾಟಗಳಲ್ಲಿ ಇವರಾರೂ, ಯಾವ ಮೌಲ್ಯಗಳನ್ನೂ ಕಳೆದುಕೊಳ್ಳದೆ, ಧೈರ್ಯದಿಂದ ಜೀವನವನ್ನು ಎದುರಿಸಿರುವುದು. ಇಲ್ಲಿನ ಒಬ್ಬೊಬ್ಬ ಮಹಿಳೆಯ ಆತ್ಮಕಥನವೂ ಹೆಣ್ಣುಮಕ್ಕಳಿಗೆ ಆತ್ಮಸ್ಥೈರ್ಯವನ್ನು, ನೈತಿಕ ಬಲವನ್ನು ತುಂಬಿ ಸ್ವಾಯತ್ತ ಬದುಕನ್ನು ಕಟ್ಟಿಕೊಳ್ಳುವಂತೆ ಪ್ರೇರೆಪಿಸುತ್ತವೆ.

■■

**ಪರಮಾರ್ಶನ ಗ್ರಂಥಗಳು:**

1. ಅನುಪಮಾ ನಿರಂಜನ, ನೆನಪು ಸಿಹಿ–ಕಹಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 2019.
2. ಇಂದಿರಾ ಲಂಕೇಶ್, ಹುಳಿಮಾವು ಮತ್ತು ನಾನು, ಲಂಕೇಶ್ ಪ್ರಕಾಶನ, ಬೆಂಗಳೂರು, 2021.
3. ಕಲ್ಯಾಣರಾವ್ ಜಿ. ಪಾಟೀಲ್, ಶೈಲಜಾ ಶರಣಗೌಡ (ಸಂ.), ಮಹಿಳಾ ಸಾಹಿತ್ಯ ಸಂ–9, ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, 2022.
4. ಗಣಪತಿ ಬಿ. (ನಿರು.), ಬೆಂಕಿ ಬೆಡಗು (ಉಮಾಶ್ರೀ ಒಡಲಾಳ ಆತ್ಮಕಥನ), ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2013.
5. ಜ್ಯೋತಿ ಶಂಕರ್, ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2022.
6. ನಾರಾಯಣಸ್ವಾಮಿ ಕೆ (ಅನು.), ನಳಿನಿ ಜಮೀಲಾ(ಮ.ಮೂ.), ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, 2009.
7. ಪ್ರತಿಭಾನಂದಕುಮಾರ್, ಅನುದಿನದ ಅಂತರಗಂಗೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2014.
8. ಪ್ರೀತಿ ನಾಗರಾಜ್ (ನಿರು.), ಕಣ್ಣಾಮುಚ್ಚೇ ಕಾಡೇಗೂಡೆ (ರಂಗಕಲಾವಿದೆ ಬಿ ಜಯಶ್ರೀ ಆತ್ಮಕಥೆ), ಮನೋಹರ ಗ್ರಂಥಮಾಲಾ, ಧಾರವಾಡ, 2016.
9. ವಿಜಯಾ, ಕುದಿ ಎಸರು, ನಾಕುತಂತಿ ಪ್ರಕಾಶನ, ಬೆಂಗಳೂರು, 2018.

**ಲೇಖನಗಳು:**

1. ಗೀತಾ ವಸಂತ, ಮಹಿಳಾ ಆತ್ಮಕಥೆಗಳೆಂಬ ಅಂತರಂಗದ ಪುಟಗಳು, ಬುಕ್ ಬ್ರಹ್ಮ ಅಂತರ್ಜಾಲದಲ್ಲಿನ ಲೇಖನ, ಮಾರ್ಚ್4, 2022.
2. ನೂತನ ದೋಶೆಟ್ಟಿ, ಮಹಿಳೆಯರ ಆತ್ಮಕಥೆ ಎಂಬ ಕುತೂಹಲ, ಹಿತೈಷಿಣಿ ಅಂತರ್ಜಾಲದಲ್ಲಿನ ಲೇಖನ, ಆಗಸ್ಟ್ 11, 2019.

ISSN: 2320-9941
ಪ್ರತಿಸ್ಪಂದ । Prathispandha

# ಚಂದ್ರಾವತಿ ರಾಮಾಯಣ : ಸ್ತ್ರೀ ಸಂವೇದನೆಗಳ ಭಾವಲೋಕ

● ಡಾ. ಸೈಯದ್ ಮುಯಿನ್

ಧರ್ಮವು ಮಾನವನ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿದೆ. ಭಾರತೀಯ ಹಿಂದೂ ಸಾಮಾಜಿಕ ಜೀವನವನ್ನು ಅತಿಯಾಗಿ ಪ್ರಭಾವಿಸಿದ ಮಹಾಕಾವ್ಯಗಳಲ್ಲಿ ರಾಮಾಯಣ ಮತ್ತು ಮಹಾಭಾರತ ಮಹತ್ವದ ಕಾರ್ಯಮಾಡಿದೆ. ಸಾಹಿತಿಗಳಿಗೆ ರಾಮಾಯಣದ ವಸ್ತು, ಕಥೆ, ಪಾತ್ರಗಳು ಸದಾ ಚಿಂತನೆಗೆ ಎಡೆ ಮಾಡಿಕೊಟ್ಟಿದೆ, ಅನ್ಯ ಧರ್ಮಗಳ ದೃಷ್ಟಿಯಲ್ಲಿ ರಾಮಾಯಣದ ವಿವಿಧ ಆವೃತ್ತಿಗಳನ್ನು ಕಾಣಬಹುದು, ಕಾಲದ ಪರಿಧಿಯೊಳಗೆ ಕವಿವರ್ಯರು ತಾವಿದ್ದ ಸಮಾಜದ ಅವಶ್ಯಕತೆಗನುಗುಣವಾಗಿ ಹಲವು ರಾಮಾಯಣಗಳನ್ನು ರಚಿಸಿರುವುದನ್ನು ಕಾಣಬಹುದು. ಕವಿ ವಾಲ್ಮೀಕಿ ಬರೆದ ರಾಮಾಯಣದ ಅಂಗೀಕೃತ ಆವೃತ್ತಿಯಾಗಿದ್ದರೂ, ವಿದ್ವಾಂಸರು ಕನಿಷ್ಠ 300 ಆವೃತ್ತಿಗಳಿವೆ ಎಂದು ಹೇಳುತ್ತಾರೆ. ಇವು ಜಾನಪದ ಅಥವಾ ಪ್ರಾದೇಶಿಕ ಸಾಹಿತ್ಯದ ಭಾಗವಾಗಿ ಅಸ್ತಿತ್ವದಲ್ಲಿವೆ ಮತ್ತು ಹೆಚ್ಚಿನ ಧಾರ್ಮಿಕ ಮಹತ್ವವನ್ನು ಪಡೆದಿಲ್ಲ.

ರಾಮಾಯಣವನ್ನು ರಾವಣನ, ಸೀತೆಯ, ಹನುಮನ, ಲಕ್ಷ್ಮಣನ, ಊರ್ಮಿಳೆಯ ದೃಷ್ಟಿಕೋನದಲ್ಲಿ ಚಿತ್ರಿಸಿದ್ದಾರೆ. ವಿವಿಧ ದೃಷ್ಟಿಕೋನಗಳಿಂದ ಚಿತ್ರಿಸಿದ ರಾಮಾಯಣದ ಈ ಬಹು ವಿಧವಾದ ಕಥೆಗಳ ಕರ್ತೃಗಳೆಲ್ಲಾ ಪುರುಷರೇ ಆಗಿರುವುದು ಪ್ರಮುಖವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಸ್ತ್ರೀಯೊಬ್ಬಳು ತನ್ನ ದೃಷ್ಟಿಕೋನದಿಂದ ರಾಮಾಯಣವನ್ನು ನೋಡಿದ ವಿಶ್ಲೇಷಿಸಿದ ಬಗೆಯು ಬಹಳ ಕುತೂಹಲಕಾರಿ ವಿಷಯವಾಗಿದೆ. ಸ್ತ್ರೀ ರಚಿತ ರಾಮಾಯಣಗಳ ಶೋಧನೆಯಲ್ಲಿ ಹೊರಟಾಗ ಲಭಿಸಿದ ಪ್ರಮುಖ ಸ್ತ್ರೀ ಕವಿಗಳೆಂದರೆ ಆಂಧ್ರಪ್ರದೇಶದ 'ಆತುಕೂರಿ ಮೊಲ್ಲ'(1440–1530) ರಚಿಸಿದ 'ಮೊಲ್ಲ ರಾಮಾಯಣ' ಮತ್ತು ಇದೇ ಕಾಲಘಟ್ಟದ ಆಸುಪಾಸಿನಲ್ಲಿದ್ದ ಪೂರ್ವಬಂಗಾಳದ 'ಚಂದ್ರಾವತಿ' ರಚಿತ ರಾಮಾಯಣ

**ವಿಳಾಸ:** ಡಾ. ಸೈಯದ್ ಮುಯಿನ್
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ,
ಕೆ.ನಾರಾಯಣಪುರ, ಕೊತ್ತನೂರು ಅಂಚೆ,
ಬೆಂಗಳೂರು–560077
ದೂರವಾಣಿ ಸಂಖ್ಯೆ:99729252077

ಮತ್ತು 20ನೇ ಶತಮಾನದ ತೆಲುಗಿನ ಮುಪ್ಪಲ ರಂಗನಾಯಕಮ್ಮ ಅವರ 'ರಾಮಾಯಣ ವಿಷವೃಕ್ಷಂ' ಪ್ರಮುಖ ರಚನೆಗಳಾಗಿ ಕಾಣಿಸಿಕೊಳ್ಳುತ್ತವೆ.

ಆಧುನಿಕ ಭಾರತದಲ್ಲಿ ಸ್ತ್ರೀವಾದಿ ಪ್ರಭಾವದಿಂದ ಹಲವು ಮಹಿಳಾ ಲೇಖಕಿಯರು ಸೀತೆ, ಅಹಲ್ಯೆ, ಊರ್ಮಿಳೆ ಮತ್ತಿತ್ತರ ಮಹಿಳಾ ಪಾತ್ರಗಳನ್ನು ಪ್ರಧಾನವಾಗಿಟ್ಟುಕೊಂಡು ರಾಮಾಯಣವನ್ನು ಹೊಸ ದೃಷ್ಟಿಕೋನದಿಂದ ರಚಿಸಿರುವುದನ್ನು ಗಮನಿಸಬಹುದು. 'ಪಿ.ಲಲಿತಾ ಕುಮಾರಿ' The Liberation of Sita ಕೃತಿಯನ್ನು ಇಂಗ್ಲೀಷಿನಲ್ಲಿ ರಚಿಸಿದ್ದಾರೆ. ಕವಿತಾ ಕಾನೆ ಅವರು Sita's Sister (2014), Lanka's Princess (2016), Ahalya's Awakening (2019) ಕೃತಿಗಳನ್ನು ಇಂಗ್ಲೀಷಿನಲ್ಲಿ ರಚಿಸಿದ್ದಾರೆ. ಅರ್ಶಿಯಾ ಸತ್ತಾರ್ ಇವರು ಸಂಸ್ಕೃತದಿಂದ ರಾಮಾಯಣವನ್ನು ಇಂಗ್ಲೀಷಿಗೆ ಅನುವಾದಿಸಿದ್ದಾರೆ, ರಾಮಾಯಣ ಕುರಿತು ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. 'ಸಂಹಿತ ಅರ್ಣಿ' ಇಂಗ್ಲೀಷಿನಲ್ಲಿ ಬರೆದಿರುವ 'Sita's Ramayana ಪ್ರಮುಖ ಕೃತಿಯಾಗಿದೆ. 'ಮಾನಿನಿ ಜೆ. ಆನಂದಿನಿ' ಅವರ Mandodari: Queen of Lanka (2018) ರಚಿಸಿದ್ದಾರೆ.

ತಿಣುಕಿದನು ಫಣಿರಾಯ ರಾಮಾಯಣಗಳ ಭಾರದಲಿ ಎಂಬ ಕುಮಾರವ್ಯಾಸನ ಮಾತು 15–16ನೇ ಶತಮಾನದಲ್ಲಿ ಯತೇಚ್ಛವಾಗಿ ರಚಿತವಾಗಿರುವ ರಾಮಾಯಣಗಳ ಸಂಖ್ಯೆಯನ್ನು ಊಹಿಸಬಹುದು. ರಾಮಾಯಣ ಬರೆಯುವುದಕ್ಕಿಂತ ಮಹಾಭಾರತದ ಕಥಾವಸ್ತುವನ್ನು ತನ್ನ ಕಾವ್ಯಕ್ಕೆ ಆರಿಸಿಕೊಂಡಿರುವುದಾಗಿ ಕಾಣಬಹುದು. ಭಾರತದ ಪ್ರಮುಖ ಭಾಷೆಗಳಲ್ಲಿ ಹಲವು ರಾಮಾಯಣಗಳು ರಚಿತಗೊಂಡಿದ್ದವು, ಬಂಗಾಳಿ ಭಾಷೆಯಲ್ಲಿ ರಚಿತ ಚಂದ್ರಾವತಿ ರಾಮಾಯಣದ ಕಥಾವಸ್ತುವೂ ಸಹ ವಿಶಿಷ್ಟವಾಗಿದೆ. 'ಚಂದ್ರಾವತಿ' ರಚಿಸಿರುವ ರಾಮಾಯಣವು ಕೇವಲ ಶೈಕ್ಷಣಿಕ ಆಸಕ್ತಿಯನ್ನಷ್ಟೇ ಪಡೆದಿಲ್ಲ, ಆಕೆಯ ಪದ್ಯಗಳು ಬಂಗಾಳದ ಗ್ರಾಮೀಣ ಮಹಿಳೆಯ ಜೀವನದಲ್ಲಿ ಹಾಸುಹೊಕ್ಕಿದೆ. ಚಂದ್ರಾವತಿ ಇರಬಹುದು ಅಥವಾ ತೆಲುಗಿನ 'ಆತುಕೂರಿ ಮೊಲ್ಲ' ಬರೆದಿರುವ ರಾಮಾಯಣಗಳು ಸಂಸ್ಕೃತ ಮಹಾಕಾವ್ಯವನ್ನು ಪ್ರಾದೇಶಿಕ ಭಾಷೆಗಳಲ್ಲಿನ ಜನರಿಗೆ ಹತ್ತಿರವಾಗುವಂತೆ ಮಾಡುವಲ್ಲಿ ಯಶಸ್ವಿಯಾದರು.

ಭಾರತೀಯ ಮತ್ತು ವಿಶ್ವ ಸಾಹಿತ್ಯದಲ್ಲಿ ವೀರರ ಕಥೆಗಳು ವಿಪುಲವಾಗಿ ದೊರೆಯುತ್ತದೆ. ಪುರುಷರೇ ಪ್ರಧಾನವಾದ ಪಾತ್ರರಾಗಿರುತ್ತಾರೆ. ಕಥಾ ನಾಯಕರಾಗಿ, ಕಥೆಯ ಕೇಂದ್ರವೇ ಅವರಾಗಿರುತ್ತಾರೆ. ಅವರ ಮುಂದಾಳತ್ವದಲ್ಲೇ ಕಥೆ ಮುಂದುವರಿಯುತ್ತದೆ ಮತ್ತು ಪುರುಷತ್ವವನ್ನು ಶ್ಲಾಘಿಸಲ್ಪಟ್ಟಿರುತ್ತದೆ. ಆದರೆ ಈ ಕಥಾಹಂದರಗಳಲ್ಲಿ ಮಹಿಳೆಯರ ಪಾತ್ರ ಮತ್ತು ಪ್ರತಿಕ್ರಿಯೆ, ತಿಳುವಳಿಕೆಗಳು ಏನು? ಮೊದಲೇ ಕಟ್ಟಲ್ಪಟ್ಟ ಕಟ್ಟಡದಿಂದ ಯಾವುದನ್ನು ತೆಗೆದುಹಾಕಬಹುದು, ಕಟ್ಟಡದ ಅಂದವನ್ನು ಹೆಚ್ಚಿಸುವಲ್ಲಿ ಯಾವುದನ್ನು ಹೊಸದಾಗಿ ಸೇರಿಸಬಹುದೆಂಬ ನಿರ್ಣಯಗಳು ಸವಾಲುಗಳನ್ನು ಒಡ್ಡುವಂತಹದ್ದು, ಈ ಸವಾಲುಗಳನ್ನು ಮೀರಿ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ತಮ್ಮ ಸಾಹಿತ್ಯದ ಮೂಲಕ ಸಾಮಾನ್ಯ ಜನರಿಗೆ ತಲುಪಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಹೊಸ ದೃಷ್ಟಿಕೋನವಷ್ಟೇ ಅಲ್ಲ, ಪುರುಷ ಪ್ರಧಾನ ಅಂಶಗಳನ್ನು ತ್ಯಜಿಸಿ ಸೀತೆಯ ದೃಷ್ಟಿಯಲ್ಲಿ ರಾಮಾಯಣದ ಕಥಾಹಂದರವನ್ನು ಹೆಣೆದವರಲ್ಲಿ 'ಚಂದ್ರಾವತಿ'ಯೂ ಒಬ್ಬರಾಗಿದ್ದಾರೆ. 'ನಬನೀತ್ ದೇವ್‌ಸೇನ್'1 ಅವರು 'ಚಂದ್ರಾವತಿ ರಾಮಾಯಣ'ವು ಭಕ್ತಿಗ್ರಂಥವಲ್ಲ, ಅದು 'ಜಾತ್ಯಾತೀತ ಗ್ರಂಥ'ವೆಂದು ಅಭಿಪ್ರಾಯ ಪಟ್ಟಿದ್ದಾರೆ. 'ಚಂದ್ರಾವತಿ' ಬರೆದ ರಾಮಾಯಣವು ದೈವಿಕ ರಹಸ್ಯದ ಕಥೆಯಾಗಿರದೆ, ಮಾನವ ನಾಟಕವಾಗಿದೆ. ಸ್ತ್ರೀ ದೃಷ್ಟಿಕೋನದಿಂದ ರಚಿತವಾದ ಏಕನಿರೂಪಣೆಯ ಕಥಾನಕವಾಗಿದೆ. ಸೀತೆಯಿಂದ ಆದಿಯಾಗಿ ಸೀತೆಯಲ್ಲೇ ಕೊನೆಗೊಳ್ಳುವ ಕಥೆಯಾಗಿದೆ. 700 ದ್ವಿಪದಿಗಳಿಗಿಂತ ಕಡಿಮೆ ಸಾಲುಗಳನ್ನು ಹೊಂದಿರುವ ಕಥಾವಸ್ತು ಇದಾಗಿದೆ. ತಮ್ಮ ಸಮಯದಲ್ಲಿ ಪ್ರಚಲಿತವಿದ್ದಂತಹ ವಾಲ್ಮೀಕಿ ಮತ್ತು ಬಾಂಗ್ಲಾದ ಕೃತ್ತಿವಾಸನ ಸಾಹಿತ್ಯದ ಜ್ಞಾನವನ್ನು 'ಚಂದ್ರಾವತಿ' ಅವರು ತಮ್ಮ ಸಾಹಿತ್ಯದಲ್ಲಿ ಪ್ರದರ್ಶಿಸಿದ್ದಾರೆ. ಪೂರ್ವಭಾರತ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿ, ಸ್ಥಳೀಯವಾಗಿ ಪ್ರಚಲಿತವಾಗಿದ್ದ ರಾಮಾಯಣದ ನಿರೂಪಣೆಗಳ ಪರಿಚಿತವಿದ್ದ ಚಂದ್ರಾವತಿಯೂ ಅವುಗಳ ಜೊತೆಗೆ ಸೀತೆಯ ಮಾನಸಿಕ ಪ್ರಪಂಚವನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದರಿಂದ ಇವುಗಳನ್ನು ತಮ್ಮ ಕಾವ್ಯದಲ್ಲಿ ಯಶಸ್ವಿಯಾಗಿ ಮೇಳೈಸಿದ್ದಾರೆ. ಆದರೂ ಕಥೆಯನ್ನು ಸಾಹಿತ್ಯದ ಯಾವುದೇ ಸಂಪ್ರದಾಯಕ್ಕೆ ಒಗ್ಗಿಸದೆ, ಆನು ಒಲಿದಂತೆ ಹಾಡುವೆ ಎನ್ನುವ ಹಾಗೆ ಸೀತಾ ಕಾವ್ಯವನ್ನು ಬರೆದಿದ್ದಾರೆ. 'ಚಂದ್ರಾವತಿ'ಯ ವಸ್ತುವಿನ ಮೂಲದ ಆಯ್ಕೆ ವಿಚಿತ್ರವಾಗಿರಲಿಲ್ಲ ಆದರೆ ಉದ್ದೇಶಪೂರ್ವಕವಾಗಿತ್ತು. ತುಳಸಿದಾಸರ ರಾಮಾಯಣವು ರಾಮನ ಆರಾಧನೆ, ಭಕ್ತಿಯ ಸ್ವರ ಹೊಂದಿದ್ದರೆ, ವಾಲ್ಮೀಕಿಯದು ನಾಯಕನ ಕಥೆ, ಆದರೆ 'ಚಂದ್ರಾವತಿ' ತನ್ನ ಸುತ್ತಮುತ್ತಲಿನ ಪ್ರಪಂಚದ ನಿರ್ದಿಷ್ಟ ತಿಳುವಳಿಕೆಯನ್ನು ವಿವರಿಸುವುದಾಗಿ ಆಕೆಯ ನಂಬಿಕೆ. ಇದೂ ಸತ್ಯವೂ ಆಗಿದೆ. ಕಾವ್ಯದಲ್ಲಿನ ಬದಲಾವಣೆಗಳು ಆಕೆಯ ಸಮಕಾಲೀನ ಪೂರ್ವ ಬಂಗಾಳದ ಸಾಂಸ್ಕೃತಿಕ, ನೈತಿಕ ಮತ್ತು ರಾಜಕೀಯ ವರ್ತನೆಗಳನ್ನು ಪ್ರತಿಬಿಂಬಿಸುತ್ತದೆ.

'ಚಂದ್ರಾವತಿ' ಮತ್ತು ಅವರ ರಾಮಾಯಣವು ಅವರ ಜೀವಿತಾವಧಿಯಲ್ಲಿಯೇ ಪ್ರಸಿದ್ಧವಾಗಿತ್ತು, ಏಕೆಂದರೆ

ಅವರ ಸಾಹಿತ್ಯಿಕ ಕಾರ್ಯವೂ ಗ್ರಾಮೀಣ ಬಂಗಾಳದ ಜನಪದ ಸಾಹಿತ್ಯವಾಗಿ ಮಾರ್ಪಟ್ಟಿತ್ತು. 20ನೇ ಶತಮಾನದಲ್ಲಿ 'ದಿನೇಶ್ಚಂದ್ರ ಸೇನ್' ಅವರು ಗ್ರಾಮೀಣ ಬಂಗಾಳದ ಸಾಹಿತ್ಯ ಕೃತಿಗಳನ್ನು ಸಂಯೋಜಿಸಲು ಪ್ರಾರಂಭಿಸಿದಾಗ ಚಂದ್ರಾವತಿ ರಾಮಾಯಣವು ವಿದ್ವತ್ಪೂರ್ಣ ವಿಮರ್ಶೆಗೆ ಒಳಪಟ್ಟಿತು. ಸೇನ್ ಅವರು ಚಂದ್ರಾವತಿ ರಾಮಾಯಣದ ಸುಮಾರು 54 ಲಾವಣಿಗಳನ್ನು ಸಂಗ್ರಹಿಸಿದರು, ಇದರಲ್ಲಿನ ಶ್ರೀಮಂತ ಸಾಹಿತ್ಯಿಕ ಅಂಶಗಳು ಬೆಳಕಿಗೆ ಬಂದವು. 'ದಿನೇಶ್‌ಚಂದ್ರ ಸೇನ್'(1866–1939) ಪ್ರಸಿದ್ಧ ಬರಹಗಾರ, ಶಿಕ್ಷಣ ತಜ್ಞ ಮತ್ತು ಜಾನಪದ ಸಂಶೋಧಕ, ಇವರು ಕಲ್ಕತ್ತಾ ವಿಶ್ವವಿದ್ಯಾಲಯದ ಬಂಗಾಳಿ ಭಾಷೆ ಮತ್ತು ಸಾಹಿತ್ಯ ವಿಭಾಗದ ಸಂಸ್ಥಾಪಕ ಅಧ್ಯಾಪಕ ಸದಸ್ಯರಾಗಿದ್ದರು. ಇವರು 'ಚಂದ್ರಾವತಿ'ಯ ಕೃತಿಯನ್ನು ಪ್ರಕಟಿಸಿದರು, ಸಾಕ್ಷ್ಯಗಳನ್ನು ಒದಗಿಸದಿದ್ದರು ಈ ಕೃತಿಯ ಕರ್ತೃ 'ಚಂದ್ರಾವತಿ'ಯೆಂದೇ ಉಲ್ಲೇಖಿಸಿದರು. ಸೇನ್ ಅವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಬಂಗಾಳಿ ರಾಮಾಯಣಗಳ ಕುರಿತು ಉಪನ್ಯಾಸಗಳ ಸರಣಿಯನ್ನು ಪ್ರಾರಂಭಿಸಿದರು, ನಂತರ ಇದನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಲಾಯಿತು. ಇದರಲ್ಲಿ 'ಚಂದ್ರಾವತಿ' ಮತ್ತು 'ಚಂದ್ರಾವತಿ' ವಿರಚಿತ ರಾಮಾಯಣವನ್ನು ಸಂಪೂರ್ಣ ಅಧ್ಯಾಯವನ್ನು ಮೀಸಲಿಟ್ಟರು.

ಸೀತೆಯ ಜನನದಿಂದ ಪ್ರಾರಂಭವಾಗುವ ಭಾಗ ಒಂದು ರಾಮಾಯಣದ ಸಾಂಪ್ರದಾಯಿಕ ಆರಂಭವಾದ ರಾಮನ ಜನ್ಮದೊಂದಿಗೆ ಕೊನೆಗೊಳ್ಳುತ್ತದೆ, ಮಂಡೋದರಿಗೆ ಚಿನ್ನದ ಮೊಟ್ಟೆಯೊಂದು ಜನಿಸುತ್ತದೆ, ಆಕೆ ಚಿನ್ನದ ಮೊಟ್ಟೆಯನ್ನು ಚಿನ್ನದ ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿ ಬಿಡುತ್ತಾಳೆ, ಆ ಮೊಟ್ಟೆಯನ್ನು ಬಡವನಾದ 'ಮಾಧವ' ಮತ್ತು 'ಸತ' ಎಂಬ ದಂಪತಿಗಳು ತಮ್ಮ ಮನೆಗೆ ತಂದಿರಿಸುತ್ತಾರೆ, ನಂತರ 'ಸತ' ತಾನು ಕಂಡ ಸ್ವಪ್ನದ ಪ್ರಕಾರ ಆ ಪೆಟ್ಟಿಗೆಯನ್ನು ರಾಜ ಜನಕನಿಗೆ ನೀಡುತ್ತಾರೆ, ಆ ಮೊಟ್ಟೆಯಿಂದ ಜನಿಸುವ ಕೂಸಿಗೆ 'ಸತ'ಳ ಹೆಸರನ್ನಿಡಬೇಕೆಂದು ಬೇಡಿಕೊಳ್ಳುತ್ತಾರೆ, ಅದರಂತೆ ಮೊಟ್ಟೆಯಿಂದ ಜನಿಸಿದ ಕೂಸನ್ನು 'ಸೀತಾ' ಎಂದು ನಾಮಕರಣ ಮಾಡಲಾಗುತ್ತದೆ. ಭಾಗ2ರಲ್ಲಿ ಸೀತೆಯ ಅಗ್ನಿಪ್ರವೇಶವ್ನನು ಕಾಣುತ್ತೇವೆ. 'ಚಂದ್ರಾವತಿ'ಯು ಸೀತೆಯನ್ನು ರಾವಣನ ವಶದಲ್ಲಿದ್ದ ಹನ್ನೆರಡು ತಿಂಗಳೂಗಳನ್ನು ತನ್ನ ಮಾತಿನಲ್ಲಿ ವಿವರಿಸಿದ್ದಾಳೆ. ಸಂಕೇತಗಳು, ಉಪಮೆ ರೂಪಕಗಳ ಬಳಕೆಯ ಪಾಂಡಿತ್ಯವನ್ನು ಆಷಾಢ ಮಾಸವನ್ನು ಸೀತೆಯ ದುಖಭರಿತವಾದ ಭಾವನೆಗಳನ್ನು ಸ್ವತಃ ಅನುಭವಿಸಿ ಚಿತ್ರಿಸಿದಂತೆ ಆಕರ್ಷಕ ಮತ್ತು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಚಂದ್ರಾವತಿಯು ಸೀತೆಯ ಹನ್ನೆರೆಡು ತಿಂಗಳ ದುಃಖಪೂರಿತ ಕಥೆಯೇ ರಾಮಾಯಣದ ಕಥೆಯಲ್ಲದೆ ಬೇರೇನೂ ಅಲ್ಲವೆಂದು ಚಿತ್ರಿಸಿದ್ದಾರೆ*. ರಾವಣನ ಸೆರೆಯಲ್ಲಿದ್ದಾಗ ಸೀತೆಯು ಪರಿಶುದ್ಧಳಾಗಿದ್ದಳೇ ಎಂಬ ಅನುಮಾನದ ಮೇಲೆ ರಾಮನಿಂದ ಸೀತೆಯು ವನವಾಸಕ್ಕೆ ಹೊರಡುವುದನ್ನು ಭಾಗ ಮೂರರಲ್ಲಿ ಕಾಣಬಹುದು. ರಾಮನ ಈ ನಡೆಯನ್ನು ಹಲವು ಕವಿಗಳು, ಸಾಹಿತಿಗಳು, ಪಂಡಿತ, ಪಾಮರರು ತಮ್ಮ ರಚನೆಗಳಲ್ಲಿ ರಾಮನ ಪರವಾಗಿ ಸೀತೆಯಲ್ಲಿ ಕ್ಷಮೆಯಾಚಿಸಿದರು, ಇದಕ್ಕೆ ವಿಧಿ ಕಠೋರತೆಯನ್ನು ದೂಷಿಸಿದರು, ಆದರೆ 'ಚಂದ್ರಾವತಿ'ಯು ಇತರೆ ಬರಹಗಾರರಂತೆ, ವ್ಯಾಖ್ಯಾನಕಾರರಂತೆ ವಿಧಿ ಬರಹಕ್ಕೆ ದೂಷಿಸದೆ ರಾಮನನ್ನು ಆತನ ನಡೆಗೆ ಬಹಿರಂಗವಾಗಿ ಖಂಡಿಸಿದ್ದಾರೆ.

'ಚಂದ್ರಾವತಿ'ಯು ತನ್ನ ಕಥಾ ನಿರೂಪಣೆಯು 'ಕೇಳಿ ನನ್ನ ಸಖಿಯರೇ' ಎಂಬ ಸಂಬೋಧನೆಯಿಂದ ಪ್ರಾರಂಭವಾಗುವುದರಿಂದ ಇದು ಸ್ತ್ರೀ ಕಥನವೆಂದು ಸ್ಪಷ್ಟವಾಗುತ್ತದೆ. ಇಲ್ಲಿ ಸೀತೆ ತನ್ನ ನೋವನ್ನು, ವೇದನೆಯನ್ನು ಸ್ತ್ರೀಯರಿಗೆ ಸಂಬೋಧಿಸುತ್ತಿದ್ದಾಳೆಯೇ ಹೊರತು ಪುರುಷ ವರ್ಗಕ್ಕಲ್ಲ, ಕಾರಣ ಅವಳ ನೋವನ್ನು ಹೆಣ್ಣೇ ಅರ್ಥಮಾಡಿಕೊಳ್ಳಲು ಸಾಧ್ಯವೇ ವಿನಾ ಪುರುಷನಲ್ಲ ಎಂಬ ಸತ್ಯ ಅವಳಿಗೂ ಅರಿವಾಗಿದೆ. ಇಲ್ಲಿ ಪೌರಾಣಿಕ ಮಹಾಕಾವ್ಯಗಳಲ್ಲಿ ಪ್ರಾರಂಭವಾಗುವಂತೆ ದೇವತಾಸ್ತುತಿ, ಸಾಂಪ್ರದಾಯಿಕ ರೀತಿಗಳನ್ನು ತ್ಯಜಿಸಲಾಗಿದೆ. ಶಿವಭಕ್ತೆಯಾಗಿದ್ದರು ತನ್ನ ತಂದೆಯ ಇಚ್ಛೆಯ ಮೇರೆಗೆ ರಾಮಾಯಣವನ್ನು ಬರೆಯುತ್ತಾಳೆ. ರಾಮನ ಪರಿಕಲ್ಪನೆ ಮತ್ತು ರಾಮನ ಜನನದಿಂದ ಪ್ರಾರಂಭವಾಗುವ ರೂಢಿಗತ ಮಹಾಕಾವ್ಯಗಳಿಗಿಂತ ಭಿನ್ನವಾಗಿ 'ಚಂದ್ರಾವತಿ'ಯ ರಾಮಾಯಣವು ಸೀತೆ–ಯ ಜನ್ಮದ ಹಿಂದಿನ ಕಥೆಯೊಂದಿಗೆ ಪ್ರಾರಂಭವಾಗುತ್ತದೆ. ಈ ರೀತಿಯ ಪ್ರಾರಂಭದೊಂದಿಗೆ 'ಚಂದ್ರಾವತಿ'ಯು ಅನ್ಯಾಯಕ್ಕೊಳಗಾದ ಸೀತೆ ಮತ್ತು ಮಂಡೋದರಿಯ ಜೀವನವನ್ನು ಹೆಣೆದಿದ್ದಾಳೆ. ಇಲ್ಲಿ ಮಂಡೋದರಿಯು ಸ್ವತಃ ದುಖ ಮತ್ತು ನಿರ್ಲಕ್ಷ್ಯದಿಂದ ಕೂಡಿದ್ದಾಳೆ, ಏಕೆಂದರೆ ರಾವಣನು ತನ್ನ ಹೆಂಡತಿಗಿಂತ ಅಂತಃಪುರದಲ್ಲಿದ್ದ ಇತರೆ ನೂರಾರು ಹೆಣ್ಣುಗಳೊಂದಿಗೆ ಸಮಯ ಕಳೆಯುವವನಾಗಿದ್ದಾನೆ. 'ಚಂದ್ರಾವತಿ'ಯು ಸೀತೆ ಮತ್ತು ಮಂಡೋದರಿಯ ಭವಿಷ್ಯವನ್ನು ತಾಯಿ ಮತ್ತು ಮಗಳಂತೆ ಪ್ರಸ್ತುತಪಡಿಸುವ ಮೂಲಕ ಒಟ್ಟಿಗೆ ಜೋಡಿಸಿದ್ದಾರೆ. ಮಂಡೋದರಿಯು ಸೀತೆಯನ್ನು ವಿಶೇಷವಾದ ಮದ್ದನ್ನು ಸೇವಿಸುವ ಮೂಲಕ ಜನ್ಮ ನೀಡುತ್ತಾಳೆ, ಈ ಮೂಲಕ ಸೀತೆಯ ಜನನವಾಗುತ್ತದೆ. ತಾಯಿ ಮಗಳು ಇಬ್ಬರು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಗಂಡಂದಿರ ನಡವಳಿಕೆಯಿಂದಾಗಿ ಸಂಕಟವನ್ನುಂಡವರೇ ಆಗಿದ್ದಾರೆ ಎಂದು ಕಥಾಭಾಗದಲ್ಲಿ ಚಿತ್ರಿಸಿದ್ದಾರೆ.

'ಚಂದ್ರಾವತಿ'ಯು ಚಿತ್ರಿಸಿದ ರಾಮನು ಆದರ್ಶ ಆಡಳಿತಗಾರನಲ್ಲ, ಆದರೆ ಸೀತೆಯನ್ನು ಗಡಿಪಾರು ಮಾಡಿದ ಶಂಕಾಗ್ರಸ್ತ ವ್ಯಕ್ತಿಯೆಂದು ರಾಮನ ಪ್ರತಿ ಅಸಮಧಾನ ವ್ಯಕ್ತಪಡಿಸುತ್ತಾರೆ. ರಾಮನ ಈ ಒಂದು ಕ್ರಿಯೆಯಿಂದಾಗಿ ಅವನ ವ್ಯಕ್ತಿತ್ವ ನಾಶವಾಗಿದೆ ಎಂದು ಹೇಳುತ್ತಾಳೆ, 'ಚಂದ್ರಾವತಿ ರಾಮಾಯಣ'ವು ಪಂಡಿತ ಪಾಮರ ವರ್ಗದವರಲ್ಲಿ ತಿರಸ್ಕೃತವಾಗಿರಬಹುದು, ಆದರೆ ಅವಳ ಈ ಸಾಹಿತ್ಯಿಕ ಕಾರ್ಯವು ಜನಸಾಮಾನ್ಯರ ಮಟ್ಟಿಗೆ, ಸ್ತ್ರೀ ಸಂವೇದನೆಗಳ ಆಗರವೇ ಆಗಿದೆ.

'ಚಂದ್ರಾವತಿಯ ರಾಮಾಯಣ'ವು ರಾಮನ ಕಾರ್ಯಗಳಿಗಾಗಿ ಟೀಕಿಸುವವರೆಗೂ ಹೋಗುತ್ತದೆ, ಇದು ರಾಮಾಯಣದ 300ಕ್ಕೂ ಹೆಚ್ಚು ಆವೃತ್ತಿಗಳಲ್ಲಿ ಬಹಳ ಅಪರೂಪವಾಗಿದೆ. ರಾಮ ಸೀತೆಯನ್ನು ಗಡಿಪಾರು ಮಾಡಲು ನಿರ್ಧರಿಸಿದಾಗ, ಅವಳ ನಿಷ್ಠೆಯನ್ನು ಅನುಮಾನಿಸಿದಾಗ, ಚಂದ್ರಾವತಿಯ ಮಾತುಗಳು ಕೋಪದ ಕಟ್ಟೆಯನ್ನು ಮುರಿಯುತ್ತವೆ:

ಕಾಡ್ಗಿಚ್ಚುಗಳಿಂದ ಕಾಡುಗಳು ಉರಿಯುತ್ತಿದ್ದಂತೆ,
ನದಿಗಳು ಪ್ರವಾಹದಿಂದ ಉಕ್ಕಿ ಹರಿಯುತ್ತಿದ್ದಂತೆ,
ರಾಮನ ಕೋಪೋದ್ರಿಕ್ತ, ಹುಚ್ಚು,
ದಾಸವಾಳದಂತಹ ಕೆಂಪು ಬಣ್ಣದ ರಕ್ತವು
ರಾಮನ ದೇವಾಲಯಗಳೆಂಬ ಕಣ್ಣುಗಳಿಗೆ ನುಗ್ಗಿತು,
ಮೂಗಿನ ಹೊಳ್ಳೆಗಳು ಬೆಂಕಿಯನ್ನು ಉಸಿರಾಡಿದವು,
ಅವನ ತಲೆಯ ಕಿರೀಟವು ಬಿರುಕು ಬಿಡುತ್ತಿತ್ತು.
ಆ ದಿನ ಕುಕುಯಾ ಹೊತ್ತಿಸಿದ ಬೆಂಕಿಯಲ್ಲಿ,
ಸೀತಾದೇವಿಯು ರಾಮನೊಡನೆ ಸುಡುತ್ತಿದ್ದಳು
ಮತ್ತು ಅಯೋಧ್ಯಾ ನಗರವೂ ಉರಿಯುತ್ತದೆ,
ಲಕ್ಷ್ಮಿಯಿಂದ ತ್ಯಜಿಸಲ್ಪಟ್ಟ ರಾಜ್ಯವು ನಾಶವಾಗುತ್ತದೆ
ಇತರರ ಮಾತುಗಳಿಗೆ ಕಿವಿಗೊಡುವುದು ನಿಮ್ಮ ಸ್ವಂತ ನಾಶಕ್ಕೆ ಕಾರಣವಾಗುತ್ತದೆ.
ಚಂದ್ರಾವತಿ ಹೇಳುತ್ತಾಳೆ, ಬಡ ರಾಮನೇ, ನೀವು ಸಂಪೂರ್ಣವಾಗಿ ನಿಮ್ಮ ಮನಸ್ಸನ್ನು ಕಳೆದುಕೊಂಡಿದ್ದೀರಿ.

ಚಂದ್ರಾವತಿಯ ರಾಮಾಯಣವು ಏಕಕಾಲದಲ್ಲಿ ಅನೇಕ ಉಪಕ್ರಮಗಳನ್ನು ಮಾಡುತ್ತದೆ. ದಿನನಿತ್ಯದ ಮಹಿಳೆಯೊಂದಿಗೆ ದೇವತೆಯನ್ನು ಹೋಲಿಸುವ ಮೂಲಕ, ಇದು ಭಾರತದಲ್ಲಿನ ಮಹಿಳೆಯರ ಸ್ಥಿತಿಯನ್ನು ತೊಂದರೆಗೊಳಿಸುತ್ತದೆ. ಅದರೊಂದಿಗೆ, ಸೀತೆಯ ದುಃಖವನ್ನು ವ್ಯಕ್ತಪಡಿಸುವ ಈ ಕಥೆಯು ಒಗ್ಗಟ್ಟಿನ ಮತ್ತು ಶಕ್ತಿಯ ಪ್ರಾತಿನಿಧ್ಯವೂ ಆಗುತ್ತದೆ, ಇದು ಮಹಿಳೆಯರಿಗೆ ಸಂವಹನ ಮಾಡಲು ಮತ್ತು ಸಮಯ ಮತ್ತು ಸ್ಥಳದ ಅಡೆತಡೆಗಳ ಮೂಲಕ ಸಮುದಾಯವನ್ನು ಹುಡುಕಲು ಅನುವು ಮಾಡಿಕೊಡುತ್ತದೆ.

ಕಾವ್ಯದ ಎರಡನೇ ಭಾಗವು ಬರೋಮಾಸಿ ಶೈಲಿಯನ್ನು ಅಳವಡಿಸಿಕೊಂಡಿದೆ, ಇದು ಉತ್ತರ ಭಾರತದಾದ್ಯಂತ ಮಹಿಳೆಯರಿಂದ ಸಂಯೋಜಿಸಲ್ಪಟ್ಟ ಮತ್ತು ಹಾಡಲ್ಪಟ್ಟ ಕವಿತೆಗಳಾಗಿವೆ. ಈ ಹಾಡುಗಳು ಸ್ತ್ರೀ ಅನುಭವವನ್ನು ವರ್ಷಗಳ ವಿವಿಧ ಋತುಗಳೊಂದಿಗೆ ಸಂಯೋಜಿಸುವ ಮೂಲಕ ಅಭಿವ್ಯಕ್ತಗೊಳಿಸಿದವು. ಅಳುವ ವಿಷಯವು ಮಹಿಳೆಯಾಗಿ ಅನಿವಾರ್ಯವಾಗಿ ಭಾಗವಾಗಿರುವ ನೋವು ಮತ್ತು ಸಂಕಟವಾಗಿತ್ತು. ಬರೋಮಾಸಿ ಶೈಲಿಯಲ್ಲಿ ಬರೆಯುವ ಮೂಲಕ, ಚಂದ್ರಾವತಿ ಸೀತೆಯನ್ನು ಯಶಸ್ವಿಯಾಗಿ ಪ್ರತಿಯೊಬ್ಬ ಮಹಿಳೆಯನ್ನಾಗಿ ಪರಿವರ್ತಿಸುತ್ತಾಳೆ – ಭಾರತದಲ್ಲಿ ಹೆಣ್ತನದ ಪ್ರತಿನಿಧಿ, ಬದಲಿಗೆ ಮಹಾಕಾವ್ಯಗಳಲ್ಲಿ ಕ್ರೋಡೀಕರಿಸಿದ ಸಾಧಿಸಲಾಗದ ಹೆಣ್ತನದ ಪ್ರತೀಕವಾಗುತ್ತಾಳೆ.

15ನೇ ಶತಮಾನದ ನಂತರದಲ್ಲಿ ರಾಮಾಯಣವನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಲು ಪ್ರಾರಂಭವಾಯಿತು, ರಾಮನನ್ನು ಕೇವಲ ವೀರ, ಉನ್ನತ ವ್ಯಕ್ತಿತ್ವವುಳ್ಳ ದೊರೆಯನ್ನಾಗಿ ಅಷ್ಟೇ ನೋಡದೇ ಆತನನ್ನು ವಿಷ್ಣುವಿನ ಅವತಾರವೆಂದು ವೈಭವೀಕರಿಸಲಾಯಿತು. ಪಂಡಿತ ಪಾಮರರ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದ್ದ ರಾಮನ ಕಥೆಯು ಜನಸಾಮಾನ್ಯರ ವಿವೇಚನೆಗೂ ಒಳಪಟ್ಟಿತು, ಜನಪದರು ವಿವಿಧ ದೃಷ್ಟಿಕೋನದಿಂದ ರಾಮಾಯಣವನ್ನು ಮನೆಮನೆಯ ಸಂಬಂಧಗಳು ಮತ್ತು ಸೀತೆಯ ಪರಿಸ್ಥಿತಿಗಳನ್ನು ತಮ್ಮ ಹೆಣ್ಣು ಮಗುವಿಗೆ ಒದಗಿದೆ ಸ್ಥಿತಿಯೆಂದು ಭಾವಿಸಿ ಮರುಕಪಟ್ಟರು, ಮಹಿಳಾ ದೃಷ್ಟಿಕೋನದಿಂದ ಕಾವ್ಯ ಸೃಷ್ಟಿಗೊಂಡವು. ಮೊದಲ ಬಾರಿಗೆ ರಾಮಾಯಣದ ಕೆಲವು ಉಪೇಕ್ಷಿತ ಪಾತ್ರಗಳನ್ನು ಬಲಿಪಶುಗಳಂತೆ ಗೋಚರಗೊಂಡವು. ಗದ್ಯ, ನಾಟಕ ಮತ್ತು ಕಾವ್ಯಗಳ ಮೂಲಕ ಗ್ರಾಮೀಣ ಸೊಗಡಿನ ಸಾಹಿತ್ಯ ರಚಿತಗೊಂಡವು. ತಮಗೆ ಹತ್ತಿರವಿರುವ ವಿಷಯಗಳ ಬಗ್ಗೆ ಮರುಕಥನಗಳು ಸೃಷ್ಟಿಗೊಂಡವು. ಜನಪದರು, ವಿದ್ವಾಂಸರು,

ISSN: 2320-9941


ರಾಮಾಯಣ ಕಥೆಯಲ್ಲಿ ಹೊಸ ಹೊಸ ಆಯಾಮಗಳನ್ನು ಸೃಷ್ಟಿಸಿದರು.

16ನೇ ಶತಮಾನದಲ್ಲಿ ಬರೆದ 'ಚಂದ್ರಾವತಿ ರಾಮಾಯಣ'ವನ್ನು ಸಾಹಿತ್ಯ ಪ್ರಪಂಚ ಎಂದಿಗೂ ಗಂಭೀರವಾಗಿ ಪರಿಗಣಿಸಲೇ ಇಲ್ಲ, ಎಂಬ ಅಂಶಕ್ಕೆ ಕಾರಣಗಳನ್ನು ನಬನೀತ್ ದೇಬ್ ಸೇನ್ ಅವರು ಕೆಳಗಿನ ಕಾರಣಗಳನ್ನು ನೀಡುತ್ತಾರೆ.

'ಚಂದ್ರಾವತಿ ರಾಮಾಯಣ'ವನ್ನು ಹಲವಾರು ವಿದ್ವಾಂಸರು, ಜನಸಾಮಾನ್ಯರು ಮುಂದಿನ ಕಾಲದಲ್ಲಿ ತಿರಸ್ಕರಿಸಿದರು, ಕಾರಣ ಇದು ಅಸಂಬದ್ಧವಾಗಿ ರಚಿಸಲ್ಪಟ್ಟ, ಅಪೂರ್ಣ, ಅಸಾಂಪ್ರದಾಯಿಕ ಪಠ್ಯವೆಂಬುದೆಂದು ನಂಬಲಾಗಿತ್ತು. ಇದು ಸ್ತ್ರೀ ರಚಿತ ಕಾವ್ಯ, ರಾಮನ ಕಥೆಯನ್ನು ವಿಲಕ್ಷಣ ರೀತಿಯಲ್ಲಿ ಪುನರ್‌ರಚಿಸಲಾಗಿದೆ, ಇದರಲ್ಲಿ ರಾಮ ಪ್ರಧಾನ ಪಾತ್ರವಾಗಿಲ್ಲದಿರುವುದಷ್ಟೇ ಅಲ್ಲ, ಮಹಿಳಾ ದೃಷ್ಟಿಕೋನದಿಂದ ರಾಮನನ್ನು ಟೀಕಿಸಲಾಗಿದೆ ಎಂದು ವಿವರರಿಸಲಾಯಿತು. ಆದರೆ ವಾಸ್ತವವಾಗಿ ಯಾರೂ ಚಂದ್ರಾವತಿ ರಾಮಾಯಣವನ್ನು ಸಂಪೂರ್ಣವಾಗಿ ಓದಿ ಗ್ರಹಿಸಲಿಲ್ಲ, ಇದು ಸೀತೆಯ ಕಥೆಯಷ್ಟೇ ಆಗಿದೆ. ಸೀತೆಯ ಹುಟ್ಟಿನಿಂದ ಸಾವಿನವರೆಗಿನ ಪ್ರಯಾಣದ ಕಥೆ. ಇಲ್ಲಿ ರಾಮನನ್ನು ಹೊಗಳಲು ಬದಲು, ಉತ್ತರಕಾಂಡದಲ್ಲಿ ರಾಮನು ಮಾಡಿದ ಕೆಲಸಗಳೆಂದು ಆಪಾದಿಸಿದ ವರ್ತನೆಗಳ ಮೂರ್ಖತನದ ಬಗ್ಗೆ ಪ್ರತಿಕ್ರಿಯಿಸಲು, ರಾಮನಿಗೆ ಉಪದೇಶ, ಸಲಹೆ ಮತ್ತು ಮಾರ್ಗದರ್ಶನ ನೀಡಲು ಚಂದ್ರಾವತಿ ಆಗಾಗ ಸೀತೆಯ ನಿರೂಪಣೆಯನ್ನು ಬಳಸಿಕೊಂಡಿದ್ದಾರೆ. ಕುತೂಹಲಕಾರಿ ಅಂಶವೇನೆಂದರೆ ಚಂದ್ರಾವತಿಯು ಎಚ್ಚರಿಕೆವಹಿಸಿ ಸೀತೆಯ ಮೂಲಕ ರಾಮನನ್ನು ಟೀಕಿಸುವುದು, ಸೀತೆಯೇ ಸ್ವತಃ ರಾಮನ ನಿರ್ಣಯಗಳನ್ನು ಖಂಡಿಸುವಂತೆ ಆದ್ಯತೆ ನೀಡಿದ್ದಾಳೆ. ಆದರೂ ಸೀತೆ ರಾಮನಿಗೇ ಸಮರ್ಪಿತಳಾಗಿದ್ದಾಳೆ. ಮಂದಕ್ರಾಂತ ಬೋಸ್ ಹೇಳುವಂತೆ 'ಸಾಂಪ್ರದಾಯಿಕವಾಗಿ ಪುರುಷ ಪ್ರಾಧಾನ್ಯತೆ ಆಚರಣೆಯಾಗಿ ಮಾರ್ಪಟ್ಟಿದ್ದೆ, ಇದರಿಂದ ಮಹಿಳೆಯರು ತಪ್ಪಿಸಿಕೊಳ್ಳಲಾಗದ ದುರಂತ ಜೀವನದ ಚಿತ್ರಣವಾಗಿದೆ.'

'ಚಂದ್ರಾವತಿಯ ರಾಮಾಯಣ'ವು ಸೀತೆಯನ್ನು ಕೇಂದ್ರೀಕರಿಸಿದೆ, ಅಂದರೆ ಇದರ ಸಂಪೂರ್ಣ ಗಮನವು ಚಂದ್ರಾವತಿಯ ಬಗ್ಗೆ ಮತ್ತು ಚಂದ್ರಾವತಿಯ ಕಾಲದ ಪುರುಷ ಪ್ರಧಾನ ಸಮಾಜದ ಕೈಯಲ್ಲಿ ಮಹಿಳೆಯ ಜೀವನದ ಶೋಚನೀಯ ಸ್ಥಿತಿಯಾಗಿತ್ತು, ಇದನ್ನು ನೇರವಾಗಿ ಪ್ರತಿಭಟಿಸಲಾಗದ ಸ್ತ್ರೀ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿರುವುದನ್ನು 'ಚಂದ್ರಾವತಿ ರಾಮಾಯಣ'ದ ಮೂಲಕ ಕಾಣಬಹುದು.

ನಿರೂಪಣಾ ತಂತ್ರ

ಚಂದ್ರಾವತಿ ರಾಮಾಯಣವು ನಿರೂಪಣೆಯ ಅನುಕ್ರಮವನ್ನು ಹೊಂದಿದೆ, ಇದರಲ್ಲಿ ಮಾತನಾಡುವವರು ಬದಲಾಗುತ್ತಾರೆ ಕಾವ್ಯದ ಭಾಗದಿಂದ ಭಾಗಕ್ಕೆ, ಅದರ ಪ್ರೇಕ್ಷಕರಿಗೆ ಮತ್ತು ಓದುಗರಿಗೆ ವಿಳಾಸದ ವಿಧಾನದಂತೆ ಕಾವ್ಯದ ಭಾಗ ಒಂದರ ನಿರೂಪಕಿ ಚಂದ್ರಾವತಿ ಮತ್ತು ಎರಡನೇ ಭಾಗದ ನಿರೂಪಕಿ ಸ್ವತಃ ಸೀತೆ.

ಈ ಎರಡು ಭಾಗಗಳು ಮಹಿಳಾ ಕೇಂದ್ರಿತವಾಗಿವೆ – ಅವು ಮಹಿಳೆಯರಿಂದ ಬರೆಯಲ್ಪಟ್ಟಿವೆ ಮತ್ತು ಸ್ಪಷ್ಟವಾಗಿವೆ. ಮಹಿಳೆಯರಿಂದ ಮಹಿಳೆಯರನ್ನು ಒಳಗೊಂಡ ಪ್ರೇಕ್ಷಕರಿಗೆ ವಿಳಾಸದ ರೂಪ ಅಗಾಧವಾಗಿ, 'ಶುನೋ ಸಖಿಜನ್' (ಆಲಿಸಿ ಗೆಳತಿಯರೇ). ಸೀತೆಯ ಆಪ್ತರು ಅವಳೇ, ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ನಿಕಟ ಮಹಿಳಾ ಸ್ನೇಹಿತರು. 'ಬ್ರತಕಥಾ' ಶೈಲಿಯ ಭಾಷೆಯಂತಹ ವಿಶಿಷ್ಟವಾದ ಮಹಿಳಾ ಕೇಂದ್ರಿತ ವಿಧಾನಗಳು, ಅಂದರೆ ಇಲ್ಲಿ ವೇಗದ ನಿರೂಪಣೆಗಳನ್ನು ಬಳಸಲಾಗಿದೆ. ನಂತರದ ಎರಡನೇ ಭಾಗದಲ್ಲಿ ಪಿತೃಪ್ರಭುತ್ವದ ಅಧಿಕೃತ ಧ್ವನಿಗಳು ಒಳಗೊಂಡಿವೆ. ಎಲ್ಲಾ ಸಂಭವನೀಯತೆಗಳಲ್ಲಿ, ಕವಿತೆಯು ಪ್ರಾಚೀನ ಮತ್ತು ಮಿಶ್ರ ಪ್ರೇಕ್ಷಕರಿಗೆ ಪೂರ್ವ ಬಂಗಾಳದ ಲಯಬದ್ಧ ಛಂದಸ್ಸಿನ ಆಸ್ತಿಯಾಗಿ ಮಾರ್ಪಡಿಸಿ ಹಾಡಲಾಗಿದೆ. ಈ ಕಾವ್ಯದಲ್ಲಿ ನಿರೂಪಕನು ಪ್ರೇಕ್ಷಕರಿಗೆ ಸಂಬೋಧಿಸುವ ಬದಲಾವಣೆಯ ವಿಧಾನಗಳು: 'ಶುನೋ ಸಖಿಜನ' ಬದಲಿಗೆ 'ಶುನೋ ಸಭಾಜನ' (ಕೇಳಿರಿ, ನ್ಯಾಯಾಲಯದ ಸದಸ್ಯರು) ಮತ್ತು 'ಶುನು ಸರ್ಬಜನ'. ಸ್ವರವು ನಿಕಟ ಮತ್ತು ಭಾವನಾತ್ಮಕದಿಂದ ಸಾರ್ವಜನಿಕವಾಗಿ ಬದಲಾಗುತ್ತ ಸಂಭ್ರಮಾಚರಣೆ ಕಾಣಬಹುದಾಗಿದೆ.

'ಚಂದ್ರಾವತಿ' ಅವರು ಪ್ರಬಲವಾಗಿ ಪುರುಷ ಸಿದ್ಧಾಂತವನ್ನು ಟೀಕಿಸುತ್ತಾರೆ ಎಂಬುದು ಕುತೂಹಲಕಾರಿಯಾಗಿದೆ. ಒಮ್ಮೊಮ್ಮೆ ನೇರವಾಗಿ ಪಾತ್ರಗಳನ್ನು ಉದ್ದೇಶಿಸಿ ತನ್ನ ಅಸಮಧಾನವನ್ನು ವ್ಯಕ್ತಪಡಿಸುತ್ತಾಳೆ. ರಾಮಾಯಣದ ಪಾತ್ರಗಳು ತಮ್ಮ ನಡವಳಿಕೆಯಿಂದ ಸೀತೆಯ ಜೀವನದಲ್ಲಿ ದುಃಖವನ್ನು ತರುತ್ತವೆ. ಆದಾಗ್ಯೂ, ಚಂದ್ರಾವತಿ ತನ್ನ ನಾಯಕಿ ಸೀತೆಯನ್ನು ಅದೇ ಪ್ರಕಾರವಾಗಿ ನಟಿಸಿದ್ದಕ್ಕಾಗಿ ಟೀಕಿಸುವುದಿಲ್ಲ ಅಧಿಕಾರಶಾಹಿ ಸಿದ್ಧಾಂತ; ಈ ಸಿದ್ಧಾಂತವನ್ನು ಪ್ರಶ್ನಾತೀತವಾಗಿ ಅನುಸರಿಸುವುದರಿಂದ ಸೀತೆಯನ್ನು ಸಮಾಜದಲ್ಲಿ ಅಂಗೀಕರಿಸಿರುವುದನ್ನು ಟೀಕಿಸಿದ್ದಾರೆ.

ಚಂದ್ರಾವತಿಯ ರಾಮಾಯಣವು ತನ್ನದೇ ಆದ ಪ್ರಾಮುಖ್ಯತೆಯನ್ನು ಗಳಿಸಿದೆ, ಪಾತ್ರಗಳನ್ನು ಅವರ ಮಹಾಕಾವ್ಯದ ಬಲೆಗಳಿಂದ ಸಡಿಲಗೊಳಿಸುವ ಮತ್ತು ಅವರ ಹಣೆಬರಹದಿಂದ ಉಂಟಾಗುವ ಅನ್ಯಾಯಗಳನ್ನು ಎದುರಿಸುವ ಮತ್ತು

ದುಃಖಿಸುವ ಸಂಪೂರ್ಣ ಮಾನವ ಪಾತ್ರಗಳೊಂದಿಗೆ ಕಥೆಯನ್ನು ಮರು–ಹೇಳುವ ಮೂಲಭೂತ ಕಾರ್ಯವನ್ನು ನಿರ್ವಹಿಸುತ್ತದೆ. ರಾಮಾಯಣದ ಸೀತೆ, ದೇವಿಯ ಅವತಾರವಾಗಿದ್ದರೂ, ಪರಿಶುದ್ಧತೆ ಮತ್ತು ಅಧೀನತೆಯ ಪ್ರಮುಖ ಸಂಕೇತವೆಂದು ವ್ಯಾಪಕವಾಗಿ ಪರಿಗಣಿಸಲಾಗಿದೆ. ವಾಲ್ಮೀಕಿ ಮಹರ್ಷಿಯು ಮಹಾಕಾವ್ಯಕ್ಕಾಗಿ, ಕಾವ್ಯದ ಮುಖ್ಯ ಉದ್ದೇಶಗಳ ಪೂರ್ತಿಗಾಗಿ ಸೀತೆಯ ಶ್ರೇಷ್ಠತೆಯನ್ನು ಪ್ರದರ್ಶಿಸುವುದಾಗಿ ಹೇಳಿಕೊಂಡಿದ್ದಾರೆ. ಚಂದ್ರಾವತಿಯ ಸೀತಾ, ಅವಳ ಮಹಾಕಾವ್ಯದ ಪಾತ್ರದಿಂದ ಶೋಭಿಸುತ್ತಾಳೆ, ಪುರುಷನ ಜಗತ್ತಿನಲ್ಲಿ ಮಹಿಳೆಯಾಗಿರುವುದರಿಂದ ಬರುವ ಸೂಕ್ಷ್ಮತೆ ಮತ್ತು ತಿಳುವಳಿಕೆಯೊಂದಿಗೆ ಚಿತ್ರಿಸಲಾಗಿದೆ. ಸೀತೆ ತನ್ನ ಜೀವನದುದ್ದಕ್ಕೂ ದುಃಖಿತಳಾಗಿರಬೇಕೆಂದು ಚಂದ್ರವತಿ ಬರೆಯುತ್ತಾರೆ. ಸೀತೆ ತನ್ನ ಪತಿಯೊಂದಿಗೆ ದೇಶಭ್ರಷ್ಟಳಾಗುತ್ತಾಳೆ, ರಾಕ್ಷಸ ರಾಜನಿಂದ ಅಪಹರಿಸಲ್ಪಡುತ್ತಾಳೆ ಮತ್ತು ಅಂತಿಮವಾಗಿ, ಅವಳ ಪತಿಯಿಂದ ಅಗ್ನಿ ಪರೀಕ್ಷೆ ಹಾದುಹೋಗುವಂತೆ ಮಾಡುತ್ತಾಳೆ, ಅವನು ಅವಳ ಮೇಲಿನ ಪ್ರೀತಿಗಿಂತ ತನ್ನದೇ ಆದ ಗೌರವವನ್ನು ಇರಿಸುತ್ತಾನೆ. ಮಹಾಕಾವ್ಯವು ತನ್ನ ಪ್ರಕಾರಕ್ಕೆ ಅನುಗುಣವಾಗಿ, ರಾಮನ ಧೀರ ಸಾಹಸಗಳನ್ನು ಮತ್ತು ಸೀತೆಯ "ಶ್ರೇಷ್ಠತೆ"ಯನ್ನು ವಿವರಿಸುತ್ತದೆ, ಅಚಲವಾಗಿ, ತನ್ನ ಜೀವನದ ಭಯಾನಕ ಪರೀಕ್ಷೆಗಳನ್ನು ಎದುರಿಸುತ್ತಿರುವಾಗ, ಚಂದ್ರವತಿ ಅವರು ತನ್ನ ಆತ್ಮೀಯ ಸಖಿಯ ದುಖವನ್ನರಿತು ದುಃಖಿಸುತ್ತಿರುವಂತೆ ಬರೆಯುತ್ತಾರೆ. ಚಂದ್ರಾವತಿ ಶ್ರೇಷ್ಠತೆಯಲ್ಲಿ, ಪಾರಮ್ಯ ಮೆರೆಯುವಲ್ಲಿ ಆಸಕ್ತಿ ಹೊಂದಿಲ್ಲ, ಬದಲಿಗೆ ದೇವರುಗಳು ಸಹ ಮನುಷ್ಯರಾಗಿ ಅವತರಿಸಿದಾಗ ಮಾನವ ದುಃಖದಿಂದ ಪಾರಾಗುವುದಿಲ್ಲ ಎಂದು ಚಿತ್ರಿಸಿದ್ದಾರೆ.

ಚಂದ್ರಾವತಿ ರಾಮಾಯಣವು ಸೀತೆಯ ಜೀವನ, ಅವಳ ಸಮಸ್ಯೆ ಮತ್ತು ಅವಳ ವೈಯಕ್ತಿಕ ಅನುಭವಗಳಿಂದ ಕೂಡಿದೆ. ಇದು ಸೀತೆಯ ಜೀವನದ ಪಯಣ. ಮಹಾಕಾವ್ಯಗಳು ಪುಲ್ಲಿಂಗ ಶೌರ್ಯ ಮತ್ತು ಪುಲ್ಲಿಂಗಗಳ ನಡುವಿನ ಹೋರಾಟದಂತೆ, ಒಳ್ಳೆಯ ಮತ್ತು ಕೆಟ್ಟ ಶಕ್ತಿಗಳು ಸಮಾನ್ಯವಾಗಿ ಹಿಂಸಾತ್ಮಕವಾಗಿ, ಕ್ರೂರವಾಗಿರುತ್ತವೆ. ಇಲ್ಲಿ ನೈತಿಕ ಮತ್ತು ಅನೈತಿಕ ಸಂಘರ್ಷವು ಆಂತರಿಕ ಸಂಘರ್ಷದಿಂದ ಕೂಡಿರುತ್ತವೆ, ಆದರೆ ಇಲ್ಲಿ ಯಾವುದೇ ಶಸ್ತ್ರಾಸ್ತ್ರಗಳಿಲ್ಲ, ಸಾಂಪ್ರದಾಯಿಕ ಯುದ್ಧದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಮಹಿಳೆಯು ಕೇವಲ ಬಯಕೆಯ ವಸ್ತುವಾಗಿಯೋ, ಗೌರವಕ್ಕಾಗಿ ನಡೆಯುವ ಯುದ್ಧಗಳ ಕಾರಣಗಳನ್ನು ಮೀರಿ ಪ್ರಾತಿನಿಧ್ಯವನ್ನು ಕಂಡುಕೊಳ್ಳುವುದಿಲ್ಲ. ರಾಮಾಯಣವು ಇದರಿಂದ ಭಿನ್ನವಾಗಿಲ್ಲ. ಆದ್ದರಿಂದ ಸ್ತ್ರೀಯರು ಅದನ್ನು ಹೇಗೆ ಭಿನ್ನವಾಗಿ ಪುನರ್ರಚಿಸಿದ್ದಾರೆ ಮತ್ತು ಮುಖ್ಯವಾಗಿ ಸಮಾಜದಲ್ಲಿ ಬೇರೂರಿರುವ ಪಿತೃಪ್ರಭುತ್ವ ಇದನ್ನು ಹೇಗೆ ಸ್ವೀಕರಿಸಿತು ಎಂಬು ಮುಖ್ಯ ಪ್ರಶ್ನೆಯಾಗಿ ನಿಲ್ಲುತ್ತದೆ.

ಚಂದ್ರಾವತಿ ರಾಮಾಯಣವು ನಮಗೆ ಸಮಾಜದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿರುವ ಧರ್ಮವನ್ನು ಸ್ತ್ರೀಕೇಂದ್ರಿತ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಲು, ವಿಶ್ಲೇಷಿಸಲು, ಅರ್ಥೈಸಲು ಸಹಾಯವಾಗುತ್ತದೆ. ಈ ರಾಮಾಯಣದಲ್ಲಿ ನಮಗೆ ದುಖದಿಂದ ಜರ್ಜರಿತಳಾದ, ಮುಗ್ಧ ಮತ್ತು ನಿರ್ದೋಷಿ ಸೀತೆಯ ದರ್ಶನವಾಗುತ್ತದೆ. ಈ ರಾಮಾಯಣದ ಕೇಂದ್ರ ರಾಮನಲ್ಲ, ರಾಮನ ಪರಾಕ್ರಮ, ಶೌರ್ಯಗಳಲ್ಲ, ಸೀತೆಯ ಭಾವನಾತ್ಮಕ ಲೋಕದ ಅನಾವರಣ ಇಲ್ಲಿ ಗೋಚರವಾಗುತ್ತದೆ. ಪುರುಷ ಪ್ರಾಧಾನ್ಯತೆಗೆ ಒಳಗಾಗಿ ಅಸಹಾಯಕತೆಯನ್ನನುಭವಿಸುವ ಸ್ತ್ರೀ ಚಿತ್ರಣ ಮತ್ತು ತನ್ನ ನೈತಿಕತೆಯ ಮೇಲಿನ ಪ್ರಶ್ನೆಯು ಪುರುಷನ ತೀರ್ಪಿನ ಮೇಲೆ ಅವಲಂಬಿತವಾಗಿರುವುದು, ಶಿಕ್ಷಿಸುವ ಮತ್ತು ಶಿಕ್ಷೆ ನೀಡುವ ಅಧಿಕಾರ ಪುರುಷನೇ ಆಗಿರುವ ವಿಪರ್ಯಾಸವನ್ನು ಕಾಣಬಹುದು. ಇಂತಹ ಬುದ್ಧಿಹೀನ ಕ್ರಿಯೆಯು ಮಹಿಳೆಯ ಮನಸ್ಸಿನ ಶಾಂತಿ ಮತ್ತು ಅಸ್ತಿತ್ವವನ್ನು ಶಾಶ್ವತವಾಗಿ ನಾಶಪಡಿಸುತ್ತದೆ. ಗರ್ಭವತಿಯಾದ ಸೀತೆ–ಯು ಒಬ್ಬಂಟಿಯಾಗಿದ್ದಳು ತನ್ನ ಗಂಡನಿಂದ ಪ್ರೇಮವನ್ನು ಅಪೇಕ್ಷಿಸುತ್ತಾಳೆ, ಇದು ಆಕೆಯ ದುರ್ಬಲ ಭಾವನೆಗಳನ್ನು ಚಂದ್ರಾವತಿ ಪ್ರೇಕ್ಷಕರ ಮುಂದಿಟ್ಟು ಸೀತೆಯ ವ್ಯಕ್ತಿತ್ವದ ನಿರ್ಣಯಕ್ಕೆ ಆಯ್ಕೆಯನ್ನು ನೀಡುತ್ತಾಳೆ.

ದೆಹಲಿ ವಿಶ್ವವಿದ್ಯಾಲಯದ ಪಠ್ಯವಾಗಿದ್ದ 'ಚಂದ್ರಾವತಿ ರಾಮಾಯಣ'ದ ಭಾಗಗಳನ್ನು ಇದರಲ್ಲಿ ಕೆಲವು ಅಸಂಬದ್ಧ, ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವಂತಹ ಅಂಶಗಳಿವೆ ಎಂದು ತೆಗೆದು ಹಾಕಿದ್ದನ್ನು ಗಮನಿಸದ್ದೇವೆ. ಬಹುಶಃ ಈ ಘಟನೆಯು ಭಾರತದ ಇತರೆ ಭಾಗದವರು ಈ ರಾಮಾಯಣದ ಕುರಿತು ಸಂಶೋಧಿಸಲು ಕಾರಣವಾಯಿತೆಂದರೆ ತಪ್ಪಾಗಲಾರದು.

■■

**ಪರಾಮರ್ಶನ ಗ್ರಂಥಗಳು**

1. Nabaneeta Deb Sen, "Rewriting the Ramayana: Chandravati and Molla," India International Centre Quarterly, vol. 24-2/3 (1997): 171.

ISSN: 2320-9941
ಪ್ರತಿಸ್ಪಂದ । Prathispandha

# ಪೌರಾಣಿಕ ಸ್ತ್ರೀ ಪಾತ್ರಗಳಲ್ಲಿ ಕಂಡುಬಂದ ಆಧುನಿಕ ಪ್ರಜ್ಞೆ

● ಪುಷ್ಪಲತ. ಕೆ

ಪುರಾಣದ ಸ್ತ್ರೀಯರು ಎಂದೊಡನೆ ಅರಿವಿಗೆ ಬರುವ ಸೀತೆ, ಸಾವಿತ್ರಿ, ಕುಂತಿ, ದ್ರೌಪದಿ, ಅಹಲ್ಯೆ, ಮಂಡೋದರಿ, ದಮಯಂತಿ ಇಂತಹ ಹತ್ತು ಹಲವು ಹೆಸರುಗಳು ನಮ್ಮ ಮನದಲ್ಲಿ ಪೂಜ್ಯನೀಯ ಭಾವವನ್ನು ಹುಟ್ಟಿಸುತ್ತದೆ. ಕಾರಣ ನಮ್ಮ ವ್ಯವಸ್ಥೆ ಇವರನ್ನು ದೈವತ್ವದ ನೆಲೆಯಲ್ಲಿರಿಸಿ ಅವರನ್ನು ಹಾಗೂ ಅವರ ಅಸ್ಮಿತೆಯ ನೆಲೆಯನ್ನು ಪುರುಷಕೇಂದ್ರಿತ ಹಿಡಿತದಲ್ಲಿರಿಸುವುದು ಕಂಡು ಬರುತ್ತದೆ. ಅಂದರೆ ಹೆಣ್ಣಿಗಿರಬೇಕಾದ ಮುಖ್ಯ ಗುಣಗಳೆಂದು ಕರೆಯಲ್ಪಡುವ ಪ್ರೀತಿ, ಕರುಣೆ, ಪಾತಿವ್ರತ್ಯ, ತಾಳ್ಮೆಯನ್ನು ಅವರ ಮೈಗೂಡಿಸಿ ಈ ಎಲ್ಲಾ ಗುಣಗಳ ಸಾಕಾರಮೂರ್ತಿಯೆಂಬಂತೆ ಇವರನ್ನು ಬಿಂಬಿಸಲಾಗಿದೆ. ಆದರೆ ಸಾಹಿತ್ಯದಲ್ಲಿನ ಮಹಿಳಾ ಜಗತ್ತು ಈ ಎಲ್ಲಾ ಸ್ತ್ರೀಯರಿಗೆ ಅವರದೇ ಆದ ವ್ಯಕ್ತಿತ್ವ ನೀಡಿ ಅವರಲ್ಲಿ ಉಂಟಾಗಬಹುದಾದ ಆಧುನಿಕ ಪ್ರಜ್ಞೆಯ ಮೂಲಕ ಪುರಾಣ ಸ್ತ್ರೀಯರ ಪಾತ್ರಕ್ಕೆ ಹೊಸ ವ್ಯಾಖ್ಯಾನ ನೀಡಿದ್ದಾರೆ. ಅಂದರೆ ಇಡಿಯಾಗಿ ಚಿತ್ರಿಸಿದ್ದ ಅವರ ವ್ಯಕ್ತಿಗುಣವನ್ನು ಬಿಡಿಯಾಗಿಸಿ ಆಧುನಿಕತೆಯ ಸ್ಪರ್ಶದ ಜೊತೆಗೆ ಹೊಸ ಪ್ರಜ್ಞೆಯು ಅವರಲ್ಲಿ ಸೃಜಿಸುವಂತೆ ಮಾಡಿದ್ದಾರೆ.

ಈ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ಕಂಡು ಬಂದಂತಹ ಎಲ್ಲಾ ಪೌರಾಣಿಕ ಮಹಿಳಾ ಪಾತ್ರಗಳನ್ನು ಪರಿಗಣಿಸದೇ ಕೆಲವನ್ನು ಮಾತ್ರ ಆಯ್ದುಕೊಂಡು ಚರ್ಚಿಸಲಾಗಿದೆ. ಅನುಪಮಾ ನಿರಂಜನ, ಎಚ್.ವಿ.ಸಾವಿತ್ರಮ್ಮ ಹಾಗೂ ಎಸ್.ವಿ. ಪ್ರಭಾವತಿಯವರ ಕಾದಂಬರಿಯ ಪ್ರಮುಖ ಪಾತ್ರಗಳಾದ ಮಾಧವಿ, ಸೀತೆ, ಊರ್ಮಿಳಾ, ಅಹಲ್ಯೆಯರು ತಮ್ಮ 'ಹಳೆತನ'ವನ್ನು ಕಳೆದುಕೊಂಡು 'ಹೊಸತನ'ವನ್ನು ಮೈಗೂಡಿಸಿಕೊಂಡು ಸ್ವಂತ ವ್ಯಕ್ತಿತ್ವಗಳಾಗಿ ಗುರುತಿಸಿಕೊಂಡಿರುವುದನ್ನು ಇವರ ಕಾದಂಬರಿಗಳಲ್ಲಿ ಗುರುತಿಸಬಹುದು. ಎಚ್.ವಿ.ಸಾವಿತ್ರಮ್ಮ ಅವರ 'ಸೀತೆ ರಾಮ ರಾವಣ' ಹಾಗೂ 'ವಿಮುಕ್ತಿ'

**ವಿಳಾಸ:** ಪುಷ್ಪಲತ.ಕೆ
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
kpushpalatha.024@gmail.com

ಅನುಪಮಾ ಅವರ 'ಮಾಧವಿ', ಎಸ್.ವಿ.ಪ್ರಭಾವತಿಯವರ 'ಸೀತೆ', 'ಅಹಲ್ಯ' ಈ ಎಲ್ಲಾ ಕಾದಂಬರಿಗಳಲ್ಲೂ 'ಪಾತಿವ್ರತ್ಯ' ಹಾಗೂ 'ಅಧಿಕಾರ ಪ್ರಜ್ಞೆ' ಮುಖ್ಯವಾಗಿ ಕಂಡು ಬರುತ್ತದೆ. ಪುರಾಣ ಪ್ರಜ್ಞೆಯು ಒತ್ತಾಯ ಪೂರ್ವಕವಾಗಿಯೇ ಹೆಣ್ಣಿನ ಮೇಲೆ ಪಾತಿವ್ರತ್ಯವನ್ನು ಹೇರಿದೆ. ಜೊತೆಗೆ ಅಧಿಕಾರವು ಗಂಡಿನಲ್ಲಿ ಕೇಂದ್ರೀಕೃತವಾಗಿ ಹೆಣ್ಣು ಅದರ ಪರಿಮಿತಿಯಲ್ಲಿಯೇ ತನ್ನ ಇರವನ್ನು ಎರಡನೇ ದರ್ಜೆಯ ಪ್ರಜೆಯಾಗಿ ಕಂಡುಕೊಳ್ಳಬೇಕೆಂಬಂತಹ ಅಲಿಖಿತ ನಿಯಮವನ್ನು ಕಾಣುತ್ತೇವೆ. ಆದರೆ ಈ ಎಲ್ಲಾ ಕಾದಂಬರಿಗಳು ಈ ನೀತಿ ನಿಯಮವನ್ನು ಬದಿಗೆ ಸರಿಸಿ ದೈವತ್ವಕ್ಕೇರಿದ್ದ ಇವರನ್ನು ಸಾಮಾನ್ಯ ಮಹಿಳೆಯರನ್ನಾಗಿ ಚಿತ್ರಿಸಿ ಅವರಿಗೆ ಲೈಂಗಿಕ ಸ್ವಾತಂತ್ರ್ಯದ ಜೊತೆಗೆ ತಮ್ಮ ಅಸ್ತಿತ್ವದ ಕಾಯ್ದುಕೊಳ್ಳುವಿಕೆಯ ಹಕ್ಕನ್ನು ನೀಡಿದೆ.

ಅನುಪಮಾ ಅವರ 'ಮಾಧವಿ' ಕಾದಂಬರಿ ಕನ್ನಡ ಸಾಹಿತ್ಯದಲ್ಲೇ ಹೊಸ ಪ್ರಯೋಗ ಎಂದೇ ಹೇಳಬಹುದು. ಅಲ್ಲಿಯವರೆಗೂ ಮೌನವಾಗಿದ್ದ ಮಹಿಳಾ ಧ್ವನಿಗಳು ಅಂದಿನಿಂದ ಮಾತನಾಡಲು ಆರಂಭಿಸಿದವು ಎಂದರೂ ತಪ್ಪಿಲ್ಲ. 'ಮಹಾಭಾರತ'ದಲ್ಲಿನ ಸಣ್ಣ ಉಪಕಥೆಯಾಗಿ ಜನಜನಿತವಾದ ಮಾಧವಿಯನ್ನೇ ಮುಖ್ಯಪಾತ್ರವನ್ನಾಗಿರಿಸಿಕೊಂಡು ರಚನೆಯಾದ ಕಾದಂಬರಿ ಇದಾಗಿದ್ದು, ಬದುಕಿನ ಕುರಿತಾದ ತನ್ನ ಅಧಿಕಾರವನ್ನೇ ಕಳೆದುಕೊಳ್ಳುವ ಹೆಣ್ಣಿನ ಚಿತ್ರಣವಿಲ್ಲಿದೆ. ಹೆಣ್ಣೆಂಬ ಕಾರಣಕ್ಕೆ ಹಣ ಅಥವಾ ಆಸ್ತಿಯಂತೆ ಮತ್ತೊಬ್ಬರಿಗೆ ಕ್ರಯ ಮಾಡಿದ ತಂದೆ ಯಯಾತಿ ಹಾಗೂ ಅವಳನ್ನು ಭೂಮಿಯಂತೆ ಬಳಸಿಕೊಂಡ ರಾಜಸತ್ತೆಯ ಅರಸರು ಮತ್ತು ರಾಜರ್ಷಿಯಾದ ವಿಶ್ವಾಮಿತ್ರ ಮಾಧವಿಯನ್ನು ನಡೆಸಿಕೊಂಡ ರೀತಿ ಸಮಾಜದಲ್ಲಿ ಹೆಣ್ಣಿನ ಕುರಿತು ಸ್ಥಾಯಿಯಾಗಿ ಉಳಿದಿರುವ ವಾಸ್ತವವನ್ನು ತೆ–ೂೕರುತ್ತದೆ. ದೈಹಿಕವಾಗಿಯಷ್ಟೇ ಅಲ್ಲದೇ ಮಾನಸಿಕವಾಗಿಯೂ ಜರ್ಜರಿತಳಾಗುವ ಮಾಧವಿಯು ಪುರುಷ ಸಮಾಜದ ವಿರುದ್ಧ ದಿಟ್ಟ ದನಿಯಲ್ಲಿ ತನ್ನ ವಿರೋಧವನ್ನು ಇಲ್ಲಿ ವ್ಯಕ್ತಪಡಿಸದಿದ್ದರೂ ಕಾದಂಬರಿಯ ಅಂತ್ಯದಲ್ಲಿ ತೋರುವ 'ಮೌನ' ಪ್ರತಿರೋಧ ಬಂಡಾಯದ ನೆಲೆಯೇ ಆಗಿದೆ. ಹೆಣ್ಣಿನ ಅಸ್ಮಿತೆಯನ್ನು ಧಿಕ್ಕರಿಸಿದ ಅಧಿಕಾರಶಾಹಿ ವ್ಯವಸ್ಥೆಯನ್ನೇ ಧಿಕ್ಕರಿಸಿ ತನ್ನ ಪಿತೃಸಂಸ್ಕೃತಿಯ ನಿರಾಕರಣೆಯನ್ನು ವ್ಯಕ್ತಪಡಿಸುವ ಮೂಲಕ ಮಾಧವಿ ಇಲ್ಲಿ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸೀತೆಗೆ 'ಧ್ವನಿ' ನೀಡಿದ ಮೊದಲ ಲೇಖಕಿ ಎನ್ನಬಹುದಾದ ಸಾವಿತ್ರಮ್ಮ ಅವರ 'ಸೀತೆ ರಾಮ ರಾವಣ' ಕಾದಂಬರಿಯಲ್ಲಿ ಮುಗ್ಧೆಯಾಗಿ ಅರಮನೆಯ ಆಗುಹೋಗುಗಳ ಗೊಡವೆಗೆ ಹೋಗದ ಅಮಾಯಕಳಾಗಿ ಸೀತೆ ಕಂಡು ಬಂದರೆ, ಅವರ ಮತ್ತೊಂದು ಕಾದಂಬರಿಯಾದ 'ವಿಮುಕ್ತಿ'ಯಲ್ಲಿ ಪ್ರಬುದ್ಧ ಹಾಗೂ ದಿಟ್ಟ ಮಹಿಳೆಯಾಗಿ ಕಾಣಿಸುತ್ತಾಳೆ. ರಾಮಾಯಣದ ಕಥೆಯನ್ನು ಒಳಗೊಂಡ ಈ ಕಾದಂಬರಿಯು ರಾಮ ಅಗಸನ ಮಾತಿನಿಂದ ಲೋಕಾಪವಾದಕ್ಕೆ ಹೆದರಿ ಸೀತೆಯನ್ನು ಅಗ್ನಿಪ್ರವೇಶ ಮಾಡಿಸಿದ ನಂತರ ಸೀತೆ ಹಾಗೂ ರಾಮನ ವ್ಯಕ್ತಿತ್ವದಲ್ಲಿ ಆದ ಬದಲಾವಣೆಗಳ ಜೊತೆಗೆ ರಾಮನ ಪಿತೃಸಂಸ್ಕೃತಿ, ಅಧಿಕಾರಶಾಹಿಯ ದರ್ಪ ಹಾಗೂ ಅದನ್ನು ಮೆಟ್ಟಿ ನಿಂತ ಸೀತೆಯ ಪ್ರತಿಮಾದೃಷ್ಟಿಯನ್ನು ತೋರ್ಪಡಿಸುತ್ತದೆ. ಎಂಭತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯವು ಉತ್ತುಂಗ ಸ್ಥಿತಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಸೀತೆಯೂ ಕೂಡ ಇಲ್ಲಿ ತನ್ನ ಆಧುನಿಕ ಚಿಂತನೆಯ ಸೈದ್ಧಾಂತಿಕತೆಯನ್ನು ಒಳಗೊಂಡವಳಾಗಿದ್ದಾಳೆ. ಇಲ್ಲಿ ರಾಮ ಕೇವಲ ಸಂಕೇತವಷ್ಟೇ. ಅಂದರೆ ಆತ ಅಧಿಕಾರಶಾಹಿ ಹಾಗೂ ಪಿತೃಸಂಸ್ಕೃತಿಯ ಪ್ರತಿನಿಧಿ. ಇವನ ಮೂಲಕ ಇಡೀ ಪುರುಷ ವ್ಯವಸ್ಥೆಯ ಅಥವಾ ರಾಜಸತ್ತೆಯ ಕ್ರೌರ್ಯವನ್ನು ಲೇಖಕಿ ವಿವರಿಸಿದ್ದಾರೆ.

ಹೆಣ್ಣನ್ನು ಬಂಧಿಸುವ ಸಂಕೇತಗಳಲ್ಲಿ ಒಂದಾದ ಲೈಂಗಿಕತೆ ಅಥವಾ ಶೀಲದ ಪ್ರಶ್ನೆ ಎಂಬುದು ರಾಮನನ್ನು ಕಾಡಿದ ಪರಿ ಅದರಿಂದ ಬಿಡುಗಡೆ ಹೊಂದಲು ಬಯಸಿದ ಸೀತೆಯ 'ಅಧಿಕಾರದ ಕಲ್ಪನೆಯ ಹೆಮ್ಮೆಯಲ್ಲಿ ಕರ್ತವ್ಯದ ಕಾಠಿಣ್ಯತೆಯಲ್ಲಿ ಆತ ಭದ್ರವಾಗಿ ಬಂಧಿಯಾಗಿದ್ದನು. ಈ ವಿಷವ್ಯೂಹದಿಂದ ಹೊರ ಬರಲು ಆತನಿಗೆ ಸಾಧ್ಯವಿಲ್ಲ' (ಪುಟ ಸಂಖ್ಯೆ – 334) ಎಂಬ ಮಾತುಗಳು ರಾಜಶಾಹಿ ವ್ಯವಸ್ಥೆಯಲ್ಲಿ ಬಂಧಿಯಾಗಿದ್ದ ರಾಮನ ಸ್ವಭಾವವನ್ನು ಸೀತೆಯ ನಿಲುವಿನ ಮೂಲಕ ವಿವರಿಸುತ್ತದೆ. ಆಧುನಿಕತೆಯ ಸ್ಪರ್ಶ ಪಡೆದಿದ್ದ ಇಲ್ಲಿನ ಸೀತೆ ರಾಮ ಹಾಗೂ ರಾವಣರ ನಡುವಿನ ಗುಣಗಳನ್ನು ತೌಲನಿಕವಾಗಿ ಕಾಣುವ ಪ್ರಯತ್ನ ಮಾಡಿದ್ದಾಳೆ. ಅಂದರೆ ರಾಮನ ನಡೆಯಲ್ಲಿ ಹುಳುಕುಗಳನ್ನು ರಾವಣನ ನಡತೆಯಲ್ಲಿದ್ದ ಸಕಾರಾತ್ಮಕ ಅಂಶಗಳನ್ನು ಒಂದಕ್ಕೊಂದು ಪೂರಕವೆಂಬಂತೆ ಕಾಣಲು ಬಯಸುತ್ತಾಳೆ. ರಾಮ ತನ್ನ ಕರ್ತವ್ಯವೆಂಬಂತೆ ಸೀತೆಯನ್ನು ಅಪಹರಿಸಿದ ರಾವಣನನ್ನು ಕೊಂದು 'ಆದರ್ಶಪತಿ' ಎಂದು ಜನರೆದುರು ತನ್ನನ್ನು ಪ್ರಕಟಿಸಿಕೊಂಡರೆ ಸೀತೆ 'ಮನಸ್ಸಿನಲ್ಲಿ ಮನೆ ಮಾಡಿಕೊಂಡಿದ್ದ ಸಂಶಯ ಪಿಶಾಚಿಯನ್ನು ಗೆಲ್ಲುವುದಕ್ಕಿಂತ ರಾವಣನನ್ನು ಗೆಲ್ಲುವುದೇ ಸುಲಭವಾಗಿತ್ತು' (ಪುಟ ಸಂಖ್ಯೆ – 336) ಎಂದು 'ಆದರ್ಶ ಸತಿತ್ವ'ದಿಂದ ಹೊರ ಬರುತ್ತಾಳೆ.

ಈ ಕಾದಂಬರಿಯಲ್ಲಿ ಸೀತೆಯ ಪ್ರೌಢಿಮೆಯ ಜೊತೆಗೆ ಊರ್ಮಿಳೆಯ ಪ್ರತಿರೋಧಕ್ಕೂ ಸ್ಥಾನವಿದೆ. ಸೀತೆಯಂತೆ ಇವಳೂ ಕೂಡ ಆಧುನೀಕರಣದ ಧ್ವನಿಯಾಗಿ ಕಾಣಿಸುತ್ತಾಳೆ. ಸನಾತನ ಧರ್ಮ ಸಹಿಷ್ಣುತೆಯ ಹೆಣ್ಣಾಗಿ ತನ್ನನ್ನು

ISSN: 2320-9941
ಪ್ರತಿಸ್ಪಂದ । Prathispandha

ಪ್ರತಿಬಿಂಬಿಸಿಕೊಳ್ಳದೇ ತನ್ನ ಇರುವಿಕೆಯ ಹಕ್ಕನ್ನು ಚಲಾಯಿಸುವ ಹೆಣ್ಣಾಗಿ ಊರ್ಮಿಳೆ ಇಲ್ಲಿದ್ದಾಳೆ. ಗಂಡನೊಂದಿಗೆ ವನವಾಸಕ್ಕೆ ಹೋಗಬೇಕಾದದ್ದು ಹೆಂಡತಿಯ ಕರ್ತವ್ಯವೆಂಬ ನಂಬಿಕೆಯನ್ನು ಭಂಜಿಸಿ ಹೆಣ್ಣಿಗೂ ಪ್ರತ್ಯೇಕ ಬದುಕಿದೆ ಎಂಬುದನ್ನು ಹೇಳುತ್ತಾಳೆ. ಅಲ್ಲದೆ ಲಕ್ಷ್ಮಣ 'ನೀನು ಬಂದರೆ ಅತ್ತಿಗೆಗೆ ಜತೆಯಾಗಿರುತ್ತೆ' (ಪುಟ ಸಂಖ್ಯೆ – 332) ಎನ್ನಲು 'ನಿಮ್ಮ ಅತ್ತಿಗೆಗೆ ಜತೆ ಬೇಕಾದರೆ ಒಬ್ಬ ದಾಸಿಯನ್ನು ಕರೆದುಕೊಂಡು ಹೋಗಿ' (ಪುಟ ಸಂಖ್ಯೆ – 332) ಎನ್ನುತ್ತಾಳೆ. ಪರ್ಣಕುಟಿಯಲ್ಲಿರಬೇಕಾದ ಸಂದರ್ಭ ಬಂದಾಗ ಶತ್ರುಘ್ನನನ್ನು ಕಂಡರೆ ಲಕ್ಷ್ಮಣನನ್ನೇ ಕಂಡಂತಾಗುತ್ತದೆ ಎಂಬ ಅವಳ ಮಾತು ಶತ್ರುಘ್ನನ ಮೇಲಿನ ಮೋಹವನ್ನು ಆಕೆ ನಿರ್ಭೀಡೆಯಿಂದ ವ್ಯಕ್ತಪಡಿಸಿರುವುದನ್ನು ತಿಳಿಸುತ್ತದೆ.

ಸೀತೆಯನ್ನೇ ಮುಖ್ಯವಾಗಿರಿಸಿಕೊಂಡು ಕಾದಂಬರಿ ರಚಿಸಿದ ಮತ್ತೊಬ್ಬ ಪ್ರಮುಖ ಲೇಖಕಿ ಎಸ್.ವಿ.ಪ್ರಭಾವತಿ. ಇವರ 'ಸೀತೆ' ಕಾದಂಬರಿಯೂ ಕೂಡ ಸ್ತ್ರೀಯಾತ್ಮಕ ಹಿನ್ನೆಲೆಯಲ್ಲಿ ರಚಿತವಾಗಿದೆ. ಪುರಾಣ ಅಥವಾ ವೈದಿಕ ಕಾಲಘಟ್ಟ ಎಲ್ಲವನ್ನೂ ಹಾಗೂ ಎಲ್ಲರನ್ನೂ ಆದರ್ಶಪ್ರಾಯರನ್ನಾಗಿಯೇ ಇಡಲು ಪ್ರಯತಿಸುತ್ತದೆ. ಅದರಂತೆಯೇ ರಾಮ ಆದರ್ಶ ಪುರುಷ, ಸೀತೆ ಆದರ್ಶ ಸತಿ, ಲಕ್ಷ್ಮಣ ಆದರ್ಶ ಸೋದರ ಎಂಬ ಚಿತ್ರಣ ಇಲ್ಲಿ ಸಿಗುತ್ತದೆ. ಆದರೆ ಆಧುನಿಕ ಚಿಂತನೆಗಳು ಅಂತಹ ವೈಭವೀಕರಣವನ್ನು ಬದಿಗೆ ಸರಿಸಿ ವಾಸ್ತವಕ್ಕೆ ಮಹತ್ವ ನೀಡುತ್ತದೆ. ಹಾಗಾಗಿಯೇ ಈ ಕಾದಂಬರಿಯೂ ಕೂಡ ಆದರ್ಶಗಳನ್ನು ನಿರ್ಲಕ್ಷಿಸಿ ಎಲ್ಲಾ ಪಾತ್ರಗಳು ಮಾನವ ಸಹಜ ಗುಣಗಳು ಹೊತ್ತಂತೆ ರಚಿಸಿದೆ. ಇಲ್ಲಿನ ರಾಮ, ಸೀತೆ, ಲಕ್ಷ್ಮಣರು ಆದರ್ಶಕ್ಕೆ ಮಾರು ಹೋಗದೆ ತಮ್ಮ ಬದುಕಿನ ನಿರ್ಬಂಧಗಳನ್ನು ತಾವೇ ನಿರ್ದೇಶಿಸಿಕೊಳ್ಳುವವರಾಗಿದ್ದಾರೆ. ಇಲ್ಲಿನ ಸೀತೆ ಆದರ್ಶಸತಿ ಎನಿಸಿಕೊಳ್ಳಲು ಇಚ್ಛಿಸುವವಳಲ್ಲ. ಆಕೆಯ ಅಭಿವ್ಯಕ್ತಿ ನೆಲೆಯೂ ತೀರಾ ಭಿನ್ನವಾಗಿದೆ. ಲಕ್ಷ್ಮಣ ಸೀತೆಯನ್ನು ತಾಯಿಯಂತೆ ಹಾಗೂ ಸೀತೆಯು ಲಕ್ಷ್ಮಣನನ್ನು ಅಭಿಮಾನದಿಂದ ಕಾಣುವ ಬದಲಿಗೆ ಸೀತೆಯ ಸೌಂದರ್ಯಕ್ಕೆ ಲಕ್ಷ್ಮಣ ಮತ್ತು ಲಕ್ಷ್ಮಣನ ಸೌಂದರ್ಯಕ್ಕೆ ಸೀತೆ ಮಾರು ಹೋಗುವ ಚಿತ್ರಣವಿದೆ.

ಸೀತೆಯನ್ನು ಅಪಹರಿಸಿದ ರಾವಣನನ್ನು ಕೊಂದು ಅವಳನ್ನು ಕರೆತಂದಾಗ ರಾಮ ನಡೆಸಿದ ಅಗ್ನಿಪ್ರವೇಶದಿಂದ ಕುಪಿತಳಾದ ಸೀತೆ ರಾಮನನ್ನು 'ಹಾಗಾದರೆ ನೀನೂ ಕಿಷ್ಕಿಂದೆ ಮೊದಲಾದ ಕಡೆ ನನ್ನಿಂದ ಅಗಲಿ ಆರು ತಿಂಗಳು ಒಬ್ಬನೇ ಇದ್ದೆಯಲ್ಲ, ಅದೂ ಒಬ್ಬ ಹೆಂಡತಿಯನ್ನು ಹಂಚಿಕೊಂಡ ವಾಲಿ ಸುಗ್ರೀವರೊಂದಿಗೆ, ಯಾವಳೋ ಮುದುಕಿ ಬೇರೆ ಗುಣಪಡಿಸಿದಳಂತೆ ಲಂಕೆಯಲ್ಲೆಲ್ಲಾ ಈ ಸುದ್ದಿಯೇ. ನನ್ನನ್ನು ಕಾವಲು ಕಾಯುತ್ತಿದ್ದ ರಾಕ್ಷಸಿಯರು ಮಾತನಾಡುತ್ತಿದ್ದರು. ಶಬರಿ ಹಣ್ಣು ಹಣ್ಣು ಮುದುಕಿ ಅನ್ನುತ್ತಾರಪ್ಪ ಮುದುಕಿಯೋ ಹುಡುಗಿಯೋ ಯಾರಿಗೆ ಗೊತ್ತು, ಮುದುಕಿಯಾಗಿದ್ದರೆ ಎಂಜಲು ಮಾಡಿದ ಹಣ್ಣೇಕೆ ಕೊಡುತ್ತಿದ್ದಳು. ರಾಕ್ಷಸರಂತೆ ಅವಳೂ ಕಾಮರೂಪಿಯಿರಬೇಕು. ಅಂತಹ ಗಂಡನಿಗಾಗಿ ನೀನೇಕೆ ಹಂಬಲಿಸುವೆ ಎಂದು ರಾಕ್ಷಸಿಯರು ನನ್ನನ್ನು ಕೇಳುತ್ತಿದ್ದರು' (ಪುಟ ಸಂಖ್ಯೆ – 78) ಎಂದು ಪ್ರಶ್ನಿಸುವ ಆಧುನಿಕ ಪ್ರಜ್ಞೆ ಹೊಂದಿದಾಳೆ. ರಾಮ ಅವಳನ್ನು ಕಾಡಿಗಟ್ಟಿದಾಗಲೂ ಲಕ್ಷ್ಮಣನೊಂದಿಗೆ ಸೀತೆ ಹೇಳುವ 'ಅನಿಷ್ಟ ರಾಜರ ನೆರಳು ಬೀಳದಂತೆ ಋಷಿಗಳ ಆಶ್ರಮದಲ್ಲಿ ನನ್ನ ಮಗುವನ್ನು ನಾನೇ ಸಾಕಿ ಬೆಳೆಸುವೆ' (ಪುಟ ಸಂಖ್ಯೆ – 112) ಹಾಗೂ 'ಅಯೋಧ್ಯೆಯ ದುಷ್ಟಮೃಗಗಳಿಗಿಂತ ಈ ಕಾಡಿನ ಮೃಗಗಳೇ ಮೇಲು. ಇವು ಒಂದೇ ಬಾರಿಗೆ ಕೊಲ್ಲುತ್ತವೆ. ಅವರಂತೆ ಅಣು ಅಣುವಾಗಿ ಕೊಲ್ಲುವುದಿಲ್ಲ' (ಪುಟ ಸಂಖ್ಯೆ – 113) ಎಂಬ ಮಾತು ಅಧಿಕಾರಶಾಹಿ ವ್ಯವಸ್ಥೆಯ ಕರಾಳ ರೂಪವನ್ನು ವಿವರಿಸುತ್ತದೆ. ಸಾಮಾಜಿಕ ವ್ಯವಸ್ಥೆ ಎಂಬ ಅಧಿಕಾರ ಪ್ರಜ್ಞೆಯು ಸೀತೆಯನ್ನು ಕೌಟುಂಬಿಕ ಹಾಗೂ ಸ್ತ್ರೀಯಾತ್ಮಕ ಹಿನ್ನೆಲೆಯಲ್ಲಿ ಕಟ್ಟಿ ಹಾಕಲು ಪ್ರಯತ್ನಿಸಿದರೂ ಜ್ಞಾನಪರಂಪರೆ ಎಂಬ ಆಧುನಿಕ ಚಿಂತನೆ ಅವಳ ಅಸ್ತಿತ್ವದ ಉಳಿವಿಗಾಗಿ ನೆರವಾದುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದು.

ಮೇಲೆ ಚರ್ಚಿಸಿರುವ ಸೀತೆ, ಮಾಧವಿಯದು ಒಂದು ಬಗೆಯ ಪ್ರತಿರೋಧವಾದರೆ ಈಗ ಚರ್ಚಿಸ ಹೊರಟಿರುವ ಅಹಲ್ಯೆಯದು ಮತ್ತೊಂದು ಬಗೆಯ ಪ್ರತಿರೋಧವೆಂದರೂ ತಪ್ಪಿಲ್ಲ. ಬದುಕಿನ ಭಾಗವಾದ ಲೈಂಗಿಕತೆಯನ್ನು ಪಾತಿವ್ರತ್ಯದ ಹೆಸರಲ್ಲಿ ಕಟ್ಟಿ ಹೆಣ್ಣಿನ ಮೇಲೆ ಮಾತ್ರ ಅದರ ಭಾರವನ್ನು ಹೇರ ಬಯಸುವ 'ಗಂಡು' ಸಮಾಜವನ್ನು ಹಿಂಜರಿಕೆಯಿಲ್ಲದೆ ಎದುರಿಸುವ ಹೆಣ್ಣಿನ ಕಥೆ ಇದು. ಪುರಾಣ ಪ್ರಸಿದ್ಧ ವ್ಯಕ್ತಿಯಾದ ಗೌತಮನ ಪತ್ನಿ ಎಂದು ಕರೆಸಿಕೊಳ್ಳುವ ಅಹಲ್ಯೆಯೇ ಈ ಕಾದಂಬರಿಯ ನಾಯಕಿ. ಪುರಾಣದ ಅಹಲ್ಯಳಿಗೂ ಈ ಕಾದಂಬರಿಯ ಅಹಲ್ಯಳಿಗೂ ಸಾಕಷ್ಟು ಅಂತರವನ್ನು ನಾವು ಇಲ್ಲಿ ಗಮನಿಸಬಹುದು. ಇಂದ್ರನ ಕುಟಿಲತೆಯಿಂದಾದ ಕೃತ್ಯದಿಂದಾಗಿ ಗೌತಮಮುನಿಯಿಂದ ಶಪಿತಳಾಗುವ ಅಹಲ್ಯೆ ಪುರಾಣದಲ್ಲಿ ಕಂಡು ಬಂದರೆ ಸಂಸಾರ ಸಾರದ ಜೀವರಸವಾದ ಗಂಡ ಹೆಂಡಿರ ಸಾಮಿಪ್ಯ ಹಾಗೂ ದೈಹಿಕ ಸಂಬಂಧವೆಂಬುದು ಮರೀಚಿಕೆಯಾದಾಗ ತಾನೇ ಇಂದ್ರನೊಂದಿಗೆ ಕೂಡುವ ಅಹಲ್ಯಳನ್ನು ನಾವಿಲ್ಲಿ ಕಾಣುತ್ತೇವೆ. ಇಲ್ಲಿ ಗೌತಮ ಪುರುಷವರ್ಗದ ದಬ್ಬಾಳಿಕೆಯನ್ನೇನು ಅಹಲ್ಯಳ ಮೇಲೆ ಮಾಡದಿದ್ದರೂ ಅವನು ತೋರುವ ಅನಾದರಣೆಯೂ ಅಹಲ್ಯ ಇಂದ್ರನೆಡೆಗೆ ಆಕರ್ಷಿತಳಾಗುವಂತೆ ಮಾಡುತ್ತದೆ. ಪರ ಪುರುಷನೊಂದಿಗಿನ ತನ್ನ ಲೈಂಗಿಕ ಬದುಕಿನ ಕುರಿತು ಯಾವುದೇ ಹಿಂಜರಿಕೆ ವ್ಯಕ್ತಪಡಿಸದ ಇವಳು ಇಂದ್ರನಿಗೆ 'ನೀನು ನನ್ನ ಗಂಡನ ವೇಷದಲ್ಲಿ

ಬರುವುದೇಕೆ, ದೇವರಾಜನ ವೇಷವೇ ನನಗೆ ಪ್ರಿಯ' (ಪುಟ ಸಂಖ್ಯೆ – 62) ಎಂದು ಹೇಳುವ ಮಾತು ತನ್ನದು ವಿವಾಹೇತರ ಸಂಬಂಧವಾಗಿದ್ದರೂ ಸಮಾಜ ಅದನ್ನು ವಿರೋಧಿಸುವ ಬಗ್ಗೆ ಖಚಿತತೆ ಇದ್ದರೂ ಯಾವುದೇ ಹಿಂಜರಿ–ಕೆಗೆ ಒಳಗಾಗದೇ ತನ್ನ ಕ್ರಿಯೆಯನ್ನು ಒಪ್ಪಿಕೊಳ್ಳುವ ನಡೆಯನ್ನು ಪ್ರತಿನಿಧಿಸುತ್ತದೆ. ಗಂಡನಿಂದ ದೊರೆಯದ ತೃಪ್ತಿಯನ್ನು ತಾನು ಮತ್ತೊಬ್ಬನಿಂದ ಪಡೆಯುತ್ತಿರುವೆ ಎಂಬುದು ತಿಳಿದಿದ್ದರೂ ಅದನ್ನು ಮುಚ್ಚಿಡುವ ಕಾರ್ಯ ಮಾಡದೇ ತನ್ನನ್ನು ನಿಯಂತ್ರಿಸುತ್ತಿದ್ದ ಏಕರೂಪ ಸೈದ್ಧಾಂತಿಕ ನೆಲೆಯಿಂದ ಹೊರಬಂದು ಬಹುತ್ವದ ಪರಿಕಲ್ಪನೆಗೆ ತನ್ನನ್ನು ಒಡ್ಡಿಕೊಂಡು ತನ್ನ ಕೃತ್ಯವನ್ನು ಸಾಮಾಜಿಕ ನಿಯಮಗಳ ಸಂಘರ್ಷದ ಜೊತೆ ಅನುಸಂಧಾನ ಮಾಡಿದ್ದು ಆಕೆಯನ್ನು ಭಿನ್ನ ಮಾದರಿಗೆ ಸೇರಿಸಿದೆ.

ಹೀಗೆ ದೈವತ್ವದ ಮಿತಿಯಲ್ಲಿದಂತಹ ಸ್ತ್ರೀಯರನ್ನು ತಮ್ಮದೇ ಆದ ವಿಭಿನ್ನ ಅಭಿವ್ಯಕ್ತಿಯ ನೆಲೆಯಲ್ಲಿ ಪ್ರಗತಿಪರ ಹಾಗೂ ಸ್ವಾವಲಂಬಿ ಆಲೋಚನೆಗಳೊಂದಿಗೆ ತಮ್ಮತನವನ್ನು ವ್ಯಕ್ತಪಡಿಸಿಕೊಳ್ಳುವಲ್ಲಿ ಆಧುನಿಕ ಕಾಲಘಟ್ಟದ ಲೇಖಕಿಂ–ಯರು ನೆರವಾಗಿದ್ದಾರೆ ಎನ್ನಬಹುದು.

■■

**ಪರಾಮರ್ಶನ**

1. ಮಾಧವಿ – ಅನುಪಮಾ ನಿರಂಜನ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು, 1976.
2. ಸೀತೆ ರಾಮ ರಾವಣ – ಎಚ್.ವಿ.ಸಾವಿತ್ರಮ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2014.
3. ಅಹಲ್ಯ, ಎಸ್ ವಿ ಪ್ರಭಾವತಿ, ಶ್ರೀ ಅನ್ನಪೂರ್ಣ ಪಬ್ಲೀಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು ಗ್ರಾಮಾಂತರ, 1999.
4. ಸೀತೆ, ಎಸ್ ವಿ ಪ್ರಭಾವತಿ, ಶ್ರೀ ಅನ್ನಪೂರ್ಣ ಪಬ್ಲೀಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು ಗಾಮಾಂತರ.
5. ವಿಮರ್ಶೆ – ಪ್ರ. ಸಂ. ಡಾ. ಮನು ಬಳಿಗಾರ್, ಸಂ. ಡಾ. ಎಂ ಎಸ್ ಆಶಾದೇವಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2020.
6. ಎಚ್ ವಿ ಸಾವಿತ್ರಮ್ಮ – ಎನ್ ಗಾಯತ್ರಿ, ಸಾಹಿತ್ಯ ಅಕಾದೆಮಿ, ನವದೆಹಲಿ, 2018